ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಅಜಿತ್ ದೋವಲ್ ಮರುನೇಮಕ

ಸತತ ಮೂರನೇ ಬಾರಿಗೆ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಅಜಿತ್ ದೋವಲ್ ಮರು ನೇಮಕಗೊಂಡಿದ್ದಾರೆ. ಜತೆಗೆ ಈ ಹಿಂದೆ ಕೂಡ ಸೇವೆ ಸಲ್ಲಿಸಿದ್ದ ಪಿ.ಕೆ.ಮಿಶ್ರಾ ಅವರನ್ನು ಮೋದಿ ಅವರ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದ್ದು ಕ್ಯಾಬಿನೆಟ್ ನೇಮಕಾತಿ ಸಮಿತಿಯು ಅನುಮೋದನೆ ನೀಡಿದೆ.

ಪೋಕ್ಸೊ ಪ್ರಕರಣದಲ್ಲಿ ಯಡಿಯೂರಪ್ಪ ವಿರುದ್ಧ ಬಂಧನ ವಾರಂಟ್
ಬೆಂಗಳೂರಿಗೆ ಬರುತ್ತಿದ್ದಂತೆ ವಶಕ್ಕೆ ಪಡೆಯಲು ಪೊಲೀಸರ ಸಿದ್ಧತೆ

ಬಿಎಸ್‌ವೈ ಬಂಧನ ಖಚಿತ?

ಬೆಂಗಳೂರು: ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಬಂಧನ ಬಹುತೇಕ ಖಚಿತವಾಗಿದೆ. ಈ ಸಂಬಂಧ ಜಾಮೀನುರಹಿತ ಬಂಧನ ವಾರಂಟ್ ಅನ್ನು ನ್ಯಾಯಾಲಯ ಹೊರಡಿಸಿರುವುದು, ಇದೀಗ ಯಡಿಯೂರಪ್ಪ ಅವರಿಗೆ ನುಂಗಲಾರದ ತುತ್ತಾಗಿದೆ. ಬಿಎಸ್‌ವೈ ಬೆಂಗಳೂರಿಗೆ ಬರುತ್ತಿದ್ದಂತೆ ಅವರನ್ನು ವಶಕ್ಕೆ ಪಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

ಯಡಿಯೂರಪ್ಪ ವಿರುದ್ಧ ಮಾರ್ಚ್ 3ರಂದು ಅಪ್ರಾಪ್ತೆಯೊಬ್ಬರು ಪೋಕ್ಸೊ ಕಾಯಿದೆಯಲ್ಲಿ ದೂರು ದಾಖಲಿಸಿದ್ದರು. ಸದಾಶಿವನಗರದಲ್ಲಿ ದೂರು ನೀಡಿದ್ದರೂ, ಬಳಿಕ ಈ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿತ್ತು. ಕಳೆದ ಮೂರು ತಿಂಗಳಿನಿಂದ ಯಾವುದೇ ಪ್ರಗತಿ ಕಂಡಿರಲಿಲ್ಲ. ಆದರೀಗ ಏಕಾಏಕಿ, ಸಿಐಡಿ ನೋಟಿಸ್ ಜಾರಿಗೊಳಿಸಿ, ನ್ಯಾಯಾಲಯದಿಂದ ಬಂಧನ ರಹಿತ ವಾರಂಟ್ ಜಾರಿ ಅನುಮತಿ ಪಡೆದಿದೆ.

ಸದ್ಯ ದೆಹಲಿಯಲ್ಲಿರುವುದಾಗಿ ಹೇಳಿಕೊಂಡಿರುವ ಯಡಿಯೂರಪ್ಪ ಅವರು, ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಈ ಹಿಂದೆ ನೋಟಿಸ್‌ಗೆ ಉತ್ತರಿಸುವಾಗ ಜೂ.17ಕ್ಕೆ ವಿಚಾರಣೆಗೆ ಹಾಜರಾಗುವುದಾಗಿ ಹೇಳಿದ್ದರು. ಆದರೀಗ ಅರೆಸ್ಟ್ ವಾರಂಟ್ ಜಾರಿಯಾಗಿರುವುದರಿಂದ ಕಾನೂನು ಪ್ರಕ್ರಿಯೆ ಪೂರ್ಣಗೊಳ್ಳುವ ತನಕ ತಲೆಮರೆಸಿಕೊಳ್ಳುವ ಸಾಧ್ಯತೆಯಿದೆ ಎನ್ನಲಾಗಿದೆ. → 4



- ದೆಹಲಿಯಲ್ಲಿಯೇ ಬೀಡುಬಿಟ್ಟಿರುವ ಮಾಜಿ ಮುಖ್ಯಮಂತ್ರಿ
- ಯಡಿಯೂರಪ್ಪ ಬಂಧನಕ್ಕೆ ಪಕ್ಷದಲ್ಲಿಯೇ ಪರ-ವಿರೋಧ
- ಇಂದು ನಿರೀಕ್ಷಣಾ ಜಾಮೀನಿನ ಅರ್ಜಿ ವಿಚಾರಣೆ
- ಅರ್ಜಿ ವಜಾಗೊಂಡರೆ ಬಿಎಸ್‌ವೈ ಬಂಧನ ಖಚಿತ

ಎಫ್‌ಎಸ್‌ಎಲ್ ವರದಿ; ಬಿಎಸ್‌ವೈಗೆ ಸಂಕಷ್ಟ

ಅಪ್ರಾಪ್ತೆಯ ದೂರಿನ ಆಧಾರದಲ್ಲಿ ವಿಚಾರಣೆ ನಡೆಸಿರುವ ಸಿಐಡಿ ಅಧಿಕಾರಿಗಳು ವಿಡಿಯೊಗಳನ್ನು ವಶಪಡಿಸಿಕೊಂಡು ಪರಿಶೀಲಿಸಿದ್ದರು. ವಿಡಿಯೊದಲ್ಲಿರುವ ಆಡಿಯೊ ಯಡಿಯೂರಪ್ಪ ಅವರದ್ದಾ ಎನ್ನುವ ಬಗ್ಗೆ ಖಚಿತಪಡಿಸಿಕೊಳ್ಳಲು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿತ್ತು. ಇದೀಗ ವಿಡಿಯೊದಲ್ಲಿರುವ ಧ್ವನಿ ಯಡಿಯೂರಪ್ಪ ಅವರದ್ದೇ ಎನ್ನುವುದು ಖಚಿತವಾಗಿರುವುದರಿಂದ ಬಿಎಸ್‌ವೈ ಅವರಿಗೆ ಇನ್ನಷ್ಟು ಸಂಕಷ್ಟ ಎದುರಾಗಿದೆ.

ವಿಳಂಬಕ್ಕೆ ಕೈ ವರಿಷ್ಠರ ಆಕ್ಷೇಪ

ಯಡಿಯೂರಪ್ಪ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿ ಮೂರು ತಿಂಗಳು ಕಳೆಯುತ್ತಾ ಬಂದರೂ, ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಇದೀಗ ಪಕ್ಷದ ಹೈಕಮಾಂಡ್ ನಾಯಕರೇ, ರಾಜ್ಯ ಸರಕಾರದ ಈ ವಿಳಂಬ ಧೋರಣೆಗೆ ಆಕ್ಷೇಪ ವ್ಯಕ್ತಪಡಿಸಿದ್ದು, ಕೂಡಲೇ ಕ್ರಮವಹಿಸುವಂತೆ ಸೂಚನೆ ನೀಡಿದ್ದರು. ಇದರ ಬೆನ್ನಲ್ಲೇ ಸಿಐಡಿ ನೋಟಿಸ್ ಜಾರಿಗೊಳಿಸಿ, ಗೈರೆಂದು ತೋರಿಸಿ ಬಂಧನ ವಾರಂಟ್ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ನಾಯಕರ ವಿರೋಧ: ಇತ್ತ ರಾಜ್ಯ ಕಾಂಗ್ರೆಸ್ ನಾಯಕರು ಈ ನಡೆಯನ್ನು ವಿರೋಧಿಸಿದ್ದಾರೆ. ಯಡಿಯೂರಪ್ಪ ವಿರುದ್ಧ ಕೇಳಿಬಂದಿರುವ ಪ್ರಕರಣದಲ್ಲಿ ಸಂತ್ರಸ್ತೆಯ ವಿರುದ್ಧ ಅನೇಕರ ಆರೋಪಗಳಿವೆ. ಹೀಗಿರುವಾಗ ಈ ಪ್ರಕರಣದಲ್ಲಿ ಯಡಿಯೂರಪ್ಪ ಬಂಧನವಾದರೆ, ಪಕ್ಷಕ್ಕೆ ಡ್ಯಾಮೇಜ್ ಆಗಲಿದೆ. ಇದರೊಂದಿಗೆ ಮುಂಬರಲಿರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿಯೂ ಪಕ್ಷಕ್ಕೆ ಹಿನ್ನಡೆಯಾಗುವ ಸಾಧ್ಯತೆಯಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹೇಳಿದ್ದನ್ನೇ ಹೇಳುತ್ತಿರುವ ದಾಸ

ಕೊಂದವ ನಾನಲ್ಲ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಬಂಧಿತನಾ ಗಿರುವ ದರ್ಶನ್ ಬಂಧನವಾಗಿ ಮೂರು ದಿನ ಕಳೆದರೂ, 'ಕೊಂದವ ನಾನಲ್ಲ' ಎಂದು ಪೊಲೀಸರ ಮುಂದೆ ಪದೇ ಪದೇ ಹೇಳುತ್ತಿದ್ದಾನೆ ಎಂದು ಎಂಬ ಮಾಹಿತಿ ಲಭ್ಯವಾಗಿದೆ.

ಖಳ ನಾಯಕ

ಪೊಲೀಸ್ ಕಸ್ಟಡಿಯಲ್ಲಿರುವ ದರ್ಶನ್, ಪವಿತ್ರಾ ಗೌಡಗೆ ಅಶ್ಲೀಲ ಸಂದೇಶ ರವಾನಿಸಿದ್ದ ರೇಣುಕಾಸ್ವಾಮಿ ಅವರನ್ನು ಒದ್ದಿದ್ದಾಗಿ ಒಪ್ಪಿಕೊಂಡಿದ್ದಾರೆ. ಆದರೆ ಕೊಲೆ ಮಾಡಿಲ್ಲ. ಒದ್ದ ಬಳಿಕ ದುಡ್ಡುಕೊಟ್ಟು ಕಳುಹಿಸುವಂತೆ ಹೇಳಿದ್ದೆ. ಆದರೆ ಕೊಲೆ ಮಾಡಿದ್ದು ಯಾರೆನ್ನುವುದು ಗೊತ್ತಿಲ್ಲ ಎನ್ನುತ್ತಿದ್ದಾನೆ. ಆದರೆ ಈ ಹೇಳಿಕೆಯನ್ನು ಹೊರತುಪಡಿಸಿ, ಇನ್ಯಾವ ವಿಷಯವನ್ನೂ ಬಾಯಿ ಬಿಡುತ್ತಿಲ್ಲ ಎನ್ನಲಾಗಿದೆ.

ದರ್ಶನ್ ಗ್ಯಾಂಗ್‌ನ ಏಟಿನಿಂದ ನೆಲದಲ್ಲಿ ಬಿದ್ದಿದ್ದ ರೇಣುಕಾ ಸ್ವಾಮಿ ತಪ್ಪಾಯಿತು ಎಂದು ದರ್ಶನ್ ಕಾಲು ಹಿಡಿಯಲು ಹೋಗಿದ್ದಾಗ, ದರ್ಶನ್ ಮುಖದ ಮೇಲೆಯೂ ಒದ್ದಿದ್ದರು. ಒದ್ದ ರಭಸಕ್ಕೆ ರೇಣುಕಾ ಸ್ವಾಮಿಯ ತಲೆ ಗೋಡೌನ್‌ನಲ್ಲಿ ನಿಲ್ಲಿಸಿದ್ದ ಟೆಂಪೊಗೆ ತಗುಲಿತ್ತು ಎನ್ನಲಾಗಿದೆ. → 4

- ದರ್ಶನ್ ಕೊಲೆ ಪ್ರಕರಣದಲ್ಲಿ ಯಾರೂ ಒತ್ತಡ ಹೇರದಂತೆ ಸಿಎಂ ಸಿದ್ದರಾಮಯ್ಯ ಸೂಚನೆ
- ಇಂದು ಚಲನಚಿತ್ರ ವಾಣಿಜ್ಯ ಮಂಡಳಿ ನಿಯೋಗದಿಂದ ರೇಣುಕಾಸ್ವಾಮಿ ನಿವಾಸಕ್ಕೆ ಭೇಟಿ
- ಪ್ರಕರಣ ನಿರ್ಣಾಯಕ ಹಂತದಲ್ಲಿರುವಾಗಲೇ ತನಿಖಾಧಿಕಾರಿ ಬದಲಾವಣೆ; ಭಾರಿ ಚರ್ಚೆ
- ಪೊಲೀಸ್ ಠಾಣೆಯ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿದ ಬೆಂಗಳೂರು ಪೊಲೀಸ್ ಆಯುಕ್ತ

ಪುಟ ತೆರೆದಂತೆ...

ತರುವಿಗಿಂತ ಲತೆಯ ವಿಕಸನ ಹೆಚ್ಚು ನಿಗೂಢ!
ಶಿಶಿರ ಕಾಲ
ಶಿಶಿರ್ ಹೆಗಡೆ
ಸಂ.ಪುಟ | 6

ನಮ್ಮ ರಾಜ್ಯದಲ್ಲಿ ಒಂದು ಹಸಿರು ಪ್ರವಾಸಿ ಮಾರ್ಗ!
ಶಶಾಂಕಣ
ಶಶಿಧರ ಹಾಲಾಡಿ

ಸಂ.ಗಮ | 7

ಪುರಿ ಜಗನ್ನಾಥ ದೇಗುಲದ ನಾಲ್ಕೂ ದ್ವಾರ ಭಕ್ತರಿಗೆ ಮುಕ್ತ

ವಿವರಪುಟ → 8

ದಾರಿದೀಪೋಕ್ತಿ

ನೀವು ನಿಮ್ಮ ಜೀವನದಲ್ಲಿ ಎಷ್ಟು ಸಾಧಿಸುತ್ತೀರಿ ಎಂಬುದು ಮುಖ್ಯ. ಅದಕ್ಕಿಂತ ಮುಖ್ಯವಾದುದು ಅಷ್ಟೆಲ್ಲಾ ಸಾಧನೆ ಮಾಡಿದ ಬಳಿಕ ನೀವು ಎಷ್ಟು ಸಂತಸ ಮತ್ತು ನೆಮ್ಮದಿಯಿಂದ ಇದ್ದೀರಿ ಎಂಬುದು. ನಿಮ್ಮ ಸಾಧನೆ ನಿಮಗೆ ಸಂತಸ ತರದಿದ್ದರೆ ಅದರಿಂದ ಏನು ಪ್ರಯೋಜನ?

ವಕ್ರತುಂಡೋಕ್ತಿ

ನಮ್ಮನ್ನು ನಾವೇ ಚಿವುಟಿಕೊಳ್ಳಬೇಕು, ಅದೂ ಗಣ್ಯರ ಮುಂದೆ ಕುಳಿತಿದ್ದಾಗ ಆಕಳಿಸಿದಾಗ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕನ್ನಡ ಸಿನಿಮಾ "ಕೋಟಿ" ಬಿಡುಗಡೆ



11,563 ವಿದ್ಯಾರ್ಥಿಗಳ ಕೃಪಾಂಕ ರದ್ದು

ನೀಟ್: ಮರು ಪರೀಕ್ಷೆ

ದೆಹಲಿ: ನೀಟ್ ಪರೀಕ್ಷೆ ಫಲಿತಾಂಶದ ವಿವಾದಕ್ಕೆ ಸಂಬಂಧಿಸಿದಂತೆ ಫರೀದಾಬಾದ್ ಕೇಂದ್ರದ 1,563 ವಿದ್ಯಾರ್ಥಿಗಳಿಗೆ ನೀಡಲಾದ ಕೃಪಾಂಕ ರದ್ದುಗೊಳಿಸಿ, ಆ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುವುದು ಎಂದು ಕೇಂದ್ರವು ಸುಪ್ರೀಂಗೆ ತಿಳಿಸಿದೆ. ಜೂ.23 ರಂದು ಮರು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗುವುದು. ಒಂದು ವೇಳೆ ಈ ವಿದ್ಯಾರ್ಥಿಗಳು ಮರು ಪರೀಕ್ಷೆ ತೆಗೆದುಕೊಳ್ಳಲು ಬಯಸದಿದ್ದರೆ, ಈ ಹಿಂದೆ ನಡೆದ ಪರೀಕ್ಷೆಯಲ್ಲಿ (ಕೃಪಾಂಕ ಬಿಟ್ಟು) ಪಡೆದ ಅಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದೆ.

- ಜೂ.23ಕ್ಕೆ ಮರು ಪರೀಕ್ಷೆ
- 30ಕ್ಕೆ ಫಲಿತಾಂಶ ಪ್ರಕಟ

ಪ್ರಧಾನಿ ಮೋದಿ ಉನ್ನತ ಮಟ್ಟದ ಸಭೆ

ಉಗ್ರರನ್ನು ನಿರ್ನಾಮ ಮಾಡಿ

ದೆಹಲಿ: ಜಮ್ಮು-ಕಾಶ್ಮೀರದಲ್ಲಿ ಇತ್ತೀಚೆಗೆ ಉಗ್ರರ ದಾಳಿಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಜಮ್ಮು-ಕಾಶ್ಮೀರ ಲೆ.ಗವರ್ನರ್ ಮನೋಜ್ ಸಿನ್ಹಾ ಸೇರಿ ಹಲವರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದ್ದು, ಕಾಶ್ಮೀರದಲ್ಲಿ ಉಗ್ರರ ನಿರ್ನಾಮಕ್ಕೆ ಸೂಚಿಸಿದ್ದಾರೆ. ಕಣಿವೆಯಲ್ಲಿ ಶಾಂತಿ ಸ್ಥಾಪನೆಯಾಗಬೇಕು. ಉಗ್ರರ ದಾಳಿಗಳನ್ನು ನಿಗ್ರಹಿಸಬೇಕು. ಗಡಿಯುದ್ದಕ್ಕೂ ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಬೇಕು. ಸೂಕ್ಷ್ಮ ನೆಲೆಗಳಲ್ಲಿ ಹೆಚ್ಚಿನ ಭದ್ರತೆ ಕೈಗೊಳ್ಳಬೇಕು ಎಂದು ಸೂಚಿಸಿದರು.

- ನಾಲ್ಕು ದಿನಗಳಲ್ಲಿ 4 ಕಡೆ ಉಗ್ರರ ದಾಳಿ
- ಒಬ್ಬ ಯೋಧ, 10 ಯಾತ್ರಿಕರು ಸಾವು

35 ಜಿಲ್ಲೆಗಳಲ್ಲಿ 700ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಪರೀಕ್ಷೆ

ಎಸ್ಸೆಸ್ಸೆಲ್ಸಿ ಪರೀಕ್ಷೆ-2 ಇಂದಿನಿಂದ

ಬೆಂಗಳೂರು: 2024ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ -2 ಜೂನ್ 14 ರಿಂದ ಶುರುವಾಗಲಿದೆ. ಈ ಮೊದಲು ಜೂನ್ 7ಕ್ಕೆ ನಡೆಸಲು ಯೋಜಿಸಲಾಗಿತ್ತು. ಬಳಿಕ ಜೂನ್ 14 ರಿಂದ 22ರವರೆಗೆ ಪರೀಕ್ಷೆ ನಡೆಯಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸುತ್ತೋಲೆ ಹೊರಡಿಸಿತ್ತು. ಸುಮಾರು 2,23,308 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ 1,44,160 ಬಾಲಕರು ಹಾಗೂ 79,148 ಬಾಲಕಿಯರು ಇದ್ದಾರೆ. ಒಟ್ಟು ನೋಂದಣಿಯಲ್ಲಿ ಫಲಿತಾಂಶ ವೃದ್ಧಿಗೆ 13,085 ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಂಡಿದ್ದಾರೆ.

- 2,23,308 ವಿದ್ಯಾರ್ಥಿಗಳು
- ಪ್ರತಿ ಕೇಂದ್ರದಲ್ಲೂ ಸಿಸಿಟಿವಿ ನಿಗಾ

ಬಂಪರ್ ಪಗಾರಗೆ ಟೆಸ್ಲಾ ಷೇರುದಾರರು ಒಪ್ಪಿಗೆ

ಮಸ್ಕ್‌ಗೆ 4.68 ಲ.ಕೋಟಿ ವೇತನ

ಸ್ಯಾನ್‌ಫ್ರಾನ್ಸಿಸ್ಕೋ: ಅಮೆರಿಕದ ಖ್ಯಾತ ಎಲೆಕ್ಟ್ರಿಕ್ ಕಾರು ಕಂಪನಿ ಟೆಸ್ಲಾದ ಷೇರುದಾರರು ತಮ್ಮ ಸಿಇಒ ಎಲಾನ್ ಮಸ್ಕ್‌ಗೆ ಬರೋಬ್ಬರಿ 56 ಬಿಲಿಯನ್ ಡಾಲರ್ ವೇತನ ನೀಡಲು ಅನುಮೋದನೆ ನೀಡಿದ್ದಾರೆ. ಈ ಹಿಂದೆ ವರ್ಷದ ಆರಂಭದಲ್ಲಿ ಡೆಲವೇರ್ ನ್ಯಾಯಾಧೀಶರು ಸುಮಾರು 4.68 ಲಕ್ಷ ಕೋಟಿ ರು. ಮೊತ್ತದ ಈ ಪ್ಯಾಕೇಜ್‌ಅನ್ನು ಅಮಾನ್ಯ ಗೊಳಿಸಿ ದ್ದರು. ಇದಕ್ಕೀಗ ಷೇರುದಾರರು ಒಪ್ಪಿಗೆ ನೀಡಿದ್ದು, ಅಮೆರಿಕದ ಉದ್ಯಮ ಇತಿಹಾಸದಲ್ಲೇ ದಾಖಲೆ ಮೊತ್ತದ ವೇತನ ಮಸ್ಕ್ ಪಡೆಯಲಿದ್ದಾರೆ.

- ಇತಿಹಾಸದಲ್ಲೇ ದಾಖಲೆ ವೇತನ
- ಮಸ್ಕ್ ಭವಿಷ್ಯದ ಅನಿಶ್ಚಿತತೆ ನಿವಾರಣೆ

ದೌರ್ಜನ್ಯಕ್ಕೊಳಗಾದ ಮಕ್ಕಳ ಗುರುತು ಬಹಿರಂಗಪಡಿಸುವಂತಿಲ್ಲ

ಕಾರವಾರ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015. ತಿದ್ದುಪಡಿ ಕಾಯ್ದೆ 2021, ಹಾಗೂ ಮಾದರಿ ನಿಯಮ 2016, ತಿದ್ದುಪಡಿ ನಿಯಮಗಳು 2022. ಸೆಕ್ಷನ್ 74(1) 2012, 23(4)ರ ಪ್ರಕಾರ ಯಾವುದೇ ವೃತ್ತ ಪತ್ರಿಕೆಯಲ್ಲಿ ನಿಯತಕಾಲಿಕವಾಗಲಿ ಅಥವಾ ದೃಶ್ಯ ಶ್ರವಣ ಮಾಧ್ಯಮಗಳಲ್ಲಿ ಅಥವಾ ಸಾಮಾಜಿಕ ಜಾಲ ತಾಣಗಳಲ್ಲಿ ಅಥವಾ ಸಂವಹನದ ಇನ್ನಿತರ ವಿಧಗಳಲ್ಲಿ ಯಾವುದೇ ವಿಚಾರಣೆ ಅಥವಾ ತನಿಖೆ ಅಥವಾ ನ್ಯಾಯಿಕ ನಡವಳಿಗಳ ಕುರಿತಂತೆ ಕಾಯ್ದೆಯೊಂದಿಗೆ ಸಂಘರ್ಷದಲ್ಲಿರುವಂತಹ ಮಗುವಿನ ಅಥವಾ ಪಾಲನೆ ಮತ್ತು ಸಂರಕ್ಷಣೆಯ ಅಗತ್ಯವಿರುವಂತಹ ಮಗುವಿನ ಅಥವಾ ಸಂತ್ರಸ್ಥ ಮಗುವಿನ ಅಥವಾ ಯಾವುದೇ ಅಪರಾದಧ ಸಂಬಂಧ ಸಾಕ್ಷಿಯಾಗಿರುವಂತಹ ಮಗುವಿನ ಗುರುತನ್ನು ತಿಳಿಸಬಹುದಾದ ಹೆಸರು/ವಿಳಾಸ/ಶಾಲೆ/ಇನ್ನಿತರ ವಿವರಗಳು ಅಥವಾ ಮಗುವಿನ ಭಾವಚಿತ್ರವನ್ನು ಪ್ರಕಟಿಸುವಂತಿಲ್ಲ. ಒಂದು ವೇಳೆ ಪ್ರಕಟವಾದಲ್ಲಿ, ಪ್ರಕಟಿಪಡಿಸಿದವರ ವಿರುದ್ಧ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015, ತಿದ್ದುಪಡಿ ಕಾಯ್ದೆ 2021, ಹಾಗೂ ಮಾದರಿ ನಿಯಮ 2016. ತಿದ್ದುಪಡಿ ನಿಯಮಗಳು 2022, ಸೆಕ್ಷನ್ 74(3) ಉಪಪ್ರಕರಣ (1) ನ್ನು ಉಲ್ಲಂಘಿಸುವಂತಹ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಲ್ಪಡಬಹುದಾದ ಕಾರಾಗೃಹ ದಂಡನೆ ಅಥವಾ 2 ಲಕ್ಷ ರೂ ವಿಸ್ತರಿಸಲ್ಪಡಬಹುದಾದ ಜುಲ್ಮಾನೆ ಅಥವಾ ಉಭಯ ಶಿಕ್ಷೆಗಳಿಗೂ ಸಹ ದಂಡನೀಯವಾಗಿದೆ.

ಗೋಕರ್ಣದ ಶ್ರೀಮಹಾಬಲೇಶ್ವರ ದೇವಸ್ಥಾನದ ಮೇಲುಸ್ತುವಾರಿ ಸಮಿತಿ ವತಿಯಿಂದ ಗೋಕರ್ಣದಲ್ಲಿ ಗುರುವಾರ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಸನ್ಮಾನಿಸಲಾಯಿತು.

ಉಚಿತ ಯೋಗ ತರಬೇತಿ ಶಿಬಿರ ಜೂ. 17ರಿಂದ

ಅಂಕೋಲಾ: ಪತಂಜಲಿ ಯೋಗ ಸಮಿತಿ ಮತ್ತು ಭಾರತ ಸ್ವಾಭಿಮಾನ ಟ್ರಸ್ಟ್, ಅಂಕೋಲಾ ಕಿಸಾನ್ ಯೋಗ ಸಮಿತಿ, ಪತಂಜಲಿ ಮಹಿಳಾ ಸಮಿತಿ, ಯುವ ಭಾರತ ಹಾಗೂ ಲಯನ್ಸ್ ಕ್ಲಬ್ ಅಂಕೋಲಾ ಸಿಟಿ ಇವರ ಸಂಯುಕ್ತ ಆಶ್ರಯದಲ್ಲಿ 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಜೂ.17 ರಿಂದ ಉಚಿತ ಯೋಗ ತರಬೇತಿ ಶಿಬಿರ ಆರಂಭಗೊಳ್ಳಲಿದೆ ಎಂದು ಪತಂಜಲಿ ಯೋಗ ಸಮಿತಿಯ ತಾಲೂಕು ಪ್ರಭಾರಿ ವಿನಾಯಕ ಗುಡಿಗಾರ ಹೇಳಿದರು. ಅವರು ಪಟ್ಟಣದ ಗಣಪತಿ ದೇವಸ್ಥಾನದ ಸಭಾಭವನದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಡೆಯಲಿರುವ ಯೋಗ ಶಿಬಿರದಲ್ಲಿ ಯೋಗ ಭಾಷಣ ಸ್ಪರ್ಧೆ, ಯೋಗ ನೃತ್ಯ ಸ್ಪರ್ಧೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಜೂನ್ 16 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಹೆಚ್ಚಿನ ಮಾಹಿತಿಗಾಗಿ ಯೋಗ ಶಿಬಿರಕ್ಕೆ ಪ್ರವೇಶ ಪಡೆಯಲು ಮೊ.ನಂ. 9964555547, 8123189499, 9986193489, 9482123762, 9845710314 ಇವರನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷಡಾ. ವಿಜಯದೀಪ, ಪತಂಜಲಿ ಯೋಗ ಸಮಿತಿಯ ಮಹಿಳಾ ಪ್ರಭಾರಿ ಜ್ಯೋತ್ಸ್ನಾ ನಾರ್ವೇಕರ, ಸಮಿತಿಯ ಸತೀಶ ನಾಯ್ಕ, ರಾಧಿಕಾ ಆಚಾರಿ, ಅಭಯ ಮರಬಳ್ಳಿ, ಕಾರ್ಯದರ್ಶಿ ವಿ. ಕೆ ನಾಯರ, ಖಜಾಂಚಿ ಶ್ರೀನಿವಾಸ ಶೆಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಭಟ್ಕಳದಲ್ಲಿ 17ರಂದು ಮದ್ಯ ಮಾರಾಟ ನಿಷೇಧ

ಕಾರವಾರ: ಬಕ್ರೀದ್ ಹಬ್ಬದ ಪ್ರಯುಕ್ತ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜೂನ್ 17 ರಂದು ಬೆಳಗ್ಗೆ 5 ಗಂಟೆಯಿಂದ ಜೂನ್ 18 ರ ರಾತ್ರಿ 12 ಗಂಟೆಯವರೆಗೆ ಭಟ್ಕಳ ಶಹರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಎಲ್ಲಾ ರೀತಿಯ ಬಾರ್, ವೈನ್ ಶಾಪ್ ಹಾಗೂ ಮದ್ಯದ ಅಂಗಡಿಗಳಲ್ಲಿ ಎಲ್ಲಾ ರೀತಿಯ ಮದ್ಯ ಮಾರಾಟ ಹಾಗೂ ಸಾಗಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ಆದೇಶಿಸಿದ್ದಾರೆ.

ಜಾನುವಾರು ಸಾಗಾಟ: ಪ್ರಕರಣ ದಾಖಲು

ಸಿದ್ದಾಪುರ: ಬುಧವಾರ ಸಂಜೆ ತಾಲೂಕಿನ ಮಾವಿನಗುಂಡಿ ಚೆಕ್ ಪೋಸ್ಟ್‌ನಲ್ಲಿ ವಾಹನ ತಪಾಸಣೆ ಮಾಡುವಾಗ, ಯಾವುದೆ ಪರವಾನಿಗೆ ಇಲ್ಲದೆ, ವಧೆ ಮಾಡುವ ಉದ್ದೇಶದಿಂದ ಬುಲೆರೋ ಪಿಕಪ್ (ಕೆಎ11 ಎ9805) ವಾಹನದಲ್ಲಿ ಜಾನುವಾರ ಸಾಗಾಟ ಮಾಡುತ್ತಿದ್ದ ಇಬ್ಬರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕೇಶವ್ ಮತ್ತು ಮಹೇಶ್ ಎಂಬುವವರ ಮೇಲೆ ಪ್ರಕರಣ ದಾಖಲಾಗಿರುತ್ತದೆ.

ವರ್ಲ್ಡ್‌ಬುಕ್ ರೆಕಾರ್ಡ್‌ಗೆ ಮಹೇಶ ಆಚಾರಿ ಸೇರ್ಪಡೆ

ಕುಮಟಾ: ನೆಲ್ಲಿಕೇರಿಯ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಚಿತ್ರಕಲಾ ಶಿಕ್ಷಕ ಮಹೇಶ ಎನ್. ಆಚಾರಿ ಅವರು ಆರ್ಟ ಮತ್ತು ಪೇಂಟಿಂಗ್ ವಿಭಾಗದಲ್ಲಿ ವರ್ಲ್ಡ್‌ಬುಕ್ ರೆಕಾರ್ಡಗೆ ಸೇರ್ಪಡೆಯಾಗುವ ಮೂಲಕ ಸಾಧನೆ ಮಾಡಿದ್ದಾರೆ. ಇತ್ತೀಚೆಗೆ ಆರ್ಟ್ ಮತ್ತು ಪೇಂಟಿಂಗ್ ವಿಭಾಗದಲ್ಲಿ ವರ್ಲ್ಡ್ ಬುಕ್ ರೆಕಾರ್ಡ್‌ಗೆ ಭಾರತದಿಂದ ಆನ್‌ಲೈನ್ ಮುಖಾಂತರ ನಾಮಿನೇಟ್ ಆಗಿದ್ದ ಇವರು ನಂತರ ಆನ್‌ಲೈನ್‌ನಲ್ಲಿ ನೀಡಿದ ಟಾಸ್ಕನಲ್ಲಿ 5 ತಾಸುಗಳಲ್ಲಿ 50 ಮಾದರಿಯ ಚಿತ್ರವನ್ನು ರಚಿಸಿ ಅತ್ಯತ್ತಮ ಕಲಾ ಸಾಧಕಗಾಗಿ ಗುರುತಿಸಲ್ಪಟ್ಟಿದ್ದರು. ಚಿತ್ರಕಲಾ ಶಿಕ್ಷಕ ಮಹೇಶ ನಾಗಪ್ಪ ಆಚಾರಿ ಇವರ ಹೆಸರು ವಿಶ್ವ ದಾಖಲೆ ಪುಸ್ತಕದಲ್ಲಿ ಸೇರುವ ಜೊತೆಗೆ ಇವರ ಸಾಧನೆಗೆ ಚಿನ್ನದ ಪದಕವೂ ಪ್ರಾಪ್ತವಾಗಿದೆ.

ಗ್ರಾಹಕರ ಕುಂದು, ಕೊರತೆ ಸಭೆ

ಶಿರಸಿ: ತಾಲೂಕಿನ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆಯನ್ನು ಪ್ರತಿ ತಿಂಗಳ 3ನೇ ಶನಿವಾರ ಹಮ್ಮಿಕೊಳ್ಳಲು ನಿಗಮ ಕಚೇರಿಯಿಂದ ಆದೇಶಿಸಿದ್ದು, ಅದರಂತೆ ಜೂ. 15 ಶನಿವಾರ ಮಧ್ಯಾಹ್ನ 3 ರಿಂದ ಸಾಯಂಕಾಲ 5 ಗಂಟೆಯವರೆಗೆ ಗ್ರಾಹಕರ ಕುಂದು ಕೊರತೆ'' ಸಭೆಯನ್ನು ಹೆಸ್ಕಾಂ ಕಚೇರಿಯಲ್ಲಿ ನಡೆಸಲಾಗುವುದು. ಸಾರ್ವಜನಿಕರು ಗ್ರಾಹಕರ ಕುಂದು ಕೊರತೆ ಸಭೆಯಲ್ಲಿ ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಚರ್ಚಿಸಲು ಸಭೆಗೆ ಹಾಜರಾಗಲು ಕೋರಲಾಗಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಕಾರ್ಯ ಪಾಲನಾ ಉಪ ವಿಭಾಗ, ಹೆಸ್ಕಾಂ ಪ್ರಕಟಣೆ ತಿಳಿಸಿದೆ.

ಮತ್ತೆ ಆಡಳಿತಾಧಿಕಾರಿ ನೇಮಕ

ಉಚ್ಚ ನ್ಯಾಯಾಲಯದಲ್ಲಿ ಸುದೀರ್ಘ ಮೂರೂವರೆ ಘಂಟೆಗಳ ಕಾಲ ವಾದ-ಪ್ರತಿವಾದ

ಶಿರಸಿ: ಜಿಲ್ಲೆಯಲ್ಲದೇ ರಾಜ್ಯಮಟ್ಟದಲ್ಲಿ ಬಾರೀ ಕುತೂಹಲಕ್ಕೆ ಕಾರಣವಾಗಿದ್ದ ಪ್ರಸಿದ್ಧ ಸಹಕಾರಿ ಸಂಸ್ಥೆ ಟಿಎಸ್‌ಎಸ್ ನಲ್ಲಿ ಆಡಳಿತ ವಿಷಯದಲ್ಲಿ ಪುನಃ ಟ್ವಿಸ್ಟ್ ಸಿಕ್ಕಿದ್ದು, ಬೆಳಗಾವಿಯ ಜಂಟಿ ನಿಬಂಧಕರು ನೀಡಿದ ಆದೇಶಕ್ಕೆ ಧಾರವಾಡ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಕಳೆದ ಒಂದು ತಿಂಗಳಿನಿಂದ ಟಿಎಸ್‌ಎಸ್ ನಲ್ಲಿ ಆಡಳಿತ ವಿಷಯಕ್ಕೆ ಸಂಬಂಧಿಸಿ ಸಾಕಷ್ಟು ಬದಲಾವಣೆಗಳು ಆಗುತ್ತಿದೆ. 2023 ರ ಅಗಸ್ಟ್ ತಿಂಗಳಲ್ಲಿ ಟಿಎಸ್‌ಎಸ್ ನಲ್ಲಿ ನಡೆದ ಚುನಾವಣೆಗೆ ಸಂಬಂಧಿಸಿ ಷೇರು ಸದಸ್ಯ ವಿನಾಯಕ ಭಟ್ ಎಂಬುವರು ಕಾರವಾರ ಸಹಕಾರ ಇಲಾಖೆಯ ಉಪನಿಬಂಧಕರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. ಇದಕ್ಕೆ ಸಂಬಂಧಿಸಿ ಉಪ ನಿಬಂಧಕರು ಚುನಾವಣೆ ಸರಿಯಾಗಿ ನಡೆದಿಲ್ಲ. ಕಾರಣ ಹಾಲಿ ಆಡಳಿತ ಮಂಡಳಿಯನ್ನು ರದ್ದು ಮಾಡಿ ವಿಶೇಷಾಧಿಕಾರಿ ನೇಮಕ ಮಾಡಿ ಆದೇಶ ಹೊರಡಿಸಿದ್ದರು.

ಇದರಿಂದ ಟಿಎಸ್‌ಎಸ್ ನಲ್ಲಿ ಮೊದಲ ಬಾರಿಗೆ ಇಂತಹ ಘಟನೆ ಜರುಗಿತ್ತು. ಚುನಾಯಿತ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಮತ್ತು ತಂಡದವರು ಉಪ ನಿಬಂಧಕರ ಆದೇಶದ ಮೇಲೆ ಬೆಳಗಾವಿಯ ಜಂಟಿ ನಿರ್ದೇಶಕರಿಂದ ತಡೆಯಾಜ್ಞೆ ತಂದಿದ್ದರು. ಬಳಿಕ ವಿನಾಯಕ ಭಟ್ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದರು. ಇದಕ್ಕೆ ಸಂಬಂಧಿಸಿ ಗುರವಾರ ಆದೇಶ ಬಂದಿದ್ದು, ಜಂಟಿ ನಿರ್ದೇಶಕರ ಆದೇಶಕ್ಕೆ ತಡೆಯಾಜ್ಞೆ ನೀಡಲಾಗಿದೆ ಎನ್ನಲಾಗಿದೆ.

ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಪ್ರಕಾರ ಟಿಎಸ್‌ಎಸ್ ಗೆ ಪುನಃ ವಿಶೇಷಾಧಿಕಾರಿ ನೇಮಕ ಆಗಲಿದ್ದು, ಕಾರವಾರ ಉಪ ನಿಬಂಧಕರ ಆದೇಶ ಜಾರಿಯಲ್ಲಿದೆ ಎಂಬ ಮಾಹಿತಿ ಲಭ್ಯವಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಾಗಬೇಕಿದೆ.

ತಡೆಯಾಜ್ಞೆ

ಗುರುವಾರ ಸುದೀರ್ಘ ಮೂರೂವರೆ ಘಂಟೆಗಳ ಕಾಲ ವಾದ-ಪ್ರತಿವಾದಗಳನ್ನು ಆಲಿಸಿದ ಧಾರವಾಡದ ಉಚ್ಚ ನ್ಯಾಯಾಲಯ, ಬೆಳಗಾವಿ ಜೆಆರ್ ನೀಡಿದ್ದ ತಡೆಯಾಜ್ಞೆಗೆ ತಡೆ ನೀಡಿದ್ದು, ಆ ಮೂಲಕ ಉತ್ತರ ಕನ್ನಡ ಜಿಲ್ಲಾ ಡಿಆರ್ ಕೋರ್ಟ್ ನೀಡಿದ್ದ ಆದೇಶವನ್ನು ಎತ್ತಿ ಹಿಡಿದಿದೆ.

ಐಟಿ ಪರಿಶೀಲನೆ

ಟಿಎಸ್‌ಎಸ್ ನಲ್ಲಿ ಮಹತ್ತರ ಬೆಳವಣಿಗೆಯೊಂದರಲ್ಲಿ ರವೀಶ ಹೆಗಡೆ ಹಾಗೂ ಅನಿಲ್ ಮುಷ್ಠಗಿ ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಐಟಿಯವರು ಪರಿಶೀಲನೆ ನಡೆಸಿದ್ದಾರೆ ಎನ್ನಲಾಗಿದೆ. ಗುರವಾರ ಟಿಎಸ್ ಎಸ್ ಗೆ ಭೇಟಿ ನೀಡಿದ ಐಟಿ ತಂಡ ಲಾಕರ್ ಗಳನ್ನು ಪರಿಶೀಲನೆ ನಡೆಸಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಸಮಸ್ಯೆ ಪರಿಹರಿಸಲು ಯತ್ನ

ಗೋಕರ್ಣ : ನೂತನ ಸಂಸದರಾಗಿ ಆಯ್ಕೆಯಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಪ್ರಥಮಬಾರಿಗೆ ಗೋಕರ್ಣಕ್ಕೆ ಆಗಮಿಸಿದ ಸಂದರ್ಭದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಗೋಕರ್ಣ ಗ್ರಾಮ ಪಂಚಾಯತ ಸದಸ್ಯ ಸುಜಯ ಶೆಟ್ಟಿ ಮಾತನಾಡಿ, ಗೋಕರ್ಣ ರೈಲ್ವೆ ನಿಲ್ದಾಣಕ್ಕೆ ಇನ್ನೊಂದು ಪ್ಲಾಟ್‌ಫಾರ್ಮ್ ಮತ್ತು ಸ್ಕೈವಾಕರ್ ಆಗಬೇಕು. ಹಾಗೇ ಚತುಷ್ಪಥ ಕಾಮಗಾರಿ ಅಸಮರ್ಪಕವಾಗಿದ್ದು, ಯಾವ ತಾಲೂಕಿನಲ್ಲಿಯೂ ಪೂರ್ಣಗೊಳಿಸಿಲ್ಲ. ಇದರಿಂದಾಗಿ ಅಪಘಾತಗಳು ಕೂಡ ಹೆಚ್ಚುತ್ತಿದೆ. ಪುಣ್ಯಕ್ಷೇತ್ರ ಗೋಕರ್ಣಕ್ಕೆ ದೊಡ್ಡ ಮಹಾದ್ವಾರವನ್ನು ನಿರ್ಮಿಸಬೇಕು ಎಂದು ಸಂಸದರಿಗೆ ಮನವಿ ಮಾಡಿದರು.

ಹಾಗೇ ಕೆಲವು ಅಭಿವೃದ್ಧಿ ಕಾರ್ಯಗಳ ಕುರಿತು ಹಲವರು ಸಂಸದರ ಗಮನಕ್ಕೆ ತಂದರು. ಇನ್ನು ಗಂಗಾವಳಿ-ಮಂಜಗುಣಿ ನಡುವಿನ ಸೇತುವೆ ಕಾಮಗಾರಿ ಅಪೂರ್ಣವಾಗಿದ್ದು, ಅದನ್ನು ಪೂರ್ಣಗೊಳಿಸಬೇಕು. ಹಾಗೇ ಗೋಕರ್ಣ ಧಾರ್ಮಿಕ ಮತ್ತು ಪ್ರವಾಸಿ ತಾಣವಾಗಿರುವುದರಿಂದ ಪ್ರತಿದಿನ ಸಾವಿರಾರು ಜನರು ಇಲ್ಲಿಗೆ ಆಗಮಿಸುತ್ತಾರೆ. ಆದರೆ ಇಲ್ಲಿ ಮೊಬೈಲ್ ನೆಟವರ್ಕ್ ಸಮಸ್ಯೆಯಿದ್ದು, ಇದರಿಂದಾಗಿ ಸಮಸ್ಯೆ ಉಂಟಾಗುತ್ತಿದೆ. ಇದರ ಬಗ್ಗೆಯೂ ಕೂಡ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಮನವಿ ಮಾಡಿಕೊಂಡರು.

ವಿಶ್ವೇಶ್ವರ ಹೆಗಡೆ ಕಾಗೇರಿ ಮಾಧ್ಯಮದವರೊಂದಿಗೆ ಮಾತನಾಡಿ, ಚತುಷ್ಪಥ ಕಾಮಗಾರಿ ಸೇರಿದಂತೆ ಇಲ್ಲಿಯ ಹಲವು ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಯಾವುದೇ ನಿರ್ಲಕ್ಷ್ಯ ಧೋರಣೆ ಮಾಡದೇ ಜನರ ವಿಶ್ವಾಸಗಳಿಸಲು ಪ್ರಯತ್ನಿಸುತ್ತೇನೆ. ಇಡೀ ಕ್ಷೇತ್ರವನ್ನು ಸುತ್ತಾಡಿ ಎಲ್ಲ ಸಮಸ್ಯೆಗಳನ್ನು ಅರಿತುಕೊಳ್ಳಲಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ, ಮಾಜಿ ಜಿಲ್ಲಾಧ್ಯಕ್ಷ ವೆಂಕಟೇಶ ನಾಯಕ, ಗೋಕರ್ಣ ಗ್ರಾ.ಪಂ.ಅಧ್ಯಕ್ಷೆ ಸುಮನಾ ಗೌಡ, ಪಕ್ಷದ ಪ್ರಮುಖರಾದ ಹೇಮಂತ ಗಾಂವಕರ, ಪ್ರಶಾಂತ ನಾಯ್ಕ, ಶ್ರೀನಿವಾಸ ನಾಯಕ, ವಸಂತ ಶೆಟ್ಟಿ, ಮಹೇಶ ಶೆಟ್ಟಿ, ಗಣಪತಿ ನಾಯ್ಕ, ಕುಮಾರ ದೀವಟಗಿ, ಭಾರತಿ ದೇವತೆ, ಮಂಜುನಾಥ ಜನ್ನು, ಶಂಕರ ಗೌಡ ಹೆಗ್ರೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗೆ ಒತ್ತು ನೀಡಿ

ಉಪಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ವಸಂತ ರೆಡ್ಡಿ ಸಲಹೆ

ಕಾರವಾರ: ಜಿಲ್ಲೆಯಲ್ಲಿ ಸಂಪದ್ಭರಿತವಾದ ಅರಣ್ಯ, ಪ್ರವಾಸಿ ತಾಣಗಳನ್ನು ಸಮರ್ಪಕವಾಗಿ ಬಳಸಿಕೊಂಡು, ಅರಣ್ಯ ಮತ್ತು ಕಾಡು ಪ್ರಾಣಿಗಳಿಗೆ ಧಕ್ಕೆಯಾಗದಂತೆ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗೆ ಮುಂದಾಗಬೇಕು ಎಂದು ಶಿರಸಿ, ಕೆನರಾ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ ಹೇಳಿದರು.

ಅವರು ಗುರುವಾರ ಸಾಮಾಜಿಕ ಅರಣ್ಯವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಲ್ಲಿ, ಅರಣ್ಯ ಇಲಾಖೆ ಹಾಗೂ ಪಂಚಾಯತ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳ ನಡುವೆ ಸಮನ್ವಯತೆಯನ್ನು ಸಾಧಿಸಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜಂಟಿ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಸಂವಾದದಲ್ಲಿ ಅವರು ಮಾತನಾಡಿದರು.

ಆಯಾ ಪ್ರದೇಶಕ್ಕೆ ಅನುಗುಣವಾಗಿ ಪ್ರತಿ ತಾಲೂಕಿಗೆ ಒಂದರಂತೆ ಪರಿಸರ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಯೋಜನೆ ರೂಪಿಸಿ, ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಅರಣ್ಯ ಪ್ರದೇಶದಲ್ಲಿ ನೆಡುತೋಪು, ಇಂಗು ಗುಂಡಿ ನಿರ್ಮಾಣಕ್ಕೆ ಮಾತ್ರ ಸೀಮಿತವಾಗದೇ ಅರಣ್ಯ, ವನ್ಯಜೀವಿ ಮತ್ತು ಪರಿಸರ ಪ್ರವಾಸೋದ್ಯಮ ಆಧಾರಿತ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಸ್ಥಳೀಯರಿಗೆ ಮನರೇಗಾ ಯೋಜನೆ ಅಡಿ ಉದ್ಯೋಗ ಕಲ್ಪಿಸಲು ನೆರವಾಗಬೇಕು ಎಂದರು.

ಜಿಲ್ಲಾ ಪಂಚಾಯತ ಸಿಇಒ ಈಶ್ವರ್ ಕಾಂದೂ ಮಾತನಾಡಿ, ಗ್ರಾಮ ಪಂಚಾಯತ್ ಮತ್ತು ತಾಲೂಕು ಮಟ್ಟದಲ್ಲಿ ನಡೆಯುವ ಸಭೆಗಳಿಗೆ ಕಡ್ಡಾಯವಾಗಿ ಹಾಜರಾಗಿ, ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಕ್ರೀಯಾ ಯೋಜನೆ ರೂಪಿಸಬೇಕು ಮತ್ತು ನಿಗದಿತ ಗುರಿ ಸಾಧಿಸಲು ಕಾರ್ಯಪ್ರವರ್ತರಾಗಬೇಕು ಎಂದು ತಿಳಿಸಿದರು.

> ಇಲಾಖೆಗಳ ಯೋಜನೆಯ ಪ್ರಗತಿಗೆ ತಳಮಟ್ಟದಲ್ಲಿ ಇಲಾಖೆಗಳ ನಡುವೆ ಸಮನ್ವಯತೆ ಕೊರತೆ ಎದ್ದು ಕಾಣುತ್ತಿದ್ದು, ಅಧಿಕಾರಿಗಳು ಪರಸ್ಪರ ಸಹಕಾರ ನೀಡಬೇಕು.
> -ಈಶ್ವರ ಕಾಂದೂ,
> ಜಿಲ್ಲಾ ಪಂಚಾಯತ ಸಿಇಒ

ಇದರೊಂದಿಗೆ ಜಿಲ್ಲೆಯಲ್ಲಿ ಮನರೇಗಾ ಯೋಜನೆಯ ಧ್ಯೇಯೋದ್ದೇಶಗಳನ್ನು ಈಡೇರಿಸುವ ಸಲುವಾಗಿ ಅರಣ್ಯ ಇಲಾಖೆ ಹಾಗೂ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಕೈಗೊಳ್ಳಬೇಕಾದ ಕ್ರಮಗಳು, ಮಾನವ ದಿನಗಳ ಸೃಜನೆ, ಆರ್ಥಿಕ ಪ್ರಗತಿ, ಗುರಿ ಸಾಧನೆ, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆದು, ಅಧಿಕಾರಿಗಳ ನಡುವೆ ಸೂಕ್ತ ಸಲಹೆ ಸೂಚನೆಗಳು ರವಾನೆಯಾದವು.

ಸಭೆಯಲ್ಲಿ ಸಾಮಾಜಿಕ ಅರಣ್ಯವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ್ ನಾವಿ, ಜಿ.ಪಂ. ಯೋಜನಾ ನಿರ್ದೇಶಕ ಕರೀಂ ಅಸಾದಿ, ಅರಣ್ಯ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯತಿಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ಪ್ರಾದೇಶಿಕ ಅರಣ್ಯ ವಿಭಾಗಗಳ, ವನ್ಯ ಜೀವಿ ವಿಭಾಗದ ಹಾಗೂ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಎಲ್ಲಾ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ನರೇಗಾ ಯೋಜನೆಯ ಸಹಾಯಕ ನಿರ್ದೇಶಕರು, ವಲಯ ಅರಣ್ಯಾಧಿಕಾರಿಗಳು, ಅರಣ್ಯ ಇಲಾಖೆ ಮತ್ತು ನರೇಗಾ ಸಿಬ್ಬಂದಿ ಉಪಸ್ಥಿತರಿದ್ದರು.

ದೂರು ಬರದಂತೆ ಕಾರ್ಯನಿರ್ವಹಿಸಿ ಸಿಇಒ ಕಾಂದೂ

ಕಾರವಾರ: ಜನಸಾಮಾನ್ಯರಿಗೆ ಯಾವುದೇ ರೀತಿಯಲ್ಲಿ ತೊಂದರೆಯಗದಂತೆ ಪ್ರತಿಯೊಂದು ಇಲಾಖೆಗಳು ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕರಿಂದ ಯಾವುದೇ ದೂರುಗಳು ಬಾರದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ ಅವರು ಸೂಚನೆ ನೀಡಿದರು.

ಶಿರಸಿ ತಾಲೂಕಿನ ಸದಾಶಿವಳ್ಳಿ ಗ್ರಾಮ ಪಂಚಾಯತ್‌ನ ಜೇನು ಸಾಕಾಣಿಕೆ ಕೇಂದ್ರ, ಹೊಸದಾಗಿ ನಿರ್ಮಾಣವಾದ ಗ್ರಂಥಾಲಯ ಕೇಂದ್ರ ಹಾಗೂ ಮಳೆ ನೀರಿನ ಕೊಯ್ಲು ವೀಕ್ಷಿಸಿ ಕಾಮಗಾರಿಗಳಿಗೆ ಸಂಬಂಧಿಸಿದ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ನಂತರ ದೊಡ್ನಳ್ಳಿ ಗ್ರಾಮ ಪಂಚಾಯತ್ ನ ನಾರಾಯಣಗುರು ನಗರದಲ್ಲಿ ಜೆಜೆಎಂ ಯೋಜನೆಯಡಿ ನಿರ್ಮಾಣವಾದ ನೀರಿನ ಟ್ಯಾಂಕ್ ವೀಕ್ಷಿಸಿ ಸಾರ್ವಜನಿಕರೊಂದಿಗೆ ಮಾತುಕತೆ ನಡೆಸಿದರು. ನಗರದಲ್ಲಿ ಸಂಜೀವಿನಿ ಒಕ್ಕೂಟದಡಿ ನಿರ್ಮಾಣವಾದ ಸಂಜೀವಿನಿ ಮಳಿಗೆಗೆ ಭೇಟಿ ನೀಡಿದ ಅವರು ಸಂಜೀವಿನಿ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವ ದೃಷ್ಟಿಯಿಂದ ಸರ್ಕಾರಿ ಕಚೇರಿಗಳಲ್ಲಿ ಅವಶ್ಯಕವಿರುವ ವಸ್ತುಗಳನ್ನು ಖರೀದಿಸಲು ಸೂಚನೆ ನೀಡಲು ಅಧಿಕಾರಿಗಳಿಗೆ ತಿಳಿಸಿದರು. ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಮಕ್ಕಳ ಹಾಜರಾತಿ, ಅವರ ಅಗತ್ಯತೆಗಳು, ಗ್ರಂಥಾಲಯ ವೀಕ್ಷಣೆ, ಹಾಗೂ ಮಕ್ಕಳ ವಸತಿ ಕೋಣೆಗಳು ಸೇರಿದಂತೆ ಅಡುಗೆ ಕೋಣೆಗಳನ್ನು ವೀಕ್ಷಿಸಿ ಆಹಾರ ಪದಾರ್ಥಗಳನ್ನು ಪರಿಶೀಲಿಸಿ ಗುಣಮಟ್ಟ ಕಾಯ್ದುಕೊಳ್ಳುವಂತೆ ತಿಳಿಸಿದರು.

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.313/2024
ಅರ್ಜಿದಾರರು : 1.ಶ್ರೀಮತಿ ಬಾರಿಕರ ಕೆಂಚಮ್ಮ ಗಂಡ ಲೇಟ್ ಫಕ್ಕಿರಪ್ಪ ವಯಸ್ಸು: 80 ವರ್ಷ, 2. ರತ್ನಮ್ಮ ತಂದೆ ಲೇಟ್ ಫಕ್ಕೀರಪ್ಪ ,ವಯಸ್ಸು 65 ವರ್ಷ. 3. ಶ್ರೀ ಮಂಜಪ್ಪ ತಂದೆ ಲೇಟ್ ಗಂಗಪ್ಪ ವಯಸ್ಸು 36 ವರ್ಷ. 4. ಶ್ರೀ ನಾಗರಾಜ ತಂದೆ ಗಂಗಪ್ಪ ವಯಸ್ಸು34 ವರ್ಷ. 5. ಶ್ರೀಮತಿ ಕವಿತಾ ತಂದೆ ಗಂಗಪ್ಪ ವಯಸ್ಸು 32 ವರ್ಷ. 6. ಶ್ರೀಮತಿ ಹನುಮವ್ವ ಗಂಡ ಲೇಟ್ ಕನಕಪ್ಪ ವಯಸ್ಸು 53 ವರ್ಷ. 7. ಶ್ರೀ ನಾಗರಾಜ ತಂದೆ ಲೇಟ್ ಬಾರಿಕರ ಫಕ್ಕೀರಪ್ಪ ವಯಸ್ಸು 48 ವರ್ಷ. 8 ಪ್ರಕಾಶ್ ತಂದೆ ಲೇಟ್ ಬಾರಿಕರ ಫಕ್ಕೀರಪ್ಪ ವಯಸ್ಸು 33 ವರ್ಷ. ಎಲ್ಲಾರು ವಾಸ: ಒಡ್ಡಿನ ದಾದಾಪುರ ಗ್ರಾಮ ಹರಪನಹಳ್ಳಿ ತಾಲೂಕು ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರವರ ಕಾರ್ಯಾಲಯ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಮೇಲ್ಕಂಡ ನ್ಯಾಯಾಲಯದಲ್ಲಿ 1ನೇ ಅರ್ಜಿದಾರಳ ಗಂಡ 2,7 ಮತ್ತು 8ನೇ ಅರ್ಜಿದಾರರ ತಂದೆ 3 ರಿಂದ 5ನೇ ಅರ್ಜಿದಾರರ ಅಜ್ಜ ಹಾಗೂ 6ನೇ ಅರ್ಜಿದಾರಳ ಮಾವ ನಾದ ಬಾರಿಕರ ಫಕ್ಕೀರಪ್ಪ ತಂದೆ ಕನಕಪ್ಪ ಇವರು ದಿನಾಂಕ:25 –08–1993 ರಂದು ಹರಪನಹಳ್ಳಿ ತಾಲೂಕು ಒಡ್ಡಿನದಾದಾಪುರ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 01.07.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11–00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀನಾಗರಾಜ ನಾಯ್ಕ ಸಿ.
ಸ್ಥಳ: ಹರಪನಹಳ್ಳಿ ದಿನಾಂಕ: 14/06/2024

ಓ.ಎಸ್. ನಂಬರ : 188/2014
ಬ್ಯಾಡಗಿ ಸಿವ್ಹಿಲ್ ಜಡ್ಜ್ ಇವರ ನ್ಯಾಯಾಲಯದಲ್ಲಿ
ವಾದಿಯರು : 1) ಶ್ರೀಮತಿ ಲಕ್ಷ್ಮವ್ವ ಕೋಂ ಬಸಪ್ಪ ಕದರಮುಂಡಲಗಿ, ಸಾ:ಕಾಕೋಳ .ತಾ: ಬ್ಯಾಡಗಿ ಜಿ:ಹಾವೇರಿ.
ವಿರುದ್ಧ
ಪ್ರತಿವಾದಿಯರು: 1) ರಾಮಪ್ಪ ತಂದೆ ಹನುಮಂತಪ್ಪ ಕಂಬಳಿ ಹಾಗೂ ವಗೈರೆರು.
ಇಸ್ತಿಯಾರ ನಾಮೆ
ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20(1) ರ ಅಡಿಯಲ್ಲಿ
ಬ್ಯಾಡಗಿ ಸಿವ್ಹಿಲ್ ಜಡ್ಜ್ ಇವರ ನ್ಯಾಯಾಲಯದಲ್ಲಿ ಓ.ಎಸ್. ನಂಬರ : 188/2014 ನೇದ್ದನ್ನು ಪ್ರತಿವಾದಿಯರ ವಿರುದ್ಧ ದಾಖಲ ಮಾಡಿದ್ದು, ಸದರಿ ಕೇಸಿನಲ್ಲಿ ಪ್ರತಿವಾದಿ ನಂಬರ 7(ಇ) ನೇದವರು ಮಾನ್ಯ ನ್ಯಾಯಾಲಯಕ್ಕೆ ಹಾಜರ ಆಗದೇ ಇರುವದರಿಂದ ಅವರ ವಿರುದ್ಧ ಈ ನೋಟಿಸು ಹೊರಡಿಸಲಾಗಿದೆ. ಪ್ರತಿವಾದಿ: 7(ಇ) ಶ್ರೀಮತಿ ಸುಸಿಲವ್ವ @ಸುಮಿತ್ರಾ ಕೋಂ ಬಸವರಾಜ ಕನವಳ್ಳಿ ವಯಾ॥ 43 ವರ್ಷ. ಉದ್ಯೋಗ॥ ಮನೆಕೆಲಸ ಸಾ॥ 4ನೇ ಕ್ರಾಸ ನಿಸರ್ಗ ಸ್ಕೂಲ್ ಹತ್ತಿರ ರೋಡ,ಸಿದ್ದಿಹಳ್ಳಿ ಮುಖ್ಯ ರಸ್ತೆ,ಬೋನೆಮಿಲ್ ಬೆಂಗಳೂರ.ಆದ್ದರಿಂದ ಎದರುಗಾರ ನಂಬರ 7(ಇ) ನೇದವರಿಗೆ ನ್ಯಾಯಾಲಯದಿಂದ ಸಾಕಷ್ಟು ಬಾರಿ ನೋಟಿಸು ಹಾಗೂ ಸಮನ್ಸಗಳು ಕಳುಹಿಸಿದ್ದರೂ ಕೂಡಾ ಉದ್ದೇಶಪೂರ್ವಕವಾಗಿ ಮಾನ್ಯ ನ್ಯಾಯಾಲಯಕ್ಕೆ ಹಾಜರ ಆಗದೇ, ಇದ್ದುದರಿಂದ ನೀವು ಬ್ಯಾಡಗಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಿನಾಂಕ: 31–07–2024 ರಂದು ಹಾಜರ ಆಗಲು ಈ ಸಾರ್ವಜನಿಕ ಪ್ರಕಟಣೆಯ ಮೂಲಕ ತಿಳಿಸಿರುತ್ತದೆ.ಒಂದು ವೇಳೆ ನೀವು ಅಂದು ಹಾಜರ ಆಗದೇ ಇದ್ದರೆ ಈ ಮಾನ್ಯ ನ್ಯಾಯಾಲಯದವರು ತಮ್ಮ ವಿರುದ್ಧ ಈ ಅಸಲರ್ಜಿಯನ್ನು ಏಕತರ್ಫಿ ನಿರ್ಣಯವನ್ನು ಮಾಡಲಾಗುತ್ತದೆ ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿ ಹಾಕಿ ದಿನಾಂಕ : 13–06–2024 ರಂದು ನೀಡಿದೆ.
ನ್ಯಾಯಾಧೀಶರ ಆದೇಶದ ಮೇರೆಗೆ
ಸಹಿ/–ಶಿರಸ್ತೆದಾರರು
ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಬ್ಯಾಡಗಿ
ಸಹಿ/– ಶ್ರೀ ಬಿ. ಜಿ. ಹಿರೇಮಠ.
ಅರ್ಜಿದಾರರ ಪರ ನ್ಯಾಯವಾದಿಗಳು, ಬ್ಯಾಡಗಿ
ಸ್ಥಳ : ಬ್ಯಾಡಗಿ ದಿನಾಂಕ : 13–06–2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.241/2024
ಅರ್ಜಿದಾರರು : ಶ್ರೀ ಗರಗದ ಸಂತೋಷ ತಂದೆ ಹಾಲಪ್ಪ, ವಯಸ್ಸು: 30 ವರ್ಷ, ವೃತ್ತಿ: ವ್ಯವಸಾಯ , ವಾಸ: ಬಾಗಳಿ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರವರ ಕಾರ್ಯಾಲಯ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರನ ಅತ್ತೆಯಾದ ಉಚ್ಚಂಗೆವ್ವ (ಲೇಸಿ) ತಂದೆ ಮೈಲಪ್ಪ ಇವರು ದಿನಾಂಕ:04–02–2006 ರಂದು ಹರಪನಹಳ್ಳಿ ತಾಲೂಕು ಬಾಗಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 06.07.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11–00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀ ಮಂಜುನಾಥ್ ಎಸ್. ಬಾಗಳಿ
ಸ್ಥಳ: ಹರಪನಹಳ್ಳಿ ದಿನಾಂಕ: 13/06/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.242 /2024
ಅರ್ಜಿದಾರರು : ಶ್ರೀ ನಜೀರ್ ಸಾಬ್ ತಂದೆ ಜಮಾಲ್ ಸಾಬ್, ವಯಸ್ಸು: 74 ವರ್ಷ, ವೃತ್ತಿ: ವ್ಯವಸಾಯ , ವಾಸ: ಯು ಕಲ್ಲಹಳ್ಳಿ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರವರ ಕಾರ್ಯಾಲಯ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರನ ತಾಯಿಯಾದ ಬಡೇಟಿ ಗಂಡ ಲೇಟ್ ಜಮಾಲ್ ಸಾಬ್ ಇವರು ದಿನಾಂಕ:10–02–1985 ರಂದು ಹರಪನಹಳ್ಳಿ ತಾಲೂಕು ಯು .ಕಲ್ಲಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 06.07.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11–00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀ ಮಂಜುನಾಥ್ ಎಸ್. ಬಾಗಳಿ
ಸ್ಥಳ: ಹರಪನಹಳ್ಳಿ ದಿನಾಂಕ: 13/06/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.243 /2024
ಅರ್ಜಿದಾರರು : ಶ್ರೀ ಗರಗದ ಸಂತೋಷ ತಂದೆ ಹಾಲಪ್ಪ, ವಯಸ್ಸು: 30 ವರ್ಷ, ವೃತ್ತಿ: ವ್ಯವಸಾಯ , ವಾಸ: ಬಾಗಳಿ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರವರ ಕಾರ್ಯಾಲಯ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರನ ಅತ್ತೆಯಾದ ದಡಾರವ್ವ (ಲೇಸಿ) ತಂದೆ ಮೈಲಪ್ಪ ಇವರು ದಿನಾಂಕ:09–03–2008 ರಂದು ಹರಪನಹಳ್ಳಿ ತಾಲೂಕು ಬಾಗಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 06.07.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11–00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀ ಮಂಜುನಾಥ್ ಎಸ್. ಬಾಗಳಿ
ಸ್ಥಳ: ಹರಪನಹಳ್ಳಿ ದಿನಾಂಕ: 13/06/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.244 /2024
ಅರ್ಜಿದಾರರು : ಶ್ರೀ ಗರಗದ ಸಂತೋಷ ತಂದೆ ಹಾಲಪ್ಪ, ವಯಸ್ಸು: 30 ವರ್ಷ, ವೃತ್ತಿ: ವ್ಯವಸಾಯ , ವಾಸ: ಬಾಗಳಿ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು : ಮಾನ್ಯ ತಹಶೀಲ್ದಾರವರ ಕಾರ್ಯಾಲಯ, ಹರಪನಹಳ್ಳಿ ಪಟ್ಟಣ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.
ಸಾರ್ವಜನಿಕ ಪತ್ರಿಕಾ ಪ್ರಕಟಣೆ
ಅರ್ಜಿದಾರನ ತಂದೆಯಾದ ಹಾಲಪ್ಪ ತಂದೆ ಮೈಲಪ್ಪ ಇವರು ದಿನಾಂಕ:09–04–2012 ರಂದು ಹರಪನಹಳ್ಳಿ ತಾಲೂಕು ಬಾಗಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 06.07.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11–00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀ ಮಂಜುನಾಥ್ ಎಸ್. ಬಾಗಳಿ
ಸ್ಥಳ: ಹರಪನಹಳ್ಳಿ ದಿನಾಂಕ: 13/06/2024

ನಿರ್ವಹಣೆ ಇಲ್ಲದ ಚರಂಡಿ

ಕಾರವಾರ: ತಾಲೂಕಿನ ಕಡವಾಡ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಆಗುತ್ತಿರುವ ಚರಂಡಿ ಕಾಮಗಾರಿಗಳು ಹಾಗೂ ಹದಗೆಟ್ಟ ರಸ್ತೆಗಳನ್ನು ಆದಷ್ಟು ಬೇಗ ದುರಸ್ತಿಗೊಳಿಸಿ ಎಂದು ಆಗ್ರಹಿಸಿ ಇಲ್ಲಿನ ರಾಜಕೀಯ ಮುಖಂಡರಾದ ಸತೀಶ ಸಿ. ನಾಯ್ಕ ಅವರ ನೇತೃತ್ವದಲ್ಲಿ ಕಡವಾಡ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಊರಿನ ನಾಗರಿಕರು ಸೇರಿ ಲೋಕೋಪಯೋಗಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕಡವಾಡ ಕ್ರಾಸ್‌ನಿಂದ ಸುಂಕೇರಿ ಸೇತುವೆಯವರೆಗೆ ಲೋಕೋಪಯೋಗಿ ಇಲಾಖೆಯ ಮುಖ್ಯ ರಸ್ತೆ ಸರಿಯಾದ ರೀತಿಯಲ್ಲಿ ನಿರ್ವಹಣೆ ಇಲ್ಲದ ಕಾರಣ ಪಾದಚಾರಿಗಳು ವಾಹನ ಸವಾರರು ಹಲವು ತಿಂಗಳುಗಳಿಂದ ತೀವ್ರ ಸ್ವರೂಪದ ಸಮಸ್ಯೆ ಅನುಭವಿಸುತ್ತಿದ್ದಾರೆ. ಕಡವಾಡ ಆಶೀರ್ವಾದ ಹೋಟೆಲ್ ಎದುರು ರಸ್ತೆ ಮಧ್ಯದಲ್ಲಿ ಭಾರೀ ಗಾತ್ರದ ಹೊಂಡಗಳು ಬಿದ್ದು, ಮಂಡಿವರೆಗೂ ನೀರು ನಿಂತುಗೊಂಡಿರುವುದರಿಂದ ಕೆರೆಯಂತಾಗಿದೆ. ಹಾಗೆಯೇ ವಿಠೋಬ ದೇವಸ್ಥಾನದ ಸಮೀಪದ ರಸ್ತೆ ತಿರುವಿನಲ್ಲಿ ಸಂಪೂರ್ಣ ರಸ್ತೆ ಹದಗೆಟ್ಟು ಹೋಗಿದೆ. ಅಲ್ಲದೇ ವಿಠೋಬಾ ದೇವಸ್ಥಾನದ ಹತ್ತಿರ ರಸ್ತೆ ಪಕ್ಕದಲ್ಲಿ ನೂತನ ಚರಂಡಿ ನಿರ್ಮಿಸಲಾಗಿದೆ. ಈ ಭಾಗದಲ್ಲಿ ಹದಗೆಟ್ಟ ರಸ್ತೆ ಹಾಗೂ ಅರ್ಧಮರ್ಧ ಚರಂಡಿ ಕಾಮಗಾರಿಯಿಂದ ಆಗುತ್ತಿರುವ ಸಮಸ್ಯೆ ಕುರಿತು ಹಲವಾರು ಬಾರಿ ಗಮನಕ್ಕೆ ತಂದರೂ ಬಗೆಹರಿಸುತ್ತಿಲ್ಲ. ರಸ್ತೆ, ಗಟಾರದ ಕಸಕಡ್ಡಿ, ಮಣ್ಣು ಖುಲ್ಲಾ ಪಡಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕು. ರಸ್ತೆ ಬದಿಯಲ್ಲಿನ ಗಿಡಗಂಟಿಗಳನ್ನು ಕಡಿದು ಸ್ವಚ್ಛ ಗೊಳಿಸಬೇಕು. ಕಡವಾಡ ಕ್ರಾಸ್‌ನಲ್ಲಿ ಬಿದ್ದಿರುವ ನಾಮಫಲಕ ತೆರವು ಮಾಡಿ ನೂತನ ನಾಮಫಲಕ ಅಳವಡಿಸುವ ಕಾರ್ಯ ಮಾಡಬೇಕು ಎಂದು ಗಮನ ಸೆಳೆದರು. ತಾಲೂಕು ಪಂಚಾಯತ ಮಾಜಿ ಸದಸ್ಯ ಮಾರುತಿ ಎ ನಾಯ್ಕ, ಗ್ರಾಮ ಪಂಚಾಯತ ಸದಸ್ಯರಾದ ಆನಂದು ಆರ್ ನಾಯ್ಕ, ದೇವರಾಜ್ ನಾರ್ವೇಕರ ಉಪಸ್ಥಿತರಿದ್ದರು.

ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದು ರವಿಗೌಡ

ಮುಂಡಗೋಡ: ಬಿಜೆಪಿ ನಾಯಕರಿಗೆ ಧಮ್ ಇದ್ದರೆ ಶಿವರಾಮ ಹೆಬ್ಬಾರ ಅವರನ್ನು ಉಚ್ಚಾಟನೆ ಮಾಡಲಿ ಎಂದು ಶಿವರಾಮ ಹೆಬ್ಬಾರ ಬೆಂಬಲಿಗರಾದ ರವಿಗೌಡ ಪಾಟೀಲ ಹಾಗೂ ಗುಡ್ಡಪ್ಪ ಕಾತೂರ ಸವಾಲು ಹಾಕಿದರು. ಗುರುವಾರ ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಶಿವರಾಮ ಹೆಬ್ಬಾರ ರಾಜೀನಾಮೆ ನೀಡಬೇಕೆಂದು ಆಗ್ರಹಿಸುತ್ತಿರುವ ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದರು. ಗುಡ್ಡಪ್ಪ ಕಾತೂರ ಮಾತನಾಡಿ, ಮಾಜಿ ಜಿ.ಪಂ ಉಪಾಧ್ಯಕ್ಷ ಎಲ್.ಟಿ ಪಾಟೀಲ ಅವರು ಕಾಂಗ್ರೆಸ್ ನಿಂದ ಬಿಜೆಪಿಗೆ ಬಂದಾಗ ಜಿ.ಪಂ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟರಾ? ಎಲ್.ಟಿ. ಪಾಟೀಲ ಅವರ ಮಾತು ಭೂತದ ಬಾಯಲ್ಲಿ ಭಗವದ್ಗೀತೆ ಎಂಬಂತಿದೆ. ನರೇಂದ್ರ ಮೋದಿ ಅವರಿಂದ ಉತ್ತರಕನ್ನಡ ಲೋಕಸಭಾ ಕ್ಷೇತ್ರ ಬಿಜೆಪಿ ಗೆದ್ದಿದೆ ವಿನಃ ಸ್ಥಳೀಯ ನಾಯಕರ ಮುಖ ನೋಡಿ ಯಾರು ಮತ ಹಾಕಿಲ್ಲ. ನಾವು ಕೂಡ ಬಿಜೆಪಿಯಲ್ಲಿ ಇದ್ದು ಕೇಸ್ ಹಾಕಿಸಿಕೊಂಡು ಕೆಲಸ ಮಾಡಿದವರು, ಈಗೇನೊ ಪಕ್ಕಕ್ಕೆ ಬಂದು ಕುರ್ಚಿ ಮೇಲೆ ಕುಳಿತುಕೊಂಡು ಸುದ್ದಿಗೋಷ್ಠಿ ಮಾಡುತ್ತಿದ್ದಾರೆ. ಶಿವರಾಮ ಹೆಬ್ಬಾರ ಅವರ ರಾಜೀನಾಮೆ ಕೇಳಲು ಅವರಿಗೆ ಯಾವ ನೈತಿಕತೆಯು ಇಲ್ಲ. ಲೋಕಸಭಾ ಕ್ಷೇತ್ರದ ಪೈಕಿ ಬಿಜೆಪಿ ಅತಿ ಕಡಿಮೆ ಲೀಡ್ ಪಡೆದಿದ್ದು, ಯಲ್ಲಾಪುರ-ಮುಂಡಗೋಡ ವಿಧಾನಸಭಾ ಕ್ಷೇತ್ರ ಇದಕ್ಕೆ ಕಾರಣ ಶಿವರಾಮ ಹೆಬ್ಬಾರ ಅವರ ಶಕ್ತಿ, ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಶಿವರಾಮ ಹೆಬ್ಬಾರ ಅವರ ಶಕ್ತಿ ಏನು ಎಂಬುವುದನ್ನು ತೋರಿಸುತ್ತೇವೆ ಎಂದರು.

ನವಲಗುಂದ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳ ಆದೇಶದ ಮೇರೆಗೆ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಗ್ರಾಮಗಳಾದ ಹನಸಿ, ಬಳ್ಳೂರ ಹಾಗೂ ಶಿರಕೋಳ ಗ್ರಾಮಗಳಲ್ಲಿ ಮನೆ ಹಾನಿಯಾಗಿದೆ. ಅತೀ ಮಳೆಯ ಕಾರಣದಿಂದ ಹಲವು ಮನೆಗಳು ಹಾನಿಗೊಳಗಾಗಿದ್ದು, ಹಾನಿಗೊಳಗಾದ ಪ್ರದೇಶಗಳಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್, ದೊಡ್ಡಮನಿ ಹಾಗೂ ತಾಲೂಕು ಆಡಳಿತದ ಇತರ ಅಧಿಕಾರಿಗಳೊಂದಿಗೆ ಭೇಟಿ ನೀಡಿದರು. ಮಳೆಯಿಂದಾದ ಹಾನಿಗೆ ಸಂಬಂಧಿಸಿದಂತೆ ಪರಿಹಾರದ ಕುರಿತು ಸರಕಾರಕ್ಕೆ ಮಾಹಿತಿಯನ್ನು ಸಲ್ಲಿಸುವುದಾಗಿ ತಿಳಿಸಿದರು.

ಫ್ರೂಟ್ಸ್ ಐಡಿ ನೀಡುವಲ್ಲಿ ಅಧಿಕಾರಿಗಳ ವಿಳಂಬ ಧೋರಣೆ

ಸಿದ್ದಾಪುರ: ಫ್ರೂಟ್ಸ್ ಐಡಿ ನೀಡುವಲ್ಲಿ ಅಧಿಕಾರಿಗಳ ವಿಳಂಬ ಧೋರಣೆಯಿಂದ ರೈತರು ಸಮಸ್ಯೆ ಅನುಭವಿಸುವಂತಾಗಿದೆ ಎಂದು ಬಿಜೆಪಿ ತಾಲೂಕಾ ಪ್ರಧಾನ ಕಾರ್ಯದರ್ಶಿ ತೋಟಪ್ಪ ನಾಯ್ಕ ಆರೋಪಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು ಸರಕಾರದಿಂದ ಕೃಷಿಕರಿಗೆ ಸಿಗುವ ಸಕಲ ಸೌಲಭ್ಯಗಳಿಗೂ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮತ್ತು ಫ್ರೂಟ್ಸ್ ಐಡಿ ಪಡೆಯುವುದು ಕಡ್ಡಾಯ. ಆದರೆ ಸರ್ವರ್ ಸಮಸ್ಯೆ ಸೇರಿದಂತೆ ಹಲವಾರು ಕುಂಟು ನೆಪ ಹೇಳುತ್ತ ತಾಲೂಕಿನ ಅಧಿಕಾರಿಗಳು ರೈತರಿಗೆ ಫ್ರೂಟ್ ಐಡಿ ಮಾಡಿಕೊಡುವಲ್ಲಿ ವಿಳಂಬ ಮಾಡುತ್ತಿದ್ದಾರೆ. ನಾಲ್ಕೈದು ಇಲಾಖೆಗಳಲ್ಲಿ ಫ್ರೂಟ್ಸ್ ಐಡಿ ಮಾಡಲು ಅವಕಾಶ ಇರುವುದನ್ನೇ ನೆಪ ಮಾಡಿಕೊಂಡ ಕೆಲ ಅಧಿಕಾರಿಗಳು ಸರ್ವರ್ ಡೌನ್, ಒಟಿಪಿ ಬರುತ್ತಿಲ್ಲ ಈ ರೀತಿಯ ಕುಂಟು ನೆಪ ಹೇಳುತ್ತಾ ಇಲಾಖೆಯಿಂದ ಇಲಾಖೆಗೆ ರೈತರನ್ನು ಅಲೆದಾಡಿಸುತ್ತಿದ್ದಾರೆ. ಹತ್ತಾರು ಸಲ ಒಂದೇ ಕೆಲಸಕ್ಕಾಗಿ ಅಲೆದಾಡುವುದು ಮಳೆಗಾಲ ಪ್ರಾರಂಭದ ಈ ಸಮಯದಲ್ಲಿ ಕೃಷಿಕರಿಗೆ ತೊಂದರೆಯಾಗುತ್ತಿದೆ. ರೈತರಿಗೆ ಇಲಾಖೆಗಳಿಂದ ಸರಿಯಾದ ಸ್ಪಂದನೆ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಶಾಸಕರು ಮತ್ತು ಸಂಬಂಧಪಟ್ಟ ಇಲಾಖೆಗಳು ಈ ಕುರಿತು ಗಮನ ಹರಿಸಿ ರೈತರು ಅನುಭವಿಸುತ್ತಿರುವ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಫಾಯಿ ಕರ್ಮಚಾರಿಗಳಿಂದ ಹಲವು ಬೇಡಿಕೆ ಈಡೇರಿಕೆಗೆ ಮನವಿ

ಧಾರವಾಡ: ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ವೆಂಕಟೇಶನ್ ಅವರು ಜಿಲ್ಲಾಧಿಕಾರಿಗಳ ಕಚೇರಿ ಧಾರವಾಡದಲ್ಲಿ ಜರುಗಿದ ಸಭೆಯಲ್ಲಿ ಧಾರವಾಡ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪೌರಕಾರ್ಮಿಕರ ಮತ್ತು ನೌಕರರ ಸಂಘದ ವತಿಯಿಂದ ಪೌರಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಧ್ಯಕ್ಷರಿಗೆ, ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ವಿಜಯ ಗುಂಟ್ರಾಳ ಮನವಿ ಸಲ್ಲಿಸಿ, ಪೌರಕಾರ್ಮಿಕರ ಅನೇಕ ಜ್ವಲಂತ ಸಮಸ್ಯೆಗಳ ಕುರಿತು ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು. ಈ ಸಂದರ್ಭದಲ್ಲಿ ಸಂಘದ ಧಾರವಾಡ ಜಿಲ್ಲಾ ಅಧ್ಯಕ್ಷರಾದ ಡಾ.ವಿಜಯ ಗುಂಟ್ರಾಳ, ಗಾಳೆಪ್ಪಾ ದ್ವಾಸಲಕೇರಿ, ಗಂಗಮ್ಮ ಸಿದ್ರಾಮಪ್ಪುರ್, ಪಡೆವ್ವಾ ಹಾವರಗಿ, ಯಲಪ್ಪ ಪಾಳೇದ, ದುರಗಪ್ಪ ಬುಕನಟ್ಟಿ, ಬಸಮ್ಮ ಮದರಿ, ಕಸ್ತೂರಿ ತಮದಡ್ಡಿ, ಮರಿಯಪ್ಪ ಬುಕನಟ್ಟಿ ಉಪಸ್ಥಿತರಿದ್ದರು.

ಸಂಚಾರಿ ಸುರಕ್ಷತಾ ಸಪ್ತಾಹ: ಮಾಹಿತಿ

ಧಾರವಾಡ: ಧಾರವಾಡದ ಕ್ಲಾಸಿಕ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಸಂಚಾರಿ ಸುರಕ್ಷತಾ ಸಪ್ತಾಹ ಅಂಗವಾಗಿ ಚಾಲಕರಿಗೆ ಮತ್ತು ಸಹಾಯಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಂಚಾರಿ ನಿಯಮಗಳ ಬಗ್ಗೆ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಶ್ರೀನಿವಾಸ ಮೇಟಿ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಚಾರಿ ಪೊಲೀಸ್ ಠಾಣೆಯ ಬಳ್ಳಾರಿ ಸರ್, ಎಸ್. ಹುಗ್ಗಿ ಮತ್ತು ಪ್ರಾಂಶುಪಾಲರಾದ ಮನೋಹರ್ ಕೆಂಚರಾಹುತ ಹಾಗೂ ಬಸವರಾಜ ಕೆ ವಿದ್ಯಾರ್ಥಿಗಳು ಹಾಗೂ ಚಾಲಕರು ಭಾಗವಹಿಸಿದರು.

ಐಟಿಐ ವಿದ್ಯಾರ್ಥಿಗಳಿಗಾಗಿ ಕ್ಯಾಂಪಸ್ ಸಂದರ್ಶನ

ಧಾರವಾಡದ: ವಿದ್ಯಾಗಿರಿಯ ಜೆ.ಎಸ್.ಎಸ್ ಶ್ರೀ ಮಂಜುನಾಥೇಶ್ವರ ಐಟಿಐ ಕಾಲೇಜಿನಲ್ಲಿ ಬೆಂಗಳೂರಿನ ಸಿಗ್ಮಾ ಎ.ವಿ.ಐ.ಟಿ ಕಂಪನಿಯವರು ಐ.ಟಿಐ ಇಲೆಕ್ಟ್ರೀಷಿಯನ ಅಥವಾ ಡಿಪ್ಲೊಮಾ ಇಲೆಕ್ಟ್ರಿಕಲ್ , ಇಲೆಕ್ಟ್ರಾನಿಕ್ಸ ಕಮ್ಯೂನಿಕೇಶನ್ ಪಾಸಾದ ಹಾಗೂ ಕೊನೆಯ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ದಿನಾಂಕ ಜೂನ 28 ರಂದು ಬೆಳಗ್ಗೆ 9.30 ಕ್ಕೆ ಜ್ಯೂನಿಯರ್ ಪ್ರೊಜೆಕ್ಟ್ ಇಂಜನಿಯರ್ ಹುದ್ದೆಗಳಿಗಾಗಿ ಕ್ಯಾಂಪಸ್ ಸಂದರ್ಶನ ಏರ್ಪಡಿಸಿದ್ದಾರೆ. ಆಸಕ್ತರು ತಮ್ಮ ಬಯೋಡೆಟಾ, ಪಾಸಪೋರ್ಟ್ ಸೈಜಿನ ಭಾವಚಿತ್ರ, ಅಂಕಪಟ್ಟಿಯ ನಕಲು ಪ್ರತಿಗಳೊಂದಿಗೆ ಹಾಜರಾಗಬೇಕು. ತಮ್ಮ ಹೆಸರುಗಳನ್ನು 0836-2462202 ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಲು ಪ್ರಕಟಣೆಯಲ್ಲಿ ತಿಳಿಸಲಾಗಿ.

ಧಾರವಾಡದ ಸಿದ್ದಿ ವಿನಾಯಕ ಮಹಿಳಾ ಮಂಡಲ ಗಾಂಧಿನಗರ, ವತಿಯಿಂದ ಇತ್ತೀಚೆಗೆ ಪರಿಸರ ದಿನಾಚರಣೆ ಆಚರಿಸಲಾಯಿತು.

ಗಂಡಾಂತರ ತರುತ್ತಿದೆ ಡೆಂಘೀ

ಡೆಂಘೀ ರೋಗಕ್ಕೆ ನಾಲ್ಕು ವರ್ಷದ ಮಗು ಸಾವು | ಜಾಗೃತಿಗೆ ವಿಶೇಷ ಕ್ರಮಕ್ಕೆ ಮನವಿ

ಧಾರವಾಡ: ಧಾರವಾಡ ಜಿಲ್ಲೆಯಲ್ಲಿ ಡೆಂಘೀ ಕಾಯಿಲೆಗೆ 4 ವರ್ಷದ ಮಗು ಸಾವನ್ನಪ್ಪಿದೆ. ಧಾರವಾಡ ತಾಲೂಕಿನ ಮುಮ್ಮಿಗಟ್ಟಿಯಲ್ಲಿ 4 ವರ್ಷದ ಮಗುವನ್ನು ಜೂನ 10 ರಂದು ಎಸ್ ಡಿ ಎಂ ಆಸ್ಪತ್ರೆಗೆ ದಾಖಲಾಗಿದ್ದು ಜೂನ 11 ಕ್ಕೆ ಮಗು ನಿಧನ ಹೊಂದಿದೆ. ಮಗುವಿನ ರಕ್ತದ ಕಿಟ್ ಮೂಲಕ ಪರೀಕ್ಷಿಸಲಾಗಿ ಅದು ಡೆಂಘೀ ಎಂದು ಖಚಿತ ಪಟ್ಟಿದೆ.

ಈ ನಿಟ್ಟಿನಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿಗಳು, ತಾಲೂಕಾ ಆರೋಗ್ಯಧಿಕಾರಿಗಳು, ಜಿಲ್ಲಾ ಕೀಟ ಶಾಸ್ತ್ರಜ್ಞರು ಹಾಗೂ ಸಿಬ್ಬಂದಿಯವರು, ಗ್ರಾಮದಲ್ಲಿ ತಾಲೂಕಿನ ಒಟ್ಟು 46 ಸಿಬ್ಬಂದಿಯಿಂದ ನಡೆದ ಲಾರ್ವಾ ನಿರ್ಮೂಲನಾ ಕಾರ್ಯದ ಸಮೀಕ್ಷೆಯನ್ನು ಮೇಲ್ವಿಚಾರಣೆ ಮಾಡಲು ಮುಮ್ಮಿಗಟ್ಟಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನಿಯಂತ್ರಣ ಕ್ರಮಗಳ ಬಗ್ಗೆ ಕ್ರಿಯಾ ಯೋಜನೆ ರೂಪಿಸಿದರು.

ತಕ್ಷಣದಿಂದ ಶುಷ್ಕ ದಿನ ಅನುಸರಿಸಲು, ಘನ ತ್ಯಾಜ್ಯ ವಿಲೇವಾರಿ ಮಾಡಲು ಹಾಗೂ ವಿಶೇಷ ಜಾಗೃತಿ ಕಾರ್ಯಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಅಧಿಕಾರಿ ಮತ್ತು ಸಿಬ್ಬಂದಿ ತಂಡ ಮನೆ ಮನೆಗೆ ಭೇಟಿ ನೀಡಿ ತಕ್ಷಣ ಕಂಡು ಬಂದ ಘನ ತ್ಯಾಜ್ಯಗಳನ್ನು ಗ್ರಾಮ ಪಂಚಾಯಿತಿ ಕಸದ ವಾಹನದಲ್ಲಿ ಸಾಗಿಸಲಾಯಿತು. ಜನರಲ್ಲಿ ನೀರನ್ನು ಧೀರ್ಘ ಅವಧಿ ಸಂಗ್ರಹಿಸದಂತೆ ತಿಳಿವಳಿಕೆ ನೀಡಲಾಯಿತು.

ಆರೋಗ್ಯ ಇಲಾಖೆಯಿಂದ ಎಪ್ರಿಲ್16 ರಿಂದ ಇಂದಿನ ವರೆಗೆ ಒಟ್ಟು 3057 ಮನೆಗಳಲ್ಲಿ ಲಾರ್ವಾ ನಿರ್ಮೂಲನ ಸಮೀಕ್ಷೆ ನಡೆಸಲಾಗಿದೆ. ಅದರಲ್ಲಿ 157

ಮನೆಗಳಲ್ಲಿ ಲಾರ್ವಾ ಕಂಡು ಬಂದಿದ್ದು, ಅವುಗಳನ್ನು ನಾಶ ಪಡಿಸಲಾಗಿದೆ. ಸದ್ಯ 6 ಜ್ವರದ ಪ್ರಕರಣಗಳು ಚಿಕಿತ್ಸೆ ಪಡೆಯುತ್ತಿದ್ದು ಪರಿಸ್ಥಿತಿ ನಿಯಂತ್ರಣದಲ್ಲಿದೆ. ಡೆಂಘೀ ಪ್ರಕರಣ ಹೆಚ್ಚಾಗದಂತೆ ತಡೆಯಲು ಜಿಲ್ಲಾ ಆರೋಗ್ಯ ಅಧಿಕಾರಿಗಳು ಕೆಲವು ಸಲಹೆಗಳನ್ನು ಸಮುದಾಯ ಪಾಲಿಸುವಂತೆ ಮನವಿ ಮಾಡಿದ್ದಾರೆ.

ಜನರು ದೀರ್ಘ ಅವಧಿ ನೀರು ಸಂಗ್ರಹಿಸಬಾರದು ಮತ್ತು ಸಂಗ್ರಹಿಸಿದ ತೊಟ್ಟಿಗಳನ್ನು ಭದ್ರವಾಗಿ ಮುಚ್ಚಿಡಬೇಕು. ಜನರು ಪ್ರತಿಬಾರಿ ನೀರು ತುಂಬುವಾಗ ಸಂಗ್ರಹಣಾ ತೊಟ್ಟಿಯಲ್ಲಿ ಇರುವ ಹಳೆಯ ನೀರನ್ನು ಸಂಪೂರ್ಣ ಖಾಲಿ ಮಾಡಿ ತೊಟ್ಟಿಗಳನ್ನು ತಿಕ್ಕಿ ತೊಳೆದು ಹೊಸ ನೀರನ್ನು ತುಂಬಬೇಕು.

ಈಡೀಸ್ ಸೊಳ್ಳೆ ಹಗಲಿನಲ್ಲಿಯೇ ಕಚ್ಚುವುದರಿಂದ ಮನೆಯಲ್ಲಿ ಚಿಕ್ಕ ಮಕ್ಕಳು, ವೃದ್ಧರು, ಬಾಣಂತಿಯರು, ಗರ್ಭಿಣಿಯರು ಪೂರ್ಣ ಮೈ ಮುಚ್ಚುವ ಬಟ್ಟೆಗಳನ್ನು ಧರಿಸುವುದು ಹಾಗೂ ಹಗಲು ಮತ್ತು ರಾತ್ರಿ ಮಲಗುವಾಗ ತಪ್ಪದೇ ಸೊಳ್ಳೆ ಪರದೆ ಬಳಸುವದು.

ಮಳೆಗಾಲ ಆರಂಭ ಆಗಿರುವದರಿಂದ ಮನೆಯ ಸುತ್ತ ಎಸೆಯಲಾದ ತೆಂಗಿನ ಚಿಪ್ಪು, ಟಾಯರ್ ಇತರೇ ಘನ

ಜ್ವರ ಚಿಕಿತ್ಸಾಲಯ ಸ್ಥಾಪನೆ

ಇಲ್ಲಿಯವರೆಗೆ ಒಟ್ಟು 46 ಜ್ವರ ಪ್ರಕರಣಗಳು ಕಂಡು ಬಂದಿದ್ದು ಅದರಲ್ಲಿ 4 ಪ್ರಕರಣಗಳು ಡೆಂಘೀ ಎಂದು ಖಚಿತಪಟ್ಟಿವೆ. ಮುಮ್ಮಿಗಟ್ಟ ಗ್ರಾಮದಲ್ಲಿ ಜ್ವರ ಪ್ರಕರಣಗಳನ್ನು ತಪಾಸಣೆ ನಡೆಸಿ ಚಿಕಿತ್ಸೆ ನೀಡಲು ತಾತ್ಕಾಲಿಕವಾಗಿ ಸ್ಥಳೀಯ ಜ್ವರ ಚಿಕಿತ್ಸಾಲಯವನ್ನು ಸ್ಥಾಪಿಸಲಾಗಿದೆ.

ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವುದು ಮತ್ತು ಇಂತಹ ಘನ ತ್ಯಾಜ್ಯಗಳಲ್ಲಿ ಮಳೆಯ ನೀರು ಸಂಗ್ರಹವಾಗದಂತೆ ನೋಡಿಕೊಳ್ಳುವದು.

ಯಾವುದೇ ಜ್ವರ ಪ್ರಕರಣ ಕಂಡು ಬಂದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದು ಎಂದು ಸಲಹೆ ಸೂಚನೆಗಳನ್ನು ಆರೋಗ್ಯ ಇಲಾಖೆಯವರು ಕೊಟ್ಟಿದ್ದಾರೆ.

ಗೌರಿ ಜುಲೈನಲ್ಲಿ ತೆರೆಗೆ

ಹುಬ್ಬಳ್ಳಿ: ಯುವ ನಟ ಸಮರ್ಜಿತ್ ಹಾಗೂ ನಾಯಕಿ ಸಾನ್ಯ ಅಯ್ಯರ್ ಅವರ ಅಭಿನಯದ ಗೌರಿ ಸಿನಿಮಾ ರಾಜ್ಯಾದ್ಯಂತ ಜುಲೈನಲ್ಲಿ ತೆರೆ ಕಾಣಲಿದ್ದು, ನಮ್ಮ ಸಹೋದರಿ ಗೌರಿ ನೆನಪಿಗಾಗಿ ಸಿನಿಮಾಕ್ಕೆ ಗೌರಿ ಟೈಟಲ್ ಇಡಲಾಗಿದೆ ಎಂದು ನಿರ್ದೇಶಕ, ನಿರ್ಮಾಪಕ ಇಂದ್ರಜಿತ್ ಲಂಕೇಶ್ ಹೇಳಿದರು.

ಹುಬ್ಬಳ್ಳಿಯಲ್ಲಿ ಸಿನಿಮಾ ಹಾಡೊಂದನ್ನು ರಿಲೀಸ್ ಮಾಡಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಪುತ್ರ, ಸಮರ್ಜಿತ ಹಾಗೂ ಸಾನ್ಯ ಅಯ್ಯರ್‌ಗೆ ಇದು ಚೊಚ್ಚಲ ಸಿನಿಮಾವಾಗಿದ್ದು, ಸಿನಿಮಾ ಅದ್ಭುತವಾಗಿ ಮೂಡಿ ಬಂದಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಚಿತ್ರೀಕರಣ ಮಾಡಲಾಗಿದ್ದು, ಅಕ್ಕ ಗೌರಿಯ ಸಿದ್ಧಾಂತ ಇದರಲ್ಲಿಯಿಲ್ಲ. ಇದು ಅಕ್ಕ ಗೌರಿಯ ಕಥೆಯೂ ಅಲ್ಲ.

ಅಕ್ಕನ ಮೇಲಿನ ಅಭಿಮಾನದಿಂದ ಸಿನಿಮಾಗೆ ಆಕೆಯ ಹೆಸರು ಇಟ್ಟಿದ್ದೇನೆಂದರು. ಇನ್ನೂ ಚಿತ್ರದಲ್ಲಿ ಲೂಸ್ ಮಾದ ಯೋಗಿ, ಪ್ರಿಯಾಂಕಾ ಉಪೇಂದ್ರ, ಅಕುಲ್ ಬಾಲಾಜಿ ಸೇರಿದಂತೆ ಮೊದಲಾದ ಕಲಾವಿದರು ಅಭಿನಯಿಸಿದ್ದಾರೆ ಎಂದರು.

ನಟ ಸಮರ್ಜಿತ ಮಾತನಾಡಿ, ಸಿನಿಮಾವನ್ನು ಕಷ್ಟಪಟ್ಟು ಮಾಡಿದ್ದು, ಅದ್ಭುತವಾಗಿ ಮೂಡಿದೆ.

ಜುಲೈ ತಿಂಗಳಲ್ಲಿ ಸಿನಿಮಾ ರಾಜ್ಯಾದ್ಯಂತ ತೆರೆಗೆ ಬರಲಿದ್ದು, ಎಲ್ಲರೂ ಸಿನಿಮಾ ಚಿತ್ರಮಂದಿರಕ್ಕೆ ಹೋಗಿ ನೋಡಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಟಿ ಸಾನ್ಯ ಅಯ್ಯರ್ ಉಪಸ್ಥಿತರಿದ್ದರು

ತಂದೆ-ತಾಯಿಗೆ ಗೌರವ ತನ್ನಿ: ಡಿಸಿ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕವಿವಿ ವಿದ್ಯಾರ್ಥಿ ಕಲ್ಯಾಣ ವಿಭಾಗ, ಸ್ನಾತಕೋತ್ತರ ಕ್ರೀಡಾಕೂಟ ವಿಭಾಗ, ಮಹಿಳಾ ಸಂಶೋಧನಾ ಅಧ್ಯಯನ ಕೇಂದ್ರ, ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ವಿಭಾಗಗಳ ಸಹಯೋಗದಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ ಆವರಣದಲ್ಲಿ ಮಹಿಳಾ ಸುರಕ್ಷತೆ ಕುರಿತಂತೆ ಅರಿವು ಕಾರ್ಯಕ್ರಮವನ್ನು ಆಯೋಜಿಸ ಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು, ಮಹಿಳೆಯರು ಮತ್ತು ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ತಂದೆ-ತಾಯಿಗಳಿಗೆ ಗೌರವ ತರುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಿಳಿಸಿದರು.

ಹಿರಿಯ ಸಿವ್ಹಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪಿ.ಎಫ್. ದೊಡ್ಡಮನಿ ಅವರು ಮಾತನಾಡಿ, ಮಹಿಳೆಯರು ಮತ್ತು ವಿದ್ಯಾರ್ಥಿಗಳು ಕಾನೂನಿನಲ್ಲಿ ಇರುವಂತಹ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ಜಾಗೃತಿ ಹೊಂದು ವುದರ ಜೊತೆಗೆ ಸಮಾಜದ ಮುಖ್ಯ ವಾಹಿನಿಯಲ್ಲಿ ಜಾಗರೂಕತೆಯಿಂದ ಇರಬೇಕೆಂದು ಮತ್ತು ಎಲ್ಲ ಮಹಿಳೆಯರು ವಿದ್ಯಾರ್ಥಿಗಳು ಉಚಿತ ಕಾನೂನು ಸೇವಾ ಪ್ರಾಧಿಕಾರದ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಹುಬ್ಬಳ್ಳಿ- ಧಾರವಾಡ ಉಪ ಪೊಲೀಸ್ ಆಯುಕ್ತರಾದ ರವೀಶ್ ಸಿ.ಆರ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ದೂರವಾಣಿ, ಮೊಬೈಲ್, ಅಂತರ್ಜಾಲವನ್ನು ಶಿಕ್ಷಣಕ್ಕಾಗಿ ಸರಿಯಾದ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಬೇಕು. ಫೇಸ್ ಬುಕ್, ಇನ್‌ಸ್ಟಾಗ್ರಾಂ ನಂತಹ ಸಾಮಾಜಿಕ ಮಾಧ್ಯಮಗಳಿಂದ ದೂರವಿದ್ದು, ಪುಸ್ತಕಗಳನ್ನು ಓದುವುದರಿಂದ ಜ್ಞಾನ ವಿಸ್ತಾರವಾಗಿ ಜೀವನದಲ್ಲಿ ಗುರಿ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಪದ್ಮಾವತಿ ಜಿ., ಅವರು ಮಾತನಾಡಿ, ವಿದ್ಯಾರ್ಥಿಗಳು, ತಮ್ಮ ವಿದ್ಯಾರ್ಥಿ ಜೀವನವನ್ನು ಸರಿಯಾಗಿ ರೂಪಿಸಿಕೊಂಡರೆ, ಮುಂದಿನ ದಿನಮಾನಗಳಲ್ಲಿ

ಉನ್ನತ ಸ್ಥಾನ ಪಡೆದು ಸಾಧಕರಾಗಬಹುದು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ ಅವರು ಮಾತನಾಡಿ, ಈಗೀನ ದಿನಮಾನಗಳಲ್ಲಿ ಮಹಿಳೆಯರು ಮತ್ತು ವಿದ್ಯಾರ್ಥಿಗಳು ಜೀವನದಲ್ಲಿ ಮಾನಸಿಕ ಒತ್ತಡದಿಂದಾಗಿ ಆತ್ಮಹತ್ಯೆ ಅಂತಹ ಹೀನ ಕೃತ್ಯಗಳಿಗೆ ಒಳಗಾಗುತ್ತಿದ್ದಾರೆ. ಅಂತಹ ಮಹಿಳೆಯರು ಮತ್ತು ವಿದ್ಯಾರ್ಥಿಗಳಿಗೆ ಆಪ್ತಸಮಾಲೋಚನೆ ಮಾಡಿ, ಮಾನಸಿಕ ಒತ್ತಡಿಂದ ದೂರವಿರಲು ನಮ್ಮ ಇಲಾಖೆಯಿಂದ ಟೆಲಿ ಮಾನಸಾ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಇದರ ಸದುಪಯೋಗಪಡೆದುಕೊಂಡು ಮಹಿಳೆಯರು ಮತ್ತು ವಿದ್ಯಾರ್ಥಿಗಳು ಜಾಗೃತಿ ಹೊಂದುವುದರ ಜೊತೆಗೆ ಆರೋಗ್ಯಕರ ಜೀವನಶೈಲಿಯನ್ನು ತಮ್ಮದಾಗಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ, ಕರ್ನಾಟಕ ವಿಶ್ವವಿದ್ಯಾಲಯ ಕುಲಸಚಿವ ಚನ್ನಪ್ಪ ಎ. ಮಾತನಾಡಿ, ವಿದ್ಯಾರ್ಥಿಗಳು ಯಾವುದೇ ಸಮಯದಲ್ಲಿಯೂ ಸಹ ಎಂತಹ ಸಮಸ್ಯೆಗಳು ಎದುರಾದರೂ ಅವುಗಳನ್ನು ಎದುರಿಸಿ ನಿಲ್ಲುವ ಮನೋಭಾವನೆಯನ್ನು ಬೆಳೆಸಿಕೊಂಡು ವಿದ್ಯಾರ್ಥಿಗಳು ಜಾಗೃತಿ ವಹಿಸಿಬೆಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಗೋಪಾಲ ಲಮಾಣಿ ಸೇರಿದಂತೆ ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಸಿಬ್ಬಂದಿಗಳು, ಇಲಾಖೆಗಳ ಅಧಿಕಾರಿಗಳು, ಕವಿವಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸಬೇಕು

ಧಾರವಾಡ: ಸಣ್ಣ ವಯಸ್ಸಿನ ಮಕ್ಕಳನ್ನು ವಿದ್ಯೆ ಕಲಿಯುವ ಹೊತ್ತಿನಲ್ಲಿ ದುಡಿಮೆಗೆ ಕಳಿಸಬಾರದು. ಇದು ಅಪರಾಧ. ಸರಕಾರ, ಸಂವಿಧಾನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಕಾನೂನು ರಚಿಸಿ, ಜಾರಿಗೊಳಿಸಿವೆ. ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸಲು ನಾವು ಆದ್ಯತೆ ನೀಡಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಧಾರವಾಡದ ಭಾರತ ಪ್ರೌಢಶಾಲೆಯ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತವಾಗಿ ಆಯೋಜಿಸಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ, ಮಾತನಾಡಿದ ಅವರು, ಬಾಲ ಮತ್ತು ಕಿಶೋರ ಮಕ್ಕಳನ್ನು ದುಡಿಮೆಗೆ ಕಳಿಸಬಾರದು. ಅವರಿಗೆ ಉತ್ತಮ ಸಂಸ್ಕಾರ ನೀಡಿ, ಶಿಕ್ಷಣ ಮತ್ತು ಕೌಶಲಭರಿತ ತರಬೇತಿಯನ್ನು ನೀಡಬೇಕೆಂದು ತಿಳಿಸಿದರು.

ಮಕ್ಕಳನ್ನು ಬೆಳೆಸುವಾಗ ಹೆಣ್ಣು ಗಂಡು ಎಂಬ ಭೇದವಿರಬಾರದು. ಇಬ್ಬರನ್ನು ಸಮಾನವಾಗಿ ಕಾಣಬೇಕು. ಸಂವಿಧಾನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕಾಗಿ ಅವರಿಗೆ ಕಲ್ಪಿಸಿದೆ ಎಂದರು. ಪ್ರತಿಯೊಬ್ಬರೂ ಮಕ್ಕಳ ಉತ್ತಮ ಭವಿಷ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ದೇಶದ ಭವಿಷ್ಯ ಭಾವಿ ಪ್ರಜೆಗಳ ಕೈಯಲ್ಲಿದೆ. ಅವರ ಊಟ, ಆಟ, ಪಾಠದ ಜೊತೆಗೆ ಉತ್ತಮ ಸಂಸ್ಕಾರ, ರಾಷ್ಟ್ರ ಪ್ರೇಮ, ದೇಶಾಭಿಮಾನ ಬೆಳೆಸಲು ಪ್ರಾಮುಖ್ಯತೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಕ್ಕಳು ಟಿ.ವಿ, ಮೊಬೈಲ್ ಎಂದು ಸಮಯ ಹಾಳು ಮಾಡದೇ, ಓದು, ಆಟ, ಪಾಠದ ಬಗ್ಗೆ ಗಮನ ಹರಿಸಬೇಕು. ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಮಕ್ಕಳಿಗೆ ಯಾವುದೇ ರೀತಿಯ ದೈಹಿಕ, ಮಾನಸಿಕ ಕಿರುಕುಳ ಆದಾಗ ಮಕ್ಕಳ ಸಹಾಯವಾಣಿ 1098 ಗೆ ಕರೆ ಮಾಡಿ ತಿಳಿಸಬೇಕು. ತೊಂದರೆ, ಕಿರುಕುಳ, ಹಲ್ಲೆ ಆದಾಗ ಭಯಪಡದೆ ಶಾಲೆಯ ಶಿಕ್ಷಕರಿಗೆ, ಪಾಲಕರಿಗೆ ಅದರಲ್ಲೂ ವಿಶೇಷವಾಗಿ ಮನೆಯಲ್ಲಿ ತಾಯಿಗೆ ಮಾಹಿತಿ ನೀಡಬೇಕು. ಇದು ಎಲ್ಲ ಮಕ್ಕಳಿಗೂ ಅನ್ವಯಿಸುತ್ತದೆ. ಬಾಲ್ಯವಿವಾಹ, ಒತ್ತಾಯದ ದುಡಿಮೆ ತಡೆಯಲು ನೇರವಾಗುತ್ತದೆ ಎಂದರು. ಮಕ್ಕಳಿದ್ದಾಗಲೇ,

ಮನುಷ್ಯ ಮನುಷ್ಯನಾಗಿ ಹೇಗೆ ಬದುಕಬೇಕು ಎಂಬ ಅರಿವನ್ನು ಅವರಲ್ಲಿ ಮೂಡಿಸುವ ಅಗತ್ಯವಿದೆ. ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪಿ.ಎಫ್ ದೊಡ್ಡಮನಿ ಅವರು, ದೇಶದಲ್ಲಿ ಬಡತನ ಮತ್ತು ಶಿಕ್ಷಣದ ಕೊರತೆಯಿಂದಾಗಿ ಬಾಲ ಕಾರ್ಮಿಕ ಪದ್ಧತಿ ಇಂದಿಗೂ ಮುಂದುವರಿದೆ. ಮಕ್ಕಳ ವಿದ್ಯೆಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಕಡ್ಡಾಯ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕಾಗಿದೆ. ಇದರ ಬಗ್ಗೆ ಅರಿವು ಮೂಡಿಸಬೇಕೆಂದು ಹೇಳಿದರು.

ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಸ್ ಎಸ್ ಕೆಳದಿಮಠ ಅವರು ಬಾಲ ಕಾರ್ಮಿಕ ವಿರೋಧಿ ಕುರಿತ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಇದೇ ಸಂದರ್ಭದಲ್ಲಿ ಬಾಲಕಾರ್ಮಿಕ ಪದ್ಧತಿಯಿಂದ ಬಿಡುಗಡೆಯಾಗಿ ಶಾಲಾ ಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ, ಜಿಲ್ಲಾಧಿಕಾರಿಗಳು ಶೈಕ್ಷಣಿಕ ಕಿಟ್ ವಿತರಿಸಿದರು.

ಬಾಲ ಕಾರ್ಮಿಕ ಯೋಜನಾ ಸಂಘದ ಯೋಜನಾ ನಿರ್ದೇಶಕ ಬಸವರಾಜ ಪಂಚಾಕ್ಷರಿಮಠ ಸ್ವಾಗತಿಸಿದರು.

ಸಹಾಯಕ ಕಾರ್ಮಿಕ ಆಯುಕ್ತೆ ಶ್ವೇತಾ ಎಸ್., ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಮಿಕ ಅಧಿಕಾರಿ ಲಲಿತಾ ಸಾತೇನಹಳ್ಳಿ ವಂದಿಸಿದರು.

ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು, ಅಧಿಕಾರಿಗಳು ಪ್ರಾಮಾಣಿಕ ತನಿಖೆ ನಡೆಸಬೇಕು: ಬೊಮ್ಮಾಯಿ

ಗದಗ: ರೇಣುಕಸ್ವಾಮಿ ಕೊಲೆ ಗಂಭೀರ ಪ್ರಕರಣವಾಗಿದ್ದು ಈ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆ ಸಿಗುವವರೆಗೂ ಅಧಿಕಾರಿಗಳು ಚುರುಕುತನ, ನಿಯತ್ತಿನ ತನಿಖೆ ನಡೀಬೇಕು ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಮಾನವೀಯವಾಗಿ ವರ್ತಿಸುವ ಅಧಿಕಾರ ಯಾರಿಗೂ ಇಲ್ಲ. ಅಧಿಕಾರದಲ್ಲಿ ಇರುವವರು ಇರಬಹುದು, ಸೆಲೆಬ್ರಿಟಿ ಆಗಬಹುದು. ಯಾರಿಗೂ ವಿಶೇಷ ಅಧಿಕಾರ ಇಲ್ಲ. ಕಾನೂನಿನ ಮುಂದೆ ನಾವೆಲ್ಲರೂ ಸಮಾನರು. ಕಾನೂನನ್ನು ಕೈಗೆ ತೆಗೆದುಕೊಳ್ಳುವುದೇ ಅಪರಾಧ. ಅದು ಮರ್ಡರ್ ಆಗುವ ಮಟ್ಟಕ್ಕೆ ಹೋದರೆ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಕೊಲೆಯಲ್ಲಿ ಹಲವಾರು ರೀತಿ ಇವೆ. ಇದು ಕಾನ್ಪರೆಸಿ ಮಾಡಿ ಮರ್ಡರ್ ಮಾಡಿರುವ ಪ್ರಕರಣ. ಇದೊಂದು ಗಂಭೀರ ಪ್ರಕರಣ, ದರ್ಶನ್ ಪ್ರಕರಣದಲ್ಲಿ ಆರಂಭದಲ್ಲಿ ತನಿಖೆ ಚುರುಕಾಗಿ ನಡೀತಿದೆ. ಕೊನೆಯವರೆಗೂ ಇದೇ ಚುರುಕುತನ, ನಿಯತ್ತು ತನಿಖೆಯಲ್ಲಿರಬೇಕು. ಹಾಗಾದಾಗ ಮಾತ್ರ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ ಎಂದು ಹೇಳಿದರು.

ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ನಾನಿನ್ನು ರಾಜೀನಾಮೆ ಕೊಟ್ಟಿಲ್ಲ. ಇಂದಿಗೂ ನಾನು ಶಿಗ್ಗಾಂವಿ ಕ್ಷೇತ್ರದ ಶಾಸಕ. ನಾನು ರಾಜಿನಾಮೆ ಕೊಟ್ಟ ನಂತರ ಉಪಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುತ್ತದೆ ಎಂದರು.

ತಮ್ಮ ಪುತ್ರನಿಗೆ ಉಪ ಚುನಾವಣೆಯಲ್ಲಿ ಟಿಕೆಟ್ ನೀಡುವ ವಿಚಾರದ ಕುರಿತು ಕೇಳಿದ ಪ್ರಶ್ನೆಗೆ ಟಿಕೆಟ್ ವಿಚಾರದಲ್ಲಿ ಪಕ್ಷ ತೀರ್ಮಾನ ಮಾಡುತ್ತದೆ. ಪಕ್ಷ ಮಾಡುವ ತೀರ್ಮಾನಕ್ಕೆ ನಾವು ಬದ್ಧವಾಗಿರಬೇಕು. ಪಕ್ಷ ಯಾರಿಗೇ ಟಿಕೆಟ್ ಕೊಟ್ಟರು ಅವರ ಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದರು.

ಕೇಂದ್ರ ಸಂಪುಟದಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯದ ಪ್ರಶ್ನೆಯೇ ಇಲ್ಲ. ಕರ್ನಾಟಕಕ್ಕೆ ಹೆಚ್ಚು ಸಚಿವ ಸ್ಥಾನಗಳು ಸಿಕ್ಕಿವೆ. ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾಗಿದ್ದಾರೆ.

ಎನ್.ಡಿ.ಎ ಅಭ್ಯರ್ಥಿಯಾಗಿ ಮೋದಿ ಅವರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಭಾಗಿಯಾದ ಸೌಭಾಗ್ಯ ನನ್ನದು ಎಂದರು.

ಸಫಾಯಿ ಕರ್ಮಚಾರಿಗಳಿಗೆ ಸೌಲಭ್ಯ ಸಿಗಬೇಕು

ಧಾರವಾಡ: ಸಫಾಯಿ ಕರ್ಮಚಾರಿಗಳಾಗಿ ಕಾರ್ಯನಿರ್ವಹಿಸುವ ಪೌರ ಕಾರ್ಮಿಕರಿಗೆ ರಾಷ್ಟ್ರೀಯ ಮತ್ತು ರಾಜ್ಯ ಸರಕಾರಗಳಿಂದ ಕಾನೂನಾತ್ಮಕವಾಗಿ ಸೀಗಬೇಕಾದ ಎಲ್ಲ ಸೌಕರ್ಯ, ಸೌಲಭ್ಯಗಳನ್ನು ಪೂರೈಸುವುದು ಆಯಾ ಸ್ಥಳೀಯ ಸಂಸ್ಥೆ, ಇಲಾಖೆಗಳ ಮುಖ್ಯಸ್ಥರ ಕರ್ತವ್ಯವಾಗಿದೆ. ಪೌರಕಾರ್ಮಿಕರಿಗೆ ಸಿಗಬೇಕಾದ ಸವಲತ್ತುಗಳನ್ನು ನೀಡುವಲ್ಲಿ ಅನಗತ್ಯ ವಿಳಂಬ ಅಥವಾ ಅವುಗಳನ್ನು ತೀರಸ್ಕರಿಸಿದರೆ ಅಂತಹ ಅಧಿಕಾರಿಗಳ ಮೇಲೆ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳಲು ಸರಕಾರಕ್ಕೆ ಶಿಫಾರಸ್ಸು ಮಾಡುವದಾಗಿ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ವೆಂಕಟೇಶನ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಸಫಾಯಿ ಕರ್ಮಚಾರಿಗಳ ಸೌಲಭ್ಯ ಮತ್ತು ಸಮಸ್ಯೆಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ಜರುಗಿಸಿ, ಮಾತನಾಡಿದರು. ಜಿಲ್ಲೆಯ ನಗರಸ್ಥಳೀಯ ಸಂಸ್ಥೆಗಳಲ್ಲಿ, ಸರಕಾರದ ಸ್ವಾಯತ್ತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರಿಗೆ ಕನಿಷ್ಠ ವೇತನ ಖಾತರಿಪಡಿಸಬೇಕು. ಅವರಿಗೆ ಉತ್ತಮ ಉಪಹಾರ, ಊಟ ನೀಡಬೇಕು. ಪುರುಷ ಮತ್ತು ಮಹಿಳಾ ಪೌರ ಕಾರ್ಮಿಕರಿಗೆ ಪ್ರತ್ಯೇಕ ಶೌಚಾಲಯ, ವಿಶ್ರಾಂತಿ ಕೊಠಡಿ ಕಲ್ಪಿಸಬೇಕು. ಸಂರಕ್ಷಣ ಕವಚ, ಸಮವಸ್ತ್ರ, ಗಮ್‌ಬೂಟ್ ವಿತರಿಸಬೇಕು. ಪ್ರತಿ ಸಫಾಯಿ ಕರ್ಮಚಾರಿಗೆ ನ್ಯಾಯಯುತವಾಗಿ ಸೀಗಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಅಧ್ಯಕ್ಷ ಎಂ.ವೆಂಕಟೇಶನ್ ಹೇಳಿದರು.

ಸಫಾಯಿ ಕರ್ಮಚಾರಿಗಳಿಂದ ಸಮಸ್ಯೆ, ದೂರುಗಳನ್ನು ಖುದ್ದು ಆಲಿಸಿ, ಸಂಬಂಧಿಸಿದ ಅಧಿಕಾರಿಗಳಿಂದ ಅವರು ಉತ್ತರ ಪಡೆದರು. ಕಲಘಟಗಿ, ಅಳ್ನಾವರ ಪಟ್ಟಣ ಪಂಚಾಯಿತಿಗಳಲ್ಲಿ ಪೌರ ಕಾರ್ಮಿಕರಿಗೆ ನಿಯಮಿತವಾಗಿ ಮಾಸಿಕ ವೇತನ ಆಗುತ್ತಿಲ್ಲ ಎಂಬುದನ್ನು ತಿಳಿದು, ಅಲ್ಲಿನ ಮುಖ್ಯಾಧಿಕಾರಿಗಳಿಗೆ ಮುಂದಿನ ಎರಡು ಮೂರು ದಿನಗಳಲ್ಲಿ ವೇತನ ಪಾವತಿಸುವಂತೆ ಅಧ್ಯಕ್ಷರು ನಿರ್ದೇಶನ ನೀಡಿದರು.

ಮಹಿಳಾ ಪೌರ ಕಾರ್ಮಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು. ಯಾವುದೇ ರೀತಿಯ ಲೈಂಗಿಕ ಕಿರುಕುಳ, ಮಾನಸಿಕ ಹಿಂಸೆ, ಅನಗತ್ಯ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮಹಿಳೆಯರ ಸುರಕ್ಷತೆಗಾಗಿ ಮಹಿಳಾ ಆಂತರಿಕ ಸಮಿತಿ ರಚಿಸಬೇಕೆಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ ಪ್ರಭಾರಿ ಸಿಇಓ ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಮಾತನಾಡಿ, ಪೌರ ಕಾರ್ಮಿಕರಿಗೆ ಎಲ್ಲ ಹಕ್ಕುಗಳನ್ನು ಅನುಭವಿಸಲು ಅವಕಾಶವಿದೆ. ಕನಿಷ್ಠ ವೇತನ ನೀಡುವಲ್ಲಿ ಅಥವಾ ವೇತನ, ಭತ್ಯೆಗಳಲ್ಲಿ ತಾರತಮ್ಯವಾದರೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಪರಿಶೀಲಿಸಿ, ಸ್ವಯಂ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಬೇಕು. ಕಾರ್ಮಿಕ ಇಲಾಖೆ ಆದೇಶಗಳನ್ನು ಇಲಾಖೆಯ ಅಧಿಕಾರಿಗಳು ಕಟ್ಟು ನಿಟ್ಟಾಗಿ ಜಾರಿಗೊಳಿಸಬೇಕೆಂದು ಸೂಚಿಸಿದರು.

ಪೌರಕಾರ್ಮಿಕರು ಸಮಸ್ಯೆಗಳಿದ್ದಲ್ಲಿ ನೇರವಾಗಿ ಜಿಲ್ಲಾಧಿಕಾರಿ ಕಚೇರಿಗೆ ಬಂದು ದೂರು ಸಲ್ಲಿಸಬಹುದು ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ ಅವರು ಮಾತನಾಡಿ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಎಲ್ಲ ಕಾರ್ಮಿಕರಿಗೆ ಸರಕಾರದ ಆದೇಶದಂತೆ ಬೆಳಿಗ್ಗೆ ಉಪಹಾರ, ಮಧ್ಯಾಹ್ನ ಊಟ, ಸಮವಸ್ತ್ರ ಹಾಗೂ ಸುರಕ್ಷಾ ಪರಿಕರಗಳನ್ನು ನೀಡಲಾಗಿದೆ. ಮ್ಯಾನ್ ಹೋಲ್ ಸ್ವಚ್ಛತೆಗೆ ಮಾನವ ಬಳಕೆಯನ್ನು ನಿಷೇಧಿಸಲಾಗಿದೆ. ಜಟ್ಟಿಂಗ್ ಮಶೀನ್‌ಗಳನ್ನು ಬಳಸಲಾಗುತ್ತದೆ. ಪೌರ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಗೆ ಪ್ರಾಮುಖ್ಯತೆ ನೀಡಿ, ಅವರಿಗೆ ಎಲ್ಲ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಹೇಳಿದರು.

ಪಟ್ಟಣ ಪಂಚಾಯತ ಕಾರ್ಯಾಲಯ, ಶಿರಹಟ್ಟಿ

ಕ್ರಸಂ:ಪಪಂಶಿ/15ನೇಹಸಾಮೂಅ/ಟೆಂಡರ/2024–25/01 ದಿನಾಂಕ:11–06–2024

(ಅಲ್ಪಾವಧಿ ಟೆಂಡರ್ ಪ್ರಕಟಣೆ–ಇ–ಪ್ರೋಕ್ಯೂರಮೆಂಟ್ ಮೂಲಕ)

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಶಿರಹಟ್ಟಿ ಇವರಿಂದ ಶಿರಹಟ್ಟಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಕರ್ನಾಟಕ ಪಬ್ಲಿಕ–ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಸನ್ 2020–21 ನೇ ಸಾಲಿನ 15ನೇ ಹಣಕಾಸು ಅನುದಾನ, ಸನ್ 2022–23 ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಅನುದಾನದ ಇಂಡೆಂಟ್ ನಂ–18435,13075/CALL3(ST) ಈ ಕೆಳಗೆ ನಮೂದಿಸಿದ ಕಾಮಗಾರಿಗಳ ಒಟ್ಟು ಮೊತ್ತ ರೂ 99.00 ಲಕ್ಷ ನಿರ್ವಹಣೆಗಾಗಿ ಕೆ.ಡಬ್ಲ್ಯು–1 & 2 ದಸ್ತಾವೇಜ್‌ನಲ್ಲಿ ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಇಂದನ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.ಪ್ರೊಕ್ಯೂರಮೆಂಟ್ ದಾಖಲೆಗಳಿಗಾಗಿ https://kppp.karnataka.gov.in/#/portal/portal-home ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ ಸಲ್ಲಿಸುವುದು.

1. ಇ–ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 18–06–2024 ಸಂಜೆ 5:00ರ ವರೆಗೆ** 2. ಟೆಂಡರನ್ನು ತೆರೆಯುವ **ದಿನಾಂಕ ಮತ್ತು ಸಮಯ :19–06–2024 ರಂದು ಸಾಯಂಕಾಲ 5:30 ಗಂಟೆಗೆ.**

ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದು ಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯ ವೆಬ್‌ಸೈಟ್ www.shirahattitown.gov.in. ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪ್ರೋಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/–ಶ್ರೀ ಸಿದ್ದರಾಯ ಕಟ್ಟಿಮನಿ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಶಿರಹಟ್ಟಿ
ಸಹಿ/– ಶ್ರೀ ಅನೀಲ ಬಡಿಗೇರ, ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ ಶಿರಹಟ್ಟಿ

ವಾ.ಸಾ.ಇ/ಗದಗ/39/ದೇಶಪಾಂಡೆಪಬ್ಲಿಸಿಟಿ/2024–25

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/02/2024–25 ದಿನಾಂಕ: 11–06–2024

ಕೆಪಿಪಿ ಪೋರ್ಟಲ್ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA, Muzarai, Deposite, MP, Viveka Yojane, Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **28–06–2024 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ಕೆಪಿಪಿ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/322/ಅಡ್ವರ್ಟೋ/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ

eepredkpl@gmail.com,

ಸಂ.ಪಂರಾಇಂ/ ವಿಕೊ/ತಾ.ಶಾ/ಸ.ಇಂ/ಟೆಂಡರ/2024–25/410 ದಿನಾಂಕ:13.06.2024

ಅಲ್ಪಾವಧಿ ಟೆಂಡರ್ ಪಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW– 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್/ಪಿ.ಡಬ್ಲೂ.ಡಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ **"kppp.karnataka.gov.in ಪೋರ್ಟಲ್"** ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ 2023–24 ಕೆಕೆಆರಡಿಬಿ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಿಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು **"kppp.karnataka.gov.in ಪೋರ್ಟಲ್"** ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ **kppp.karnataka.gov.in portal** ರಲ್ಲಿ ಪಡೆಯಬಹುದು.ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 17.06.2024 ರ ನಂತರ ದಿಂದ **Download** ಮಾಡಿಕೊಳ್ಳಬಹುದಾಗಿದೆ.

ಟೆಂಡರ ವಿವರ: ಕಾಮಗಾರಿಯನ್ನು ಪೂರ್ಣಗೊಳಿಸಲುನಿಗಧಿತ ಕಾಲಾವಧಿ : **03 ತಿಂಗಳು ಕ್ರಮವಾಗಿ.** ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು **: 17.06.2024 ಸಮಯ 10.00 ಗಂಟೆ ನಂತರ ದಿಂದ 27.06.2024 ಸಮಯ 16.00 ಗಂಟೆವರೆಗೆ.** ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ **: 17.06.2024 ಸಮಯ 10.00 ಗಂಟೆ ನಂತರ ದಿಂದ: 27.06.2024 ಸಮಯ 16.30 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ : **28.06.2024 ಕಚೇರಿ ಸಮಯದಲ್ಲಿ.** ಕೆಡಬ್ಲೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : **ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು**

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು ಪಂ.ರಾ.ಇಂ. ವಿಭಾಗ ಕೊಪ್ಪಳ.

ಡಿಐಪಿಆರ್/ಕೊಪ್ಪಳ/34/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ ರಸ್ತೆ ಮೂಲಸೌಕರ್ಯ (ಟಿಇಸಿ)
ಎನ್.ಆರ್ ಚೌಕ, ಬೆಂಗಳೂರು – 560 002.

No. EE/RI-TEC/TEND/03/2024-25 Date: 13.06.2024

ಟೆಂಡರ್ ಪ್ರಕಟಣೆಗೆ ಆಹ್ವಾನ (ಐಎಫ್‌ಟಿ)
ಅಲ್ಪಾವಧಿ ಟೆಂಡರ್ ಪ್ರಕಟಣೆ (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರವರ ಕಛೇರಿ ರಸ್ತೆ ಮೂಲಸೌಕರ್ಯ (ಟಿಇಸಿ) ಬಿಬಿಎಂಪಿ, ಬೆಂಗಳೂರು ಇವರು ಮುಖ್ಯ ಆಯುಕ್ತರ ಪರವಾಗಿ, ಬಿಬಿಎಂಪಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಕಾಮಗಾರಿಗಳಿಗೆ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (viz.https://kppp.karnataka.gov.in) ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್‌ದಾರರು ಷರತ್ತು 3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. 2. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ದಿನಾಂಕ 13.06.2024 ರಿಂದ ಡೌನ್‌ಲೋಡ್ ಮಾಡುವುದು. 3. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ 28.06.2024, ಸಂಜೆ 4.00 ಗಂಟೆಯೊಳಗೆ ಸಲ್ಲಿಸಬೇಕು 4. ಇತರೆ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು/ಕಾಮಗಾರಿಯ ಅಂದಾಜು ಮೊತ್ತ/ಜಿಎಸ್‌ಟಿ ಸೇರಿದಂತೆ (ರೂ. ಲಕ್ಷಗಳಲ್ಲಿ)/ಇಎಂಡಿ (ರೂ. ಗಳಲ್ಲಿ)
1	ಆರ್ ಐ – ಬೊಮ್ಮನಹಳ್ಳಿ ವಿಭಾಗದಲ್ಲಿ 2023–24 ನೇ ಸಾಲಿಗೆ ಹೊಸ ಶೋಲ್ಡರ್ ಡ್ರೈನ್‌ಗಳ ನಿರ್ಮಾಣ, ಲೀಡ್ ಆಫ್ ಡ್ರೈನ್‌ಗಳು, ಕಲ್ವರ್ಟ್‌ಗಳು ಮತ್ತು ಇತರ ತುರ್ತು ಕಾಮಗಾರಿಗಳು (ಪರಿಶಿಷ್ಟ ಪಂಗಡ ವರ್ಗ)ಅಂದಾಜು ಮೊತ್ತ/ಜಿಎಸ್‌ಟಿ ಸೇರಿದಂತೆ (ರೂ. ಲಕ್ಷಗಳಲ್ಲಿ) : 59.35, ಇಎಂಡಿ (ರೂ. ಗಳಲ್ಲಿ) 59,500/–
2	ಆರ್ ಐ – ಮಹದೇವಪುರ ಮತ್ತು ಕೆ ಆರ್ ಪುರಂ ವಿಭಾಗದಲ್ಲಿ 2023–24 ನೇ ಸಾಲಿಗೆ ಹೊಸ ಶೋಲ್ಡರ್ ಡ್ರೈನ್‌ಗಳ ನಿರ್ಮಾಣ, ಲೀಡ್ ಆಫ್ ಡ್ರೈನ್‌ಗಳು, ಕಲ್ವರ್ಟ್‌ಗಳು ಮತ್ತು ಇತರ ತುರ್ತು ಕಾಮಗಾರಿಗಳು (ಕೆ ಆರ್ ಪುರಂ ವಿಭಾಗ) (ಪರಿಶಿಷ್ಟ ಜಾತಿ ವರ್ಗ). ಅಂದಾಜು ಮೊತ್ತ/ಜಿಎಸ್‌ಟಿ ಸೇರಿದಂತೆ (ರೂ. ಲಕ್ಷಗಳಲ್ಲಿ) : 59.35, ಇಎಂಡಿ (ರೂ. ಗಳಲ್ಲಿ) 59,500/–

ವೇಳಾಪಟ್ಟಿ:
(1) ಕೆಪಿಪಿ ಪೋರ್ಟಲ್ ನಲ್ಲಿ ಟೆಂಡರ್ ದಸ್ತಾವೇಜು ಲಭ್ಯವಿರುವ ದಿನಾಂಕ : 13.06.2024 ರಿಂದ
(2)ಪ್ರೀ ಬಿಡ್ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ : 19.06.2024 ಮಧ್ಯಾಹ್ನ 3.00 ಗಂಟೆಯವರೆಗೆ.
(3) ಪ್ರೀ ಬಿಡ್ ಮೀಟಿಂಗ್ : 19.06.2024 ಸಂಜೆ 4.30 ಗಂಟೆಗೆ
(4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28.06.2024 ಸಂಜೆ 4.00 ಗಂಟೆಯವರೆಗೆ.
(5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 29.06.2024 ಸಂಜೆ 4.30 ಗಂಟೆಯಗೆ
(6) ಆರ್ಥಿಕ ಬಿಡ್ ತೆರೆಯುವ ದಿನಾಂಕ : ಬಿಡ್ ದಾರರಿಗೆ ಮುಂದೆ ತಿಳಿಸಲಾಗುವುದು

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ (ಟಿಇಸಿ) ವಿಭಾಗ ಬಿಬಿಎಂಪಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಗರ್ಭಿಣಿಯರ ಆರೋಗ್ಯದ ದತ್ತು ಯೋಜನೆಗೆ ಅಭೂತಪೂರ್ವ ಯಶಸ್ಸು

ಸುರಕ್ಷಿತ ಹೆರಿಗೆ, ತಾಯಿ–ಮಗು ಮರಣ ಶೂನ್ಯಕ್ಕೆ ಇಳಿಕೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಗರ್ಭಿಣಿ ಮಹಿಳೆಯರ ಆರೋಗ್ಯವನ್ನು ಸುರಕ್ಷಿತವಾಗಿ ಕಾಪಾಡುವ ದೃಷ್ಟಿಯಿಂದ, ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ಅವರ ಆಲೋಚನೆಯಲ್ಲಿ ಮೂಡಿಬಂದ ಗರ್ಭಿಣಿ ಮಹಿಳೆಯರ ಆರೋಗ್ಯದ ಕಾಳಜಿಯನ್ನು ದತ್ತು ನೀಡುವ ಯೋಜನೆಗೆ ಅಭೂತಪೂರ್ವ ಯಶಸ್ಸು ದೊರೆತಿದೆ. ಈ ಯೋಜನೆಯಡಿ ಗುರುತಿಸಲಾಗಿದ್ದ ಎಲ್ಲಾ ಮಹಿಳೆಯರಿಗೆ ಸುರಕ್ಷಿತವಾಗಿ ಹೆರಿಗೆ ಆಗಿದ್ದು, ಈ ಸಂದರ್ಭದಲ್ಲಿ ಯಾವುದೇ ತಾಯಿ ಮಗುವಿನ ಮರಣ ಸಂಭವಿಸಿಲ್ಲ.

ಸೆಪ್ಟಂಬರ್ 2023 ರಲ್ಲಿ ಆರಂಭಿಸಿದ ಈ ಯೋಜನೆಯಡಿ ಆರೋಗ್ಯ ಇಲಾಖೆಯ ಆರ್.ಸಿ.ಎಚ್. ತಂತ್ರಾಂಶದಲ್ಲಿ ದಾಖಲಾದ 358 ಗರ್ಭಿಣಿ ಮಹಿಳೆಯರಿಗೆ , ಅವರಿಗೆ ದೊರೆಯಬೇಕಾದ ಆರೋಗ್ಯ ಸೇವೆಗಳನ್ನು ಸಕಾಲದಲ್ಲಿ ದೊರಕಿಸಲು ಮತ್ತು ಅವರು ಸುರಕ್ಷಿತವಾಗಿ, ಆರೋಗ್ಯವಂತ ಶಿಶುವಿಗೆ ಜನ್ಮ ನೀಡುವವರೆಗೆ , ಅವರನ್ನು ನಿರಂತರ ಅನುಸರಣೆ ಮಾಡುವ ಜವಾಬ್ದಾರಿಯನ್ನು , ಜಿಲ್ಲಾಧಿಕಾರಿ , ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೇರಿದಂತೆ ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಮತ್ತು ತಾಲೂಕುಮಟ್ಟದ ಅಧಿಕಾರಿಗಳಿಗೆ,ಒಬ್ಬ ಮಹಿಳೆಯ ಯೋಗಕ್ಷೇಮದ ವಿಚಾರಣೆಯ ದತ್ತು ನೀಡಲಾಗಿತ್ತು.

ಈ ಯೋಜನೆಯಡಿ ಗುರುತಿಸಲಾಗಿದ್ದ ಮಹಿಳೆಯರಲ್ಲಿ ಮೇ 2024 ರ ವೇಳೆಗೆ 345 ಮಹಿಳೆಯರಿಗೆ ಸುರಕ್ಷಿತವಾಗಿ ಹೆರಿಗೆ ಆಗಿದ್ದು, ತಾಯಿ ಮತ್ತು ಮಗು ಇಬ್ಬರೂ ಸಂಪೂರ್ಣ ಆರೋಗ್ಯವಾಗಿದ್ದಾರೆ. ವಿವಿಧ ಆರೋಗ್ಯ ಸಮಸ್ಯೆಗಳಿಂದ 13 ಮಹಿಳೆಯರಿಗೆ ಗರ್ಭಪಾತವಾಗಿದೆ. ಸುರಕ್ಷಿತ ಹೆರಿಗೆಯಾಗಿರುವ ಮಹಿಳೆಯರಲ್ಲಿ 121 ಮಂದಿಗೆ ಸಿ ಸೆಕ್ಷನ್ ಹೆರಿಗೆಯಾಗಿದ್ದರೆ, 224 ಮಂದಿಗೆ ಸಾಮಾನ್ಯ ಹೆರಿಗೆಯಾಗಿರುವುದು ಗಮನಾರ್ಹವಾಗಿದೆ.

ದತ್ತು ನೀಡಿದ ಸಂಬಂಧಪಟ್ಟ ಅಧಿಕಾರಿಗಳು , ತಮಗೆ ದತ್ತು ವಹಿಸಲಾದ ಗರ್ಭಿಣಿ ಮಹಿಳೆಯರಿಗೆ ವಿವಿಧ ಆರೋಗ್ಯ ಸೇವೆಗಳನ್ನು ಸಕಾಲದಲ್ಲಿ ಪಡೆದಿದ್ದಾರೆಯೇ ಎಂದು ನಿಯಮಿತವಾಗಿ ದೂರವಾಣಿ ಮುಖಾಂತರ ಸಂಪರ್ಕಿಸಿ ಖಚಿತಪಡಿಸಿಕೊಳ್ಳುತ್ತಿದ್ದು ಹಾಗೂ ಆರೋಗ್ಯ ಸೇವೆಗಳನ್ನು ಪಡೆಯದೇ ಇದ್ದಲ್ಲಿ ಸಂಬಂಧಿಸಿದ ನೋಡೆಲ್ ಅಧಿಕಾರಿಗಳನ್ನು ಅಥವಾ ತಾಲೂಕು ವೈದ್ಯಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ , ಸದರಿಯವರಿಗೆ ಸಕಾಲದಲ್ಲಿ ಸೇವೆಗಳು ದೊರಕುವಂತೆ ಮಾಡುವ ಮೂಲಕ ಯೋಜನೆ ಸಂಪೂರ್ಣ ಯಶಸ್ವಿಯಾಗುವಂತೆ ಮಾಡಿದ್ದಾರೆ.



> ಜಿಲ್ಲಾಧಿಕಾರಿಗಳು ನನಗೆ ಪ್ರತೀ ತಿಂಗಳು ಕರೆ ಮಾಡುತ್ತಿದ್ದರು. ಅಂಗನವಾಡಿಯಿಂದ ನಿಯಮಿತವಾಗಿ ಪೌಷ್ಟಿಕ ಆಹಾರ ದೊರೆಯುತ್ತಿದೆಯೇ, ವೈದ್ಯರು ಚೆಕಪ್ ಮಾಡಿಸಲು ಹೋದಾಗ ದೊರೆಯುತ್ತಾರೆಯೇ, ಎಲ್ಲಾ ಔಷಧಗಳು ಆಸ್ಪತ್ರೆಯಿಂದ ಉಚಿತವಾಗಿ ದೊರೆಯುತ್ತಿವೆಯೇ, ಏನದರೂ ಸಮಸ್ಯೆ ಇದೆಯೇ ಎಂದು ಸಂಪೂರ್ಣವಾಗಿ ನನ್ನ ಆರೋಗ್ಯದ ಕಾಳಜಿ ವಿಚಾರಿಸುತ್ತಿದ್ದರು. ಪ್ರಸ್ತುತ ನನಗೆ ಹೆರಿಗೆಯಾಗಿದ್ದು ನಾನು ಮತ್ತು ಮಗು ಆರೋಗ್ಯವಾಗಿದ್ದೇವೆ.
>
> –ಕೋಮಲ್, ಮಲ್ಲಾಪುರ, ಜಿಲ್ಲಾಧಿಕಾರಿಗಳು ದತ್ತು ಪಡೆದ ಮಹಿಳೆ.

ಪ್ರತಿ ಗರ್ಭಿಣಿ ಮಹಿಳೆಯರ ಆರೋಗ್ಯದ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ವಹಿಸಿದ್ದ ಕಾರಣ, ಗರ್ಭಿಣಿ ಮಹಿಳೆ ವಾಸವಾಗಿದ್ದ ಪ್ರದೇಶದ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ಕೂಡಾ ಗರ್ಭಿಣಿ ಮಹಿಳೆಯರ ಕುರಿತು ವಿಶೇಷ ಕಾಳಜಿ ವಹಿಸಿದ್ದು, ಅವರಿಗೆ ನಿಯಮಿತ ತಪಾಸಣೆ, ಆರೋಗ್ಯ ಸಂಬಂಧಿತ ಸಲಹೆ ಸೂಚನೆಗಳನ್ನು ನೀಡಿ ಅವುಗಳನ್ನು ಪಾಲನೆ ಕುರಿತಂತೆ ನಿಗಾ ಇರಿಸಿದ್ದರು.

ಈ ಯೋಜನೆಗಾಗಿ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನಲ್ಲಿ 79, ಅಂಕೋಲ 24, ಕುಮಟಾ 30, ಹೊನ್ನಾವರ 42), ಭಟ್ಕಳ 21, ಶಿರಸಿ 40, ಸಿದ್ದಾಪುರ 25, ಯಲ್ಲಾಪುರ 20, ಹಳಿಯಾಳ 43, ಮುಂಡಗೋಡು 16, ಜೊಯಿಡಾ ತಾಲೂಕಿನಲ್ಲಿ 18 ಸೇರಿದಂತೆ ಒಟ್ಟು 358 ಗರ್ಭಿಣಿ ಮಹಿಳೆಯರನ್ನು ಗುರುತಿಸಿ, ಅವರ ಯೋಗ ಕ್ಷೇಮ ವಿಚಾರಣೆಯ ಜವಾಬ್ದಾರಿಯ ಕಾರ್ಯವನ್ನು ಜಿಲ್ಲಾ ಮತ್ತು ತಾಲೂಕುಮಟ್ಟದ ಅಧಿಕಾರಿಗಳಿಗೆ ದತ್ತು ನೀಡಲಾಗಿತ್ತು.

ಜಿಲ್ಲೆಯಲ್ಲಿನ ಗರ್ಭಿಣಿ ಮಹಿಳೆಯರ ಸುರಕ್ಷಿತ ಆರೋಗ್ಯ ಪರಿಶೀಲನೆಯ ದತ್ತು ಕಾರ್ಯಕ್ಕೆ ಅಧಿಕಾರಿಗಳನ್ನು ನಿಯೋಜಿಸುವ ಯೋಜನೆಯು ಸಂಪೂರ್ಣ ಯಶಸ್ವಿಯಾಗಿದೆ. ಎಲ್ಲಾ ಅಧಿಕಾರಿಗಳು ತಮಗೆ ವಹಿಸಲಾಗಿದ್ದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಎಲ್ಲಾ ಗರ್ಭಿಣಿ ಮಹಿಳೆಗೆ ಸುರಕ್ಷಿತ ಹೆರಿಗೆಯಾಗಿದ್ದು, ತಾಯಿ ಮತ್ತು ಮಗು ಯಾವುದೇ ಅಪಾಯಕ್ಕೆ ಒಳಗಾಗದಂತೆ ನೋಡಿಕೊಳ್ಳಲಾಗಿದೆ.

> ಈ ಯೋಜನೆಯ ಮೂಲಕ ಜಿಲ್ಲೆಯಲ್ಲಿ ತಾಯಿ ಮತ್ತು ಶಿಶು ಮರಣವನ್ನು ಶೂನ್ಯಕ್ಕೆ ತರುವ ಉದೇಶ ಮತ್ತು ಯಾವುದೇ ಹಂತದಲ್ಲೂ ಗರ್ಭಿಣಿ ಮಹಿಳೆಯರು ಪ್ರಸವಪೂರ್ಣ ಲಿಂಗಪತ್ತೆಗೆ ಒಳಗಾಗಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ನಿಗಾವಹಿಸಲು ಹಾಗೂ ಭ್ರೂಣ ಹತ್ಯೆ ತಡೆಯಲು ಸಾಧ್ಯವಾಗಿದೆ. ಈ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಇದನ್ನು ಮುಂದುವರೆಸಲಾಗುವುದು.
>
> –ಗಂಗೂಬಾಯಿ ಮಾನಕರ , ಜಿಲ್ಲಾಧಿಕಾರಿ , ಉತ್ತರ ಕನ್ನಡ ಜಿಲ್ಲೆ.

> ನನ್ನ ಆರೋಗ್ಯದ ಜವಾಬ್ದಾರಿ ವಹಿಸಿದ್ದ ಅಧಿಕಾರಿಗಳು, ಆರಂಭದಿಂದಲೂ ನನಗೆ ಕರೆ ಮಾಡಿ, ಯೋಗಕ್ಷೇಮ ವಿಚಾರಿಸುತ್ತಿದ್ದರು. ನನಗೆ 8 ನೇ ತಿಂಗಳಲ್ಲಿ ಆರೋಗ್ಯದಲ್ಲಿ ಸಮಸ್ಯೆ ಕಂಡು ಬಂದಿದ್ದು ತಕ್ಷಣ ಅಧಿಕಾರಿಗಳಿಗೆ ಮಾಹಿತಿ ನೀಡಿದೆ. ಅವರು ಕೂಡಲೇ ಆರೋಗ್ಯದ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ, ಅಗತ್ಯ ಚಿಕಿತ್ಸೆಗೆ ಎಲ್ಲಾ ವ್ಯವಸ್ಥೆ ಮಾಡಿದರು. ನಂತರ 9 ನೇ ತಿಂಗಳಲ್ಲಿ ಆಸ್ಪತ್ರೆಗೆ ದಾಖಲಾಗುವುದರಿಂದ , ಹೆರಿಗೆಯಾಗಿ ಮನೆಗೆ ಬರುವವರೆಗೆ ಕರೆ ಮಾಡಿ ಆರೋಗ್ಯ ವಿಚಾರಿಸುತ್ತಿದ್ದರು.
>
> –ನೂತನಗೌಡ, ದೇವಳಮಕ್ಕಿ, ಜಿಲ್ಲಾ ವಾರ್ತಾಧಿಕಾರಿ ದತ್ತು ಪಡೆದ ಮಹಿಳೆ.

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕಲಬುರಗಿ, ದೂ.: 08472–220196, www.midnglb@rediffmail.com.

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–1/ಕೆ.ಡಬ್ಲ್ಯೂ–4/2024–25/705 ದಿನಾಂಕ: 12–06–2024

–: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4) :–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ ಕೆ.ಕೆ.ಆರ್.ಡಿ.ಬಿ. ಎಸ್.ಸಿ.ಪಿ. ಯೋಜನೆ ಅಡಿ ಕಾಮಗಾರಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ, 2) ಕಾಮಗಾರಿಯ ಟೆಂಡರಗಿಟ್ಟ ಮೊತ್ತ: ರೂ. **423,48,197.61**, 3) ಗುತ್ತಿಗೆದಾರರ ಅರ್ಹತೆ ವಿವರ: 2ನೇ ದರ್ಜೆ ಮತ್ತು ಮೇಲ್ಪಟ್ಟು, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ 6,35,500.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **20–06–2024 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **21–06–2024 ಸಾಯಂಕಾಲ 17.30 ಗಂಟೆಯ ವರೆಗೆ,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **24–06–2024 ಸಾಯಂಕಾಲ 11.00 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **25–06–2024 ಸಾಯಂಕಾಲ 11.00 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/80/ಕೆ.ಎಸ್.ಎಂ.ಸಿ.&ಎ/2024–25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096910 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಅ ಸಂ: ಕಹಾಮ/ಖರೀದಿ/ಟೆಂಡರ್–652/2024–25 ದಿನಾಂಕ: 13.06.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ವ್ಯಾಪ್ತಿಯ ಘಟಕವಾದ ಪಶು ಆಹಾರ ಕಾರ್ಖಾನೆಗಳಲ್ಲಿ ಉಪಯೋಗಿಸಿದ ಹಳೆಯ ಪ್ಲಾಸ್ಟಿಕ್ ಚೀಲಗಳನ್ನು ಆರು ತಿಂಗಳ ಅವಧಿಗೆ ಮಾರಾಟ/ವಿಲೇವಾರಿ ಮಾಡುವ ಸಂಬಂಧ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ ಸಂ	ಪಶು ಆಹಾರ ಘಟಕ	ಅಂದಾಜು Kg ಗಳಲ್ಲಿ	ಇ,ಎಂ,ಡಿ(ರೂ)
1	ರಾಜಾನಕುಂಟೆ	1,00,000 Kg	16,000/–
2	ಗುಬ್ಬಿ	1,50,000 Kg	24,000/–
3	ಧಾರವಾಡ	1,72,000 Kg	24,000/–
4	ಹಾಸನ	2,40,000 Kg	43,000/–

ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 27.06.2024 ರಂದು 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ, ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ರಾಯಚೂರು

ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ರಾಯಚೂರು

ಇ–ಮೇಲ್ ವಿಳಾಸ: dsworchr315@gmail.com & ddswdraichur@gmail.com
ದೂರವಾಣಿ ಸಂ: 08532 231091

ಸಂ:ಉನಿ/ಸಕಇರಾ/ಲೆಕ್ಕ/ಸಿಆರ್/ಆಹಾರ ಟೆಂಡರ್/2024–25 ದಿನಾಂಕ:07–06–2024.

:: ಇ–ಟೆಂಡರ್ ಅಧಿಸೂಚನೆ ::

2024–25ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು/ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಗ್ರೂಪ್ 'ಎ' ರಿಂದ 'ಡಿ' ವರೆಗಿನ ಆಹಾರ ಸಾಮಗ್ರಿಗಳನ್ನು ಮತ್ತು ಇನ್ನಿತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ರಾಯಚೂರು ಜಿಲ್ಲೆಯ 5 ತಾಲೂಕುಗಳನ್ನು ಘಟಕಗಳಾಗಿ ವಿಂಗಡಿಸಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: ಉನಿ/ಸಕಇರಾ/ಲೆಕ್ಕ/ಆಹಾರ ಟೆಂಡರ್/ಸಿಆರ್/2024–25 ದಿನಾಂಕ: 07–06–2024. **2) ಟೆಂಡರ್‌ನ ಅಂದಾಜು ಮೊತ್ತ:** ರಾಯಚೂರು ತಾಲೂಕ– ರೂ.4,44,65,270/ ಮಾನ್ವಿ ತಾಲೂಕ – ರೂ.3,38,00,611/– ಸಿಂಧನೂರು ತಾಲೂಕ– ರೂ.2,07,40,688/– ಲಿಂಗಸುಗೂರು ತಾಲೂಕ – ರೂ.3,86,79,444/– ದೇವದುರ್ಗ ತಾಲೂಕ – ರೂ.2,84,49,729/– **3) ಟೆಂಡರ್‌ದಾರರು ಆನ್‌ಲೈನ್ ಮೂಲಕ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ:** 08–07–2024 ಸಂಜೆ 5.30 ಗಂಟೆ **4) ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ ಮತ್ತು ಸಮಯ ದಿನಾಂಕ:** 20–06–2024 ಮಧ್ಯಾಹ್ನ 12.30 ಗಂಟೆ (ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರಾಯಚೂರು ಕಛೇರಿಯಲ್ಲಿ) **5) ಸಾಮಗ್ರಿಗಳ ಸ್ಯಾಂಪಲ್‌ಗಳನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ ದಿನಾಂಕ:** 10–07–2024 ಸಂಜೆ 5.30 ಗಂಟೆ (ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರಾಯಚೂರು ಕಛೇರಿಯಲ್ಲಿ) **6) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ ದಿನಾಂಕ:** 15–07–2024 ಮಧ್ಯಾಹ್ನ 3.00 ಗಂಟೆ (ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರಾಯಚೂರು ಕಛೇರಿಯಲ್ಲಿ) **7) ಆರ್ಥಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ ದಿನಾಂಕ:**–24–07–2024 ಮಧ್ಯಾಹ್ನ 3.00 ಗಂಟೆ (ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರಾಯಚೂರು ಕಛೇರಿಯಲ್ಲಿ) **8) ಇ.ಎಮ್.ಡಿ ಮೊತ್ತ:** ರಾಯಚೂರು ತಾಲೂಕ – ರೂ. 6,66,979/– ಮಾನ್ವಿ ತಾಲೂಕ – ರೂ.5,07,009/– ಸಿಂಧನೂರು ತಾಲೂಕ– ರೂ.3,11,110/– ಲಿಂಗಸುಗೂರು ತಾಲೂಕ – ರೂ. 5,80,191/– ದೇವದುರ್ಗ ತಾಲೂಕ – ರೂ. 4,26,746/– **9) ಟೆಂಡರ್ ಬಗ್ಗೆ ಮಾಹಿತಿ ಪಡೆಯಬೇಕಾದಲ್ಲಿ ಅಧಿಕಾರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ:** ಉಪನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ರಂಗಮಂದಿರ ಹಿಂದುಗಡೆ, ಡಾ.ಬಿ.ಆರ್.ಅಂಬೇಡ್ಕರ್/ಡಾ.ಬಾಬು ಜಗಜೀವನ ರಾಮ್ ಸಮುದಾಯ ಭವನ ರಾಯಚೂರು ಮೊ.ಸಂ.9480843042

ನೋಂದಾಯಿತ ಆಸಕ್ತ ಮತ್ತು ಅರ್ಹ ಟೆಂಡರ್‌ದಾರರು ವೆಬ್‌ಸೈಟ್ http://kppp.karnataka.gov.in ನಲ್ಲಿ ಬಿಡ್ ದಾಖಲೆಗಳನ್ನು ಅಪ್‌ಲೋಡ್ ಮಾಡಬಹುದು.

ಸಹಿ/– ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರಾಯಚೂರು

DIP/RCR/23/KSMCA/22/2024-25

ಕೊಂದವ ನಾನಲ್ಲ

← ಮೊದಲಪುಟದಿಂದ

ಈ ವಾಹನವನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

ಪೊಲೀಸ್ ಅಧಿಕಾರಿಯೂ ಶಾಮೀಲು: ರೇಣುಕಾಸ್ವಾಮಿ ಕೊಲೆಯಾಗುತ್ತಿದ್ದಂತೆ ಆತಂಕಗೊಂಡ ಗ್ಯಾಂಗ್‌ನ ಸದಸ್ಯರಲ್ಲಿ ಒಬ್ಬರು, ಈ ಶವವನ್ನು ಏನು ಮಾಡಬೇಕು? ಮುಂದೇನು ಎನ್ನುವ ಬಗ್ಗೆ ರಾಜರಾಜೇಶ್ವರಿ ನಗರ ಪೊಲೀಸ್ ಅಧಿಕಾರಿಯೊಬ್ಬರಿಗೆ ಕರೆ ಮಾಡಿ ಕೇಳಿದ್ದಾರೆ. ಈ ವೇಳೆ ಆರ್. ಆರ್.ನಗರದ ಬದಲು ಬೇರೆ ಠಾಣಾ ವ್ಯಾಪ್ತಿಯಲ್ಲಿ ಶವ ಎಸೆಯುವಂತೆ ಆ ಪೊಲೀಸ್ ಅಧಿಕಾರಿ ಸೂಚನೆ ನೀಡಿದ್ದಾರೆ ಎನ್ನಲಾಗಿದೆ. ಇದೀಗ ಪ್ರಕರಣದಲ್ಲಿ ಆ ಪೊಲೀಸ್ ಅಧಿಕಾರಿಯನ್ನೂ ಆರೋಪಿಯನ್ನಾಗಿ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಶಾಮಿಯಾನದಿಂದ ಠಾಣೆ ಮುಚ್ಚಿದ ಪೊಲೀಸರು: ದರ್ಶನ್ ಹಾಗೂ ಅವರ ಗ್ಯಾಂಗ್‌ನ ಆರೋಪಿಗಳನ್ನು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲೇ ಬಿಗಿ ಬಂದೋಬಸ್ತ್‌ನಲ್ಲಿ ವಿಚಾರಣೆಗೊಳಪಡಿಸಲಾಗಿದೆ. ಆರೋಪಿ ವಿಚಾರಣೆ ನಡೆಯುವ ಪೊಲೀಸ್ ಠಾಣೆಗೆ ಬೆಂಗಳೂರು ಇತಿಹಾಸದಲ್ಲೇ ಮೊದಲ ಬಾರಿಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಇದರೊಂದಿಗೆ ಠಾಣೆಗೆ ಶಾಮಿಯಾನ ಹಾಕಿರುವುದು ಸಾರ್ವಜನಿಕ ವಲಯದಲ್ಲಿ ಭಾರಿ ಆಕ್ಷೇಪಕ್ಕೆ ಕಾರಣವಾಗಿದೆ.

ರೇಣುಕಾ ಪರ ನಿಂತ ಚಿತ್ರೋದ್ಯಮ

ಕೊಲೆ ಆರೋಪದಲ್ಲಿ ಬಂಧಿತನಾಗಿರುವ ದರ್ಶನ್ ಪರ ಯಾವುದೇ ಕಾರಣಕ್ಕೂ ವಕಾಲತು ವಹಿಸುವುದು ಬೇಡ ಎನ್ನುವ ತೀರ್ಮಾನ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸರ್ವಾನುಮತದಿಂದ ವ್ಯಕ್ತವಾಗಿದೆ. ಅಲ್ಲದೆ, ಮೃತ ರೇಣುಕಾಸ್ವಾಮಿ ಕುಟುಂಬದ ಪರ ನಿಲ್ಲುವುದಕ್ಕೆ ತೀರ್ಮಾನಿಸಲಾಗಿದೆ.ಗುರುವಾರ ಸಂಜೆ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸಭೆ ನಡೆಸಲಾಯಿತು. ಸಭೆಯಲ್ಲಿದ್ದ ಬಹುತೇಕರು ಈ ಪ್ರಕರಣದಲ್ಲಿ ದರ್ಶನ್ ಪರ ನಿಲ್ಲುವುದು ಬೇಡ. ರೇಣುಕಾಸ್ವಾಮಿ ಮಾಡಿರುವ ತಪ್ಪಿಗೆ ಕೊಲೆಯ ಶಿಕ್ಷೆ ನೀಡಿರುವುದು ಖಂಡನೀಯ. ಮೇಲ್ನೋಟಕ್ಕೆ ದರ್ಶನ್ ವಿರುದ್ಧ ಸಾಕ್ಷಿಗಳು ಪ್ರಬಲವಾಗಿದೆ. ಆದ್ದರಿಂದ ಈ ವಿಷಯದಲ್ಲಿ ಫಿಲ್ಮಂ ಛೇಂಬರ್ ಅಂತರ ಕಾಯ್ದುಕೊಳ್ಳಲಿದೆ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ.

ಬಿಎಸ್‌ವೈ ಬಂಧನ ಖಚಿತ?

← ಮೊದಲಪುಟದಿಂದ

ಪರಂ ಯೂಟರ್ನ್: ಯಡಿಯೂರಪ್ಪ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆ ರಾಜ್ಯದಲ್ಲಿ ಭಾರಿ ಚರ್ಚೆ ಶುರುವಾಗಿತ್ತು. ಆ ವೇಳೆಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಾತನಾಡಿ, ದೂರು ನೀಡಿರುವ ಸಂತ್ರಸ್ತೆ ಮಾನಸಿಕ ಅಸ್ವಸ್ಥೆಯ ರೀತಿಯಲ್ಲಿದ್ದಾರೆ. ಇದೇ ರೀತಿ 50ಕ್ಕೂ ಹೆಚ್ಚು ಜನರ ವಿರುದ್ಧ ದೂರು ನೀಡಿದ್ದಾಳೆ. ಆದ್ದರಿಂದ ಈ ದೂರಿನ ಸತ್ಯಾಸತ್ಯತೆ ಬಗ್ಗೆಯೇ ಅನುಮಾನವಿದೆ ಎಂದಿದ್ದರು. ಆದರೀಗ ಉಲ್ಟಾ ಹೊಡೆದಿರುವ ಪರಂ, ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಕ್ರಮವಹಿಸಬೇಕು. ಸಿಐಡಿ ತನಿಖಾಧಿಕಾರಿಗಳು ಯಡಿಯೂರಪ್ಪ ಅವರನ್ನು ಬಂಧಿಸಬೇಕೋ? ಬೇಡವೋ? ಎಂಬ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅಗತ್ಯವಿದ್ದರೆ ಬಂಧಿಸುತ್ತಾರೆ. ಈ ವಿಚಾರವಾಗಿ ನಾನು ಏನನ್ನೂ ಹೇಳುವುದಿಲ್ಲ ಎಂದಿದ್ದಾರೆ.

ನಿರೀಕ್ಷಣಾ ಜಾಮೀನಿಗೆ ಅರ್ಜಿ: ಈ ನಡುವೆ ಯಡಿಯೂರಪ್ಪ ಅವರು ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಗುರುವಾರ ಅರ್ಜಿ ಸಲ್ಲಿಕೆಯಾಗಿದ್ದು, ಶುಕ್ರವಾರ ವಿಚಾರಣೆಗೆ ಬರುವ ಸಾಧ್ಯತೆಯಿದೆ. ಪ್ರತಿಪಕ್ಷದ ಕೆಲ ರಾಜಕೀಯ ಮುಖಂಡರು ದೊಡ್ಡಮಟ್ಟದ ಸಂಚು ರೂಪಿಸಿ ಯಾವುದೇ ಸಾಕ್ಷ್ಯಾಧಾರಗಳಿಲ್ಲದಿದ್ದರೂ ತನ್ನ ವಿರುದ್ಧ ಪೋಕ್ಸೋ ಪ್ರಕರಣ ದಾಖಲು ಮಾಡಿ ಘನತೆಗೆ ಧಕ್ಕೆ ತರುವ ಕಾರ್ಯ ನಡೆಸಲಾಗುತ್ತಿದೆ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ. ಈಗಾಗಲೇ ತನಿಖಾಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗಿದ್ದೇವೆ. ಮತ್ತೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿದೆ. ಒಂದು ದಿನ ಮಾತ್ರ ಕಾಲಾವಕಾಶ ನೀಡಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳ ಕಚೇರಿ

ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.

ಸಂಖ್ಯೆ : ಸ.ಶಿ.ಕ/ಬಿ.ಐ.ಇ.ಆರ್.ಟಿ/ನೇ.ಗು/2024–25 ದಿನಾಂಕ : 06–6–2024

ಪತ್ರಿಕಾ ಪ್ರಕಟಣೆ

2024–25ನೇ ಸಾಲಿನಲ್ಲಿ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣ ಮಧ್ಯವರ್ತನೆಯಡಿ ವಿಶೇಷ ಶಿಕ್ಷಕರ BIERT ಸೇವೆಯನ್ನು ತಾತ್ಕಾಲಿಕವಾಗಿ ನೇರಗುತ್ತಿಗೆಯಡಿ ಪ್ರಾಥಮಿಕ ವಿಭಾಗದ 2 ಹಾಗೂ ಪ್ರೌಢ ವಿಭಾಗದ 6 ಹುದ್ದೆಗಳಿಗೆ ನಿಯಮಾನುಸಾರ ಸೇವೆ ಪಡೆಯಬೇಕಾಗಿರುತ್ತದೆ. ಸದರಿ ಹುದ್ದೆಗೆ ವಿಶೇಷ ಡಿ.ಎಡ್./ಬಿ.ಎಡ್. ವಿದ್ಯಾರ್ಹತೆ ಹೊಂದಿ RCI ಅನುಮೋದಿತ ಸಂಸ್ಥೆಯಿಂದ ಮಾನ್ಯತೆವಿರುವ RCI ನೊಂದಣಿ ಸಂಖ್ಯೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ದಿನಾಂಕ: 21/06/2024 ರಂದು ಸಂಜೆ 5:30ರೊಳಗಾಗಿ ಸಮಗ್ರ ಶಿಕ್ಷಣ ಕರ್ನಾಟಕ ಮಡಿಕೇರಿ ಕಚೇರಿಗೆ ಅರ್ಜಿ ಸಲ್ಲಿಸಲು ತಿಳಿಸಿದೆ.

ಸಹಿ/–
ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ, ಕೊಡಗು

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ.

Emai.: dcfsagar123@gmail.com

ಸಂಖ್ಯೆ:ಎ2/ಬಿಜಿಟಿ/ಪ.ವಾ.ಕ್ರಿ.ಯೋ.(ನಹ)ಸಿಆರ್/18/2024–25 ದಿ: 12.06.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಸಾಗರ ಪ್ರಾದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಆರ್.ಎಸ್.ಪಿ.ಡಿ. ಯೋಜನೆಯಡಿ 6x9 ಮತ್ತು 8x12 ಅಳತೆಯ ಸಸಿಗಳನ್ನು ಹಸಿರು ಕರ್ನಾಟಕ ಯೋಜನೆಯಡಿ 10x16 ಅಳತೆಯ ಸಸಿಗಳನ್ನು ಬೆಳೆಸುವ ಮತ್ತು ಜಿ.ಯು.ಎ. ಯೋಜನೆಯಡಿ ರಸ್ತೆ ಬದಿ ಮಾನ್ಸೂನ್ ನೆಡುತೋಪು ರಚನೆ ಮಾಡುವ ಕಾಮಗಾರಿಯನ್ನು 2024–25ನೇ ಸಾಲಿನಲ್ಲಿ ಕೈಗೊಳ್ಳಲು ಆಸಕ್ತ ಗುತ್ತಿಗೆದಾರರುಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ಟೆಂಡರ್ ದಿನಾಂಕ: 26–06–2024ರಂದು ಸಂಜೆ 4–30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/54/06/24–25/91

ಪದ್ಮಪ್ರಿಯ ಆತ್ಮಹತ್ಯೆ ಪ್ರಕರಣ: ಅತುಲ್ ರಾವ್ ಖುಲಾಸೆ

ಉಡುಪಿ: ಮಾಜಿ ಶಾಸಕ ಕೆ. ರಘುಪತಿ ಭಟ್ ಅವರ ಪತ್ನಿ ಪದ್ಮಪ್ರಿಯ ನಾಪತ್ತೆ ಹಾಗೂ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ, ಮೋಸ, ವಂಚನೆ ಹಾಗೂ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕಣದ ಆರೋಪಿಯಾಗಿದ್ದ ಅತುಲ್ ರಾವ್ ಅವರನ್ನು ಖುಲಾಸೆಗೊಳಿಸಿ ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯವು ಆದೇಶ ನೀಡಿದೆ.

2008 ಜೂನ್ 10ರಂದು ಪದ್ಮಪ್ರಿಯ ಅವರು ಕರಂಬಳ್ಳಿಯ ಮನೆಯಿಂದ ನಾಪತ್ತೆಯಾಗಿದ್ದರು. ಈ ಸಂಬಂಧ ರಘುಪತಿ ಭಟ್ ಸ್ನೇಹಿತ ಅತುಲ್ ರಾವ್ ಅವರ ವಿರುದ್ಧ 2008 ಜೂನ್ 19ರಂದು ಮಣಿಪಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಕುರಿತು ತನಿಖೆ ನಡೆಸಿದ್ದ ಸಿಒಡಿ ಅಧಿಕಾರಿಗಳು ಅತುಲ್ ಅವರ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಉಡುಪಿ ಸಿಜೆಎಂ ನ್ಯಾಯಾಲಯವು 2023ರ ನ.10ರಂದು ಅತುಲ್ ರಾವ್‌ಗೆ ಒಂದು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಆದೇಶ ನೀಡಿತ್ತು. ಇದರ ವಿರುದ್ಧ ಅತುಲ್ ಅವರು ಡಿಸೆಂಬರ್ ತಿಂಗಳಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾದ ದಿನೇಶ್ ಹೆಗ್ಡೆ ಅವರು ಅತುಲ್ ಅವರನ್ನು ದೋಷಮುಕ್ತಗೊಳಿಸಿ ಆದೇಶ ನೀಡಿದರು. ಅತುಲ್ ಅವರ ಪರವಾಗಿ ವಕೀಲರಾದ ಅರುಣ್ ಬಂಗೇರ ಹಾಗೂ ಸ್ಟೀವನ್ ಲೂಯಿಸ್ ವಾದ ಮಂಡಿಸಿದ್ದರು.

25ಕ್ಕೂ ಹೆಚ್ಚು ಹೆಬ್ಬಾವು ರಕ್ಷಿಸಿದ ಸ್ನೇಕ್ ತೇಜಸ್

ಮಂಗಳೂರು: ಯುವ ಉರಗಪ್ರೇಮಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ತೇಜಸ್ ಬನ್ನೂರು 25ಕ್ಕೂ ಮಿಕ್ಕಿದ ಹೆಬ್ಬಾವಿನ ಮರಿಗಳನ್ನು ರಕ್ಷಿಸಿ ಜಿಲ್ಲೆಯ ಬೇರೆ ಬೇರೆ ಅರಣ್ಯಗಳಿಗೆ ಬಿಟ್ಟು ಬಂದಿದ್ದಾರೆ.

ಉರಗಪ್ರೇಮಿ ತೇಜಸ್, ಕಳೆದ ಐದಾರು ವರ್ಷಗಳಿಂದ ಸಂಕಷ್ಟದಲ್ಲಿರುವ ಉರಗ ಸಂತಾನವನ್ನು ರಕ್ಷಿಸಿ, ಅವುಗಳನ್ನು ಮತ್ತೆ ಪ್ರಕೃತಿಗೆ ಬಿಡುವ ಕಾರ್ಯವನ್ನು ಮಾಡುತ್ತಿದ್ದಾರೆ. ಈವರೆಗೆ ಸುಮಾರು 100ಕ್ಕೂ ಹೆಚ್ಚಿನ ಹೆಬ್ಬಾವಿನ ಮರಿಗಳನ್ನು ಕಾಡಿಗೆ ಬಿಟ್ಟು ಹೆಬ್ಬಾವುಗಳ ಸಂತತಿಯನ್ನು ರಕ್ಷಿಸಿದ್ದಾರೆ.

ಹಾವುಗಳಿಲ್ಲದೇ ಅನಾಥವಾಗಿರುವ ಮೊಟ್ಟೆಗಳನ್ನು ತೇಜಸ್ ಅವರು ಅರಣ್ಯ ಇಲಾಖೆಯ ಅನುಮತಿಯೊಂದಿಗೆ ತಮ್ಮ ಮನೆಗೆ ಕೊಂಡೊಯ್ದು ಅವುಗಳಿಗೆ ಕೃತಕ ಕಾವು ನೀಡುವ ವ್ಯವಸ್ಥೆ ಮಾಡುತ್ತಾರೆ. ಇದೇ ರೀತಿ ಈ ಬಾರಿ ಬಂಟ್ವಾಳ ತಾಲೂಕಿನ ಅನಂತಾಡಿಯಲ್ಲಿ ಸಂಗ್ರಹಿಸಿದ 12 ಮತ್ತು ವಿಟ್ಲದ ಕನ್ಯಾನ ಉಕ್ಕುಡದಲ್ಲಿ ಸಂಗ್ರಹಿಸಿದ 13 ಮೊಟ್ಟೆಗಳಿಗೆ ಕೃತಕ ಕಾವು ನೀಡಿ ಮರಿ ಮಾಡುವ ಮೂಲಕ ಜಿಲ್ಲೆಯ ವಿವಿಧ ಕಾಡುಗಳಿಗೆ ಬಿಟ್ಟಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲಿ ರೋಗಿಗಳ ಆರೋಗ್ಯ ವಿಚಾರಿಸಿದ ಗೃಹ ಸಚಿವ ಜಿ.ಪರಮೇಶ್ವರ

ಕಲುಷಿತ ನೀರು ಸೇವನೆ: ಸಾವಿನ ಸಂಖ್ಯೆ 6ಕ್ಕೆ ಏರಿಕೆ

ತುಮಕೂರು: ಮಧುಗಿರಿ ತಾಲೂಕಿನ ಚಿನ್ನೇನಹಳ್ಳಿಯಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಬುಧವಾರ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಿಕ್ಕದಾಸಪ್ಪ (76), ಪೆದ್ದಣ್ಣ (74), ಮಧುಗಿರಿಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಮೀನಾಕ್ಷಿ (3) ಮೃತಪಟ್ಟಿದ್ದರು. ಇದಕ್ಕೂ ಮುನ್ನ ಜೂನ್ 10ರಂದು ಹನುಮಕ್ಕ (85), 11ರಂದು ನಾಗಪ್ಪ (85), ನಾಗಮ್ಮ (90) ಚಿನ್ನೇನಹಳ್ಳಿಯಲ್ಲೇ ಮೃತಪಟ್ಟಿದ್ದಾರೆ.

ಒಂದೇ ದಿನ ಮೂವರು ಸಾವನ್ನಪ್ಪಿದ ನಂತರ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಜಿಲ್ಲಾ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದರು. ಈ ಬೆಳವಣಿಗೆಯ ನಂತರ ಕಲುಷಿತ ನೀರು ಸೇವಿಸಿ ಈ ಹಿಂದೆಯೇ ಮೂರು ಜನ ಮೃತಪಟ್ಟ ಮಾಹಿತಿ ಗೊತ್ತಾಗಿದೆ.

ಹನುಮಕ್ಕ, ನಾಗಪ್ಪ, ನಾಗಮ್ಮ ಸಾವಿಗೆ ಆರೋಗ್ಯ ಇಲಾಖೆಯ ಅಧಿಕಾರಿಗಳು ಬೇರೆ ಕಾರಣ ಹೇಳುತ್ತಿದ್ದಾರೆ. ಇಬ್ಬರೂ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಹಾಗಾಗಿ ಅವರು ಸಾವನ್ನಪ್ಪಿದ್ದಾರೆ ಎಂಬುದು ಅಧಿಕಾರಿಗಳ ವಾದ. ಆದರೆ ಮೂರು ಜನ ಸಾವಿಗೂ ಮುನ್ನ ವಾಂತಿ, ಭೇದಿಯಿಂದ ಬಳಲುತ್ತಿದ್ದರು ಎಂದು ಗ್ರಾಮಸ್ಥರು, ಕುಟುಂಬದವರು ಹೇಳುತ್ತಿದ್ದಾರೆ.

ಗೃಹ ಸಚಿವ ಜಿ.ಪರಮೇಶ್ವರ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದರು.

ಮಾಂಜ್ರಾನದಿಗೆ ನೀರು: ಜಮೀನಿಗೆ ನುಗ್ಗಿದ ನೀರು

ಬೀದರ್: ಮಹಾರಾಷ್ಟ್ರದಲ್ಲಿ ಧಾರಾಕಾರ ಮಳೆ ಹಿನ್ನೆಲೆಯಲ್ಲಿ ಮಹಾರಾಷ್ಟ್ರದ ಮಾಣಿಕ್ಯ ಡ್ಯಾಂನಿಂದ ಮುಂಜಾಗ್ರತೆ ವಹಿಸದೆ ಜಿಲ್ಲೆಯ ಮಾಂಜ್ರಾ ನದಿಗೆ ಅಪಾರ ಪ್ರಮಾಣದ ನೀರು ಬಿಡುಗಡೆ ಮಾಡಲಾಗಿದೆ.

ನೀರು ಬಿಡುಗಡೆ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆಯ ಹುಲಸೂರಿ ಪಟ್ಟಣದ ಹೊರವಲಯದಲ್ಲಿರುವ ಕೋಂಗಳಿ ಬ್ರಿಜ್ ಕಂ ಬ್ಯಾರೇಜ್‌ನ ಬಾಗಿಲು ತೆರೆಯದ ಕಾರಣ ರೈತರ ಜಮೀನುಗಳಿಗೆ ನೀರು ನುಗ್ಗಿ ಅವಾಂತರಗಳು ಸೃಷ್ಟಿಯಾಗಿದೆ. ಹುಲಸೂರು ತಾಲೂಕಿನ ಮಾಂಜ್ರಾನದಿ ದಡದಲ್ಲಿರುವ ಕೋಂಗಳಿ, ಜಾಮಖಂಡಿ, ವಾಂಜರಖೇಡ, ಹಲಸೂರು ಗ್ರಾಮದ ರೈತರ ಜಮೀನುಗಳಿಗೆ ನೀರು ನುಗ್ಗಿದೆ. ವಿದ್ಯುತ್ ಬಿಲ್ ಕಟ್ಟಲಾಗದ ಕಾರಣ ಕೋಂಗಳಿ ಬ್ರಿಜ್‌ಗೆ ವಿದ್ಯುತ್ ಸಂಪರ್ಕ ಕಡಿತ ಮಾಡಿದೆ. ವಿದ್ಯುತ್ ಇಲ್ಲದೆಯೇ ಬ್ಯಾರೇಜ್ ಬಾಗಿಲು ತೆರೆಯಲು ಲೇಟಾದ ಕಾರಣ ಜಮೀನುಗಳಿಗೆ ನೀರು ನುಗ್ಗಿದೆ. ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಕೋಂಗಳಿ ಏತ ನೀರಾವರಿ ಯೋಜನೆಯ ಬ್ರಿಜ್ ಕಂ ಬ್ಯಾರೇಜ್ ಸುತ್ತಮುತ್ತಲಿನ ಜಮೀನುಗಳಿಗೆ ನೀರು ನುಗ್ಗಿದೆ.

ಸಮಾಚಾರ ಸಣ್ಣದಲ್ಲ

ನನಗೂ, ದರ್ಶನ್‌ಗೂ ವೈಯಕ್ತಿಕ ದ್ವೇಷವಿಲ್ಲ

ಹುಬ್ಬಳ್ಳಿ: ನಟ ದರ್ಶನ್ ವಿಚಾರದಲ್ಲಿ ನಾನ್ಯಾಕೆ ಟಾಂಗ್ ನೀಡಲಿ. ಪ್ರಕರಣದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪ್ರಕರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಈ ಹಂತದಲ್ಲಿ ಪ್ರತಿಕ್ರಿಯೆ ನೀಡುವುದು ಸರಿಯಲ್ಲ ಎಂದು ನಿರ್ದೇಶಕ, ಪತ್ರಕರ್ತ ಇಂದ್ರಜಿತ್ ಲಂಕೇಶ್ ಪ್ರತಿಕ್ರಿಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ದರ್ಶನ್ ಅವರೊಂದಿಗೆ ಎರಡು ಸಿನಿಮಾ ಮಾಡಿದ್ದೇನೆ. ಅವರಿಗೂ ನನಗೂ ಯಾವುದೇ ವೈಯಕ್ತಿಕ ದ್ವೇಷವಿಲ್ಲ. ಆದರೆ ಸಮಾಜದಲ್ಲಿ ಇಂತಹ ಘಟನೆಗಳಾದಾಗ ಓರ್ವ ಪತ್ರಕರ್ತನಾಗಿ ಧ್ವನಿಯೆತ್ತಬೇಕಾಗುತ್ತಿದೆ. ಈ ನಿಟ್ಟಿನಲ್ಲಿ ಮಾತನಾಡಿದ್ದೇನೆಯೇ ವಿನಃ ಯಾವುದೇ ಟಾಂಗ್ ನೀಡಿಲ್ಲ. ಪ್ರಕರಣದ ತನಿಖೆ ಪೂರ್ಣಗೊಂಡ ನಂತರ ಎಲ್ಲವೂ ಸ್ಪಷ್ಟವಾಗಲಿದೆ. ಆಗ ಈ ಕುರಿತು ಮಾತನಾಡುವೆ ಎಂದು ಸ್ಪಷ್ಟಪಡಿಸಿದರು.

ಇಬ್ಬರು ಯುವಕರು ನೀರುಪಾಲು

ಶ್ರೀರಂಗಪಟ್ಟಣ: ಇಲ್ಲಿನ ಗಂಜಾಂನ ನಿಮಿಷಾಂಬ ದೇವಿ ದೇವಸ್ಥಾನದ ಬಳಿ ಕಾವೇರಿ ನದಿಯಲ್ಲಿ ಗುರುವಾರ ಸ್ನಾನಕ್ಕಿಳಿದಿದ್ದ ಇಬ್ಬರು ಯುವಕರು ಮುಳುಗಿ ಸಾವನ್ನಪ್ಪಿದ್ದಾರೆ. ನೀರುಪಾಲಾದವರು ಬೆಂಗಳೂರು ಮತ್ತು ತಮಿಳುನಾಡಿನ ನಿವಾಸಿಗಳಾದ ವಿಶಾಲ್ (19) ಮತ್ತು ರೋಹನ್ (17) ಎಂದು ತಿಳಿದುಬಂದಿದೆ. ಶ್ರೀರಂಗಪಟ್ಟಣಕ್ಕೆ ಬಂದಿದ್ದ ಇಬ್ಬರು ಕಾವೇರಿ ನದಿ ಹರಿಯುವುದನ್ನು ನೋಡಿ, ಸ್ನಾನ ಮಾಡಲು ನಿರ್ಧರಿಸಿದ್ದರು. ನದಿಯ ಹರಿವು ಹೆಚ್ಚಾಗಿದ್ದುದರಿಂದ ಈಜು ಗೊತ್ತಿಲ್ಲದಿದ್ದರೂ ಆಳದ ನೀರಿನಲ್ಲಿ ಮುಳುಗಿದ್ದಾರೆ. ಶ್ರೀರಂಗಪಟ್ಟಣ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಡೆಂಘೀಗೆ ಆಸ್ಪತ್ರೆ ಸಿಬ್ಬಂದಿ ಬಲಿ

ಶಿವಮೊಗ್ಗ: ಡೆಂಘೀ ಸೋಂಕಿಗೆ ತುತ್ತಾಗಿ ಆಸ್ಪತ್ರೆ ಸಿಬ್ಬಂದಿ ಬಲಿಯಾಗಿರುವ ಘಟನೆ ಗುರುವಾರ ನಡೆದಿದೆ. ಸಾಗರ ತಾಲೂಕು ಉಪವಿಭಾಗೀಯ ಆಸ್ಪತ್ರೆಯ ಡಯಾಲಿಸಿಸ್ ವಿಭಾಗದ ನಾಗರಾಜ್ (34) ಮೃತರು. ಕಳೆದ ನಾಲ್ಕು ದಿನಗಳಿಂದ ನಾಗರಾಜ್ ಜ್ವರದಿಂದ ಬಳಲುತ್ತಿದ್ದರು. ಭಾನುವಾರ ತೀವ್ರ ಜ್ವರ ಎಂದು ಸಾಗರದ ಉಪವಿಭಾಗೀಯ ಆಸ್ಪತ್ರೆಗೆ ದಾಖಲಾಗಿದ್ದರು. ಈ ವೇಳೆ ರಕ್ತ ಪರೀಕ್ಷೆ ನಡೆಸಿದಾಗ ಡೆಂಘೀ ಸೋಂಕು ಇರುವುದು ಧೃಡಪಟ್ಟಿತ್ತು. ಸಾಗರ ಆಸ್ಪತ್ರೆಯಲ್ಲಿ ಎರಡು ದಿನ ಚಿಕಿತ್ಸೆಯನ್ನೂ ಕೊಡಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಗುರುವಾರ ಸಾವನ್ನಪ್ಪಿದ್ದಾರೆ.

ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ: ರೇವಣ್ಣ

ಕಡೂರು: ವಿರೋಧಿಗಳು ಏನೇ ಟೀಕೆ ಮಾಡಲಿ. ಜನತೆಗೆ ನೆಮ್ಮದಿಯ ಬದುಕು ನೀಡುವುದು ನಮ್ಮ ದೃಷ್ಟಿ. ಆದ್ದರಿಂದ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಯೋಚನೆ ಇಲ್ಲ ಎಂದು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ನಾಯಕತ್ವದಲ್ಲಿ ಪಕ್ಷ ಉತ್ತಮ ಸಾಧನೆ ಮಾಡಿದೆ. ಕಾಂಗ್ರೆಸ್ ಪಕ್ಷ ಯಾವಾಗಲೂ ಬದುಕಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ಮಾಡುತ್ತದೆ. ಬೆಲೆ ಏರಿಕೆ, ಸ್ವಜನ ಪಕ್ಷಪಾತ, ಅಭಿವೃದ್ಧಿ ಶೂನ್ಯ ಆಡಳಿತ ಕಂಡು ಜನ ಬೇಸತ್ತ ಸಮಯದಲ್ಲಿ ಕಾಂಗ್ರೆಸ್ ಗ್ಯಾರಂಟಿ ಭರವಸೆಗಳನ್ನು ನಂಬಿ ಮತ ನೀಡಿದರು. ಕೊಟ್ಟ ಮಾತು ತಪ್ಪದೆ ಐದೂ ಗ್ಯಾರಂಟಿಗಳನ್ನು ಸಿದ್ದರಾಮಯ್ಯ ಅವರ ಸರಕಾರ ಅನುಷ್ಠಾನ ಮಾಡಿದೆ. ಮೇಲು ಕೀಳಿಲ್ಲದೆ ಎಲ್ಲರಿಗೂ ಈ ಯೋಜನೆಗಳ ಅನುಕೂಲ ದೊರೆತಿದೆ ಎಂದರು.



ವಿರಾಮ
ಪ್ರತಿ ಭಾನುವಾರ

ಪ್ರಭಾವ ಬೀರಲು ಮುಂದಾದ ಶಾಸಕರ ವಿರುದ್ಧ ಕಿಡಿ। ದರ್ಶನ್ ಪ್ರಕರಣದಲ್ಲಿ ಮೂಗು ತೂರಿಸಬೇಡಿ: ಸಿಎಂ

ದರ್ಶನ್ ಪರ ಸಾಫ್ಟ್ ಕಾರ್ನರ್; ಸಿಎಂ ಗರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೊಲೆ ಆರೋಪದಲ್ಲಿ ಜೈಲು ಸೇರಿರುವ ನಟ ದರ್ಶನ್ ಪರ ಕೆಲ ಶಾಸಕರು 'ಸಾಫ್ಟ್ ಕಾರ್ನರ್' ತೋರಲು ಶುರುಮಾಡಿದ್ದು, ಪ್ರಕರಣವನ್ನು 'ಡೈಲ್ಯೂಟ್' ಮಾಡುವಂತೆ ಒತ್ತಡ ಹೇರಲು ಆರಂಭಿಸಿದ ಬೆನ್ನಲ್ಲೇ, ಈ ಪ್ರಕರಣದಲ್ಲಿ ಯಾರೂ ತಲೆಹಾಕದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್‌ನ ಕೆಲ ಶಾಸಕರು, ಸಚಿವರು ದರ್ಶನ್ ಪರ ವಕಾಲತ್ತು ವಹಿಸಲು ಒಳಗೊಳಗೆ ಸಿದ್ಧತೆ ನಡೆಸಿಕೊಂಡು, ಗೃಹ ಸಚಿವ ಡಾ.ಜಿ. ಪರಮೇಶ್ವರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿಕ ಚರ್ಚಿಸಿದ್ದಾರೆ. ಕೇವಲ ಕಾಂಗ್ರೆಸ್ ಮಾತ್ರವಲ್ಲದೇ, ಬಿಜೆಪಿಯ ಕೆಲ ಹಿರಿಯ ಶಾಸಕರು ಪ್ರಕರಣದಿಂದ ದರ್ಶನ್ ರಕ್ಷಣೆ ಸಾಧ್ಯತೆ ಎನ್ನುವ ಬಗ್ಗೆ ಸಿಎಂ ಬಳಿ ಪ್ರಸ್ತಾಪಿಸಿದ್ದಾರೆ. ಇದರ ಬೆನ್ನಲ್ಲೇ, ಕೊಲೆ ಪ್ರಕರಣದಲ್ಲಿ ಯಾವುದೇ ಕಾರಣಕ್ಕೂ ಸರಕಾರ ಮಧ್ಯಪ್ರವೇಶಿಸುವುದಿಲ್ಲ. ಪೊಲೀಸರು ತಮ್ಮ ಕಾರ್ಯವನ್ನು ಮುಂದುವರೆಸುತ್ತಾರೆ. ಈ ವಿಷಯದಲ್ಲಿ ಯಾರೂ ತಲೆಹಾಕುವ ಅಗತ್ಯವಿಲ್ಲವೆಂದು ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕವೂ ಅನೌಪಚಾರಿಕ ಸಭೆಯಲ್ಲಿ, ಸಚಿವರಿಗೆ ಈ ವಿಷಯದಲ್ಲಿ ತಲೆಹಾಕಬೇಡಿ. ಪ್ರಕರಣದಲ್ಲಿ ದರ್ಶನ್ ಪಾತ್ರವಿದೆಯೋ ಇಲ್ಲವೋ ಎನ್ನುವುದನ್ನು ನ್ಯಾಯಾಲಯ ತೀರ್ಮಾನಿಸಲಿದೆ. ಪೊಲೀಸರಿಗೆ ಯಾರೂ ಯಾವುದೇ ರೀತಿಯ ಒತ್ತಡ ಹೇರುವುದು ಬೇಡ ಎನ್ನುವ ಸ್ಪಷ್ಟ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಪಕ್ಷಾತೀತ ಒತ್ತಡ?

ನಟ ದರ್ಶನ್ ಪ್ರಕರಣದಲ್ಲಿ ಕಾಂಗ್ರೆಸ್‌ನ ಹಲವು ಶಾಸಕರು, ನಾಯಕರು, ಪ್ರತಿಪಕ್ಷಗಳ ಕೆಲವು ಶಾಸಕರು ಪ್ರಭಾವ ಬೀರಲು ಯತ್ನಿಸಿದರು ಎಂದು ಹೇಳಲಾಗಿದೆ. ಆದರೆ ಅದಕ್ಕೆ ಸೊಪ್ಪು ಹಾಕದ ಸಿದ್ದರಾಮಯ್ಯ, ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಸತ್ಯಾಸತ್ಯತೆ ಬೆಳಕಿಗೆ ಬರಲಿ. ಈ ವಿಷಯದಲ್ಲಿ ಯಾರೂ ಹಸ್ತಕ್ಷೇಪ ಮಾಡುವುದು ಬೇಡ ಎನ್ನುವ ಸ್ಪಷ್ಟ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ. ದರ್ಶನ್ ಪ್ರಕರಣ ಬಿಟ್ಟರೆ ಸಚಿವರಿಗೆ, ಶಾಸಕರಿಗೆ ಮಾಡಲು ಬೇರೆ ಕೆಲಸಗಳಿವೆ. ಕಳೆದ ಮೂರು ತಿಂಗಳಿನಿಂದಲೂ ಚುನಾವಣಾ ನೀತಿ ಸಂಹಿತೆಯಿಂದಾಗಿ ಆಡಳಿತ ವ್ಯವಸ್ಥೆ ಸ್ಥಗಿತಗೊಂಡಿತ್ತು. ಈಗ ನೀತಿ ಸಂಹಿತೆ ತೆರವಾಗಿದೆ. ಬಜೆಟ್‌ನಲ್ಲಿ ಘೋಷಿಸಿದ್ದ ಯೋಜನೆಗಳನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಬೇಕು. ಈ ನಿಟ್ಟಿನಲ್ಲಿ ಆಯಾ ಇಲಾಖೆಯ ಸಚಿವರು ಹೆಚ್ಚಿನ ಗಮನ ಹರಿಸುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ.

ಉಪ್ಪು ತಿಂದವರು ನೀರು ಕುಡಿಯಲಿ

ದರ್ಶನ್ ಪ್ರಕರಣದಲ್ಲಿ ಸಾಕ್ಷ್ಯಾಧಾರ ಹಾಗೂ ಸತ್ಯಾಂಶ ಆಧರಿಸಿ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ. ಉಪ್ಪು ತಿಂದವರು ನೀರು ಕುಡಿಯುತ್ತಾರೆ. ತಪ್ಪು ಮಾಡದವರು ಗಾಬರಿಗೊಳ್ಳುವ ಅಗತ್ಯವಿಲ್ಲ. ಈ ವಿಷಯದಲ್ಲಿ ಪೊಲೀಸರಿಗೆ ಒತ್ತಡ ಹೇರುವುದಾಗಲೀ, ಪ್ರಭಾವ ಬೀರುವುದಾಗಲೀ ಸರಿಯಲ್ಲ. ಅಂತಹ ವಿಚಾರಗಳು ತಮ್ಮ ಗಮನಕ್ಕೆ ಬಂದರೆ ಸಹಿಸುವುದಿಲ್ಲ ಎಂದು ಖಡಕ್ ಸೂಚನೆ ನೀಡಿದ್ದಾರೆ ಎಂದು ಹೇಳಲಾಗಿದೆ. ಪ್ರಮುಖವಾಗಿ ಲೋಕಸಭಾ ಚುನಾವಣೆ ಹಾಗೂ ವಿಧಾನ ಸಭಾ ಚುನಾವಣೆಯಲ್ಲಿ ದರ್ಶನ್ ಹಲವು ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ್ದರು. ಯಾರ್‍ಯಾರ ಪರವಾಗಿ ಪ್ರಚಾರ ನಡೆಸಿದ್ದರೋ, ಅವರು 'ಋಣ' ಸಂದಾಯ ಮಾಡಲು ದರ್ಶನ್ ಪರ ಲಾಬಿ ನಡೆಸಿದ್ದರು ಎನ್ನಲಾಗಿದೆ. ಆದರೆ ಈ ಪ್ರಕರಣದಲ್ಲಿ ಲಾಬಿಗೆ ಮುಂದಾದರೆ, ಪಕ್ಷಕ್ಕೆ ಬಹುದೊಡ್ಡ ಡ್ಯಾಮೇಜ್ ಆಗುವುದರಿಂದ, ಸಿಎಂ ಈ ಯಾವ ಒತ್ತಡಕ್ಕೂ ಮಣೆ ಹಾಕಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ಕಾನೂನು ಪ್ರಕಾರವೇ ಕ್ರಮ: ಸಚಿವ ಎಚ್.ಕೆ.ಪಾಟೀಲ

ನಟ ದರ್ಶನ್‌ಗೆ ವಿಶೇಷ ಸವಲತ್ತಿಲ್ಲ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ನಟ ದರ್ಶನ್‌ಗೆ ವಿಶೇಷ ಸವಲತ್ತುಗಳನ್ನು ನೀಡಿಲ್ಲ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಸಚಿವ ಸಂಪುಟ ಸಭೆ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಟ ದರ್ಶನ್ ಬಂಧನ ಪ್ರಕರಣದಲ್ಲಿ ಕಾನೂನು ಪ್ರಕಾರವೇ ಕ್ರಮ ವಹಿಸಲಾಗಿದೆ. ದರ್ಶನ್ ವಿಐಪಿ ಎನ್ನುವ ಕಾರಣಕ್ಕೆ ವಿಶೇಷ ಅನುಕೂಲತೆ ಮಾಡಿಕೊಟ್ಟಿಲ್ಲ. ಮಾಡಿ ಕೊಡುವುದೂ ಇಲ್ಲ. ಪೊಲೀಸ್ ಠಾಣೆಯಲ್ಲಿ ಶಾಮಿಯಾನ ಹಾಕಿರುವುದು ಗೌಪ್ಯ ವಿಚಾರಣೆಗಲ್ಲ. ಬದಲಿಗೆ ಹೆಚ್ಚುವರಿಯಾಗಿ ನಿಯೋಜಿತರಾದ ಸಿಬ್ಬಂದಿಯ ಅನುಕೂಲಕ್ಕಾಗಿ ಎಂದು ಹೇಳಿದರು.

ದರ್ಶನ್ ಅವರನ್ನು ಬಂಧಿಸಿಟ್ಟಿರುವ ಪೊಲೀಸ್ ಠಾಣೆಯನ್ನು ಶಾಮಿಯಾನ ಹಾಕಿ ಮುಚ್ಚಲು ಅವಕಾಶ ಇದೆಯೇ ಎಂಬ ಪ್ರಶ್ನೆಯೇ ಬರಲ್ಲ. ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಆದರೆ ಠಾಣೆಗೆ ಟೆಂಟ್ ಹಾಕುವ ಅವಶ್ಯಕತೆ ಇದೆಯೇ ಎನ್ನುವುದು ಗೊತ್ತಿಲ್ಲ. ಪ್ರಕರಣದ ಗಂಭೀರತೆ ನೋಡಿ ಠಾಣೆಗೆ ನಿಷೇಧಾಜ್ಞೆ ಹೇರಿದ್ದಾರೆ.

ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿದಾಗ ಅವರಿಗೆ ವ್ಯವಸ್ಥೆ ಮಾಡಲು ಟೆಂಟ್ ಹಾಕಲಾಗುತ್ತದೆ. ವಿಐಪಿಗೋಸ್ಕರ ಇದನ್ನು ಮಾಡಿಲ್ಲ. ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಮಾಡಲಾಗಿದೆ. ಆರೋಪಿ ಎಂದರೆ ಆರೋಪಿಯೇ. ಅವರಿಗೆ ವಿಶೇಷ ಅನುಕೂಲತೆ ಹಾಗೂ ವಿಶೇಷ ಅವಕಾಶ ಸೃಷ್ಟಿಗೆ ಕಾನೂನಾತ್ಮಕವಾಗಿ ಅವಕಾಶವಿಲ್ಲ. ಅದನ್ನು ಮಾಡಲು ನಮ್ಮ ಸರಕಾರ ಅವಕಾಶ ನೀಡಲ್ಲ ಎಂದು ಸ್ಪಷ್ಟಪಡಿಸಿದರು.

ಇಂದು ಚಿತ್ರದುರ್ಗಕ್ಕೆ ಚಿತ್ರೋದ್ಯಮದ ನಿಯೋಗ। ಈ ಪ್ರಕರಣದಲ್ಲಿ ದರ್ಶನ್ ಪರ ನಿಲ್ಲುವುದಿಲ್ಲ

ರೇಣುಕಾಸ್ವಾಮಿ ಪರ ನಿಂತ ಚಿತ್ರರಂಗ

ಬೆಂಗಳೂರು: ಕೊಲೆ ಆರೋಪದಲ್ಲಿ ಬಂಧಿತನಾಗಿರುವ ದರ್ಶನ್ ಪರ ಯಾವುದೇ ಕಾರಣಕ್ಕೂ ವಕಾಲತು ವಹಿಸುವುದು ಬೇಡ ಎನ್ನುವ ತೀರ್ಮಾನ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸರ್ವಾನುಮತದಿಂದ ಬಂದಿದೆ. ಇದರೊಂದಿಗೆ ಮೃತ ರೇಣುಕಾಸ್ವಾಮಿ ಪರ ನಿಲ್ಲುವುದಕ್ಕೆ ತೀರ್ಮಾನಿಸಲಾಗಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಬಂಧನದ ಬೆನ್ನಲ್ಲೇ, ರಾಜ್ಯಾದ್ಯಂತ ಪ್ರತಿಭಟನೆ ಜೋರಾಗಿದೆ. ಈ ರೀತಿಯ ಕೃತ್ಯದಲ್ಲಿ ಭಾಗವಹಿಸಿರುವವರನ್ನು ಚಿತ್ರರಂಗದಿಂದಲೇ ಬ್ಯಾನ್ ಮಾಡಬೇಕು ಎನ್ನುವ ಒತ್ತಡ ಹೆಚ್ಚಾಗುತ್ತಿದೆ. ಆದರೆ, ದರ್ಶನ್‌ಗೆ ಈಗಾಗಲೇ ಅನೇಕ ನಿರ್ಮಾಪಕರು ಹಣ ಹೂಡಿರುವುದರಿಂದ ಈ ವಿಷಯದಲ್ಲಿ ಯಾವ ತೀರ್ಮಾನ ಕೈಗೊಳ್ಳಬೇಕು ಎನ್ನುವ ಚರ್ಚೆಗಳು ನಡೆದಿತ್ತು.

ಈ ಹಿನ್ನಲೆಯಲ್ಲಿ ಗುರುವಾರ ಸಂಜೆ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸಭೆ ನಡೆಸಲಾಯಿತು. ಸಭೆಯಲ್ಲಿದ್ದ ಬಹುತೇಕರು ಈ ಪ್ರಕರಣದಲ್ಲಿ ದರ್ಶನ್ ಪರ ನಿಲ್ಲುವುದು ಬೇಡ. ರೇಣುಕಾಸ್ವಾಮಿ ಮಾಡಿರುವ ತಪ್ಪಿಗೆ ಕೊಲೆಯ ಶಿಕ್ಷೆ ನೀಡಿರುವುದು ಖಂಡನೀಯ. ದರ್ಶನ್ ಮೇಲೆ ಆರೋಪವೇ ಕೇಳಿಬಂದಿದ್ದರೂ, ಮೇಲ್ನೋಟಕ್ಕೆ ಅವರ ವಿರುದ್ಧ ಸಾಕ್ಷಿಗಳು ಪ್ರಬಲವಾಗಿದೆ. ಆದ್ದರಿಂದ ಈ ವಿಷಯದಲ್ಲಿ ಫಿಲ್ಮ್ ಛೇಂಬರ್ ಅಂತರ ಕಾಯ್ದುಕೊಳ್ಳೋಣ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ.

ಫಿಲ್ಮ್ ಚೇಂಬರ್ ಅಧ್ಯಕ್ಷ ಎಂ.ಎನ್.ಸುರೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಸರ್ವ ಸದಸ್ಯರು ರೇಣುಕಾಸ್ವಾಮಿ ಕೊಲೆಯನ್ನು ಖಂಡಿಸಿದರು. ಇದು ಅಕ್ಷಮ್ಯ ಅಪರಾಧ ಇದನ್ನು ನಾವೆಲ್ಲರೂ ಖಂಡಿಸುತ್ತೇವೆ. ವಾಣಿಜ್ಯ ಮಂಡಳಿಯ ಪದಾಧಿಕಾರಿಗಳು ಶುಕ್ರವಾರ ಚಿತ್ರದುರ್ಗಕ್ಕೆ ತೆರಳಿ ರೇಣುಕಾಸ್ವಾಮಿ ಕುಟುಂಬಸ್ಥರನ್ನು ಭೇಟಿಯಾಗಿ ಸಾಂತ್ವನ ಹೇಳುತ್ತೇವೆ ಎಂದು ಅಧ್ಯಕ್ಷ ಸುರೇಶ್ ತಿಳಿಸಿದರು.

ಈ ಹಿಂದೆಯೂ ದರ್ಶನ್ ತಮ್ಮ ಪತ್ನಿ ವಿಜಯಲಕ್ಷ್ಮಿ ಅವರ ಮೇಲೆ ಹಲ್ಲೆ ಮಾಡಿ ಜೈಲು ಸೇರಿದ್ದರು. ಆಗ ನಾವೆಲ್ಲರೂ ಸೇರಿ ಬುದ್ಧಿವಾದ ಹೇಳಿ ಪ್ರಕರಣ ಇತ್ಯರ್ಥಗೊಳಿಸಿದೆವು. ಆದರೆ ಈಗ ಹಾಗಲ್ಲ, ಇದು ಕೊಲೆ ಪ್ರಕರಣ, ತುಂಬಾ ಸೂಕ್ಷ್ಮ ವಿಚಾರ. ಇದು ನ್ಯಾಯಾಲಯದ ಅಂಗಳದಲ್ಲಿದೆ. ತಪ್ಪಿತಸ್ಥರಿಗೆ ಕಾನೂನು ರೀತಿಯ ಶಿಕ್ಷೆ ಆಗಬೇಕು ಎಂದು ಹೇಳಿದರು.

ಚಿತ್ರದುರ್ಗಕ್ಕೆ ನಿಯೋಗ: ಈ ನಡುವೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಪರವಾಗಿ ಮಂಡಳಿ ಅಧ್ಯಕ್ಷ ಸುರೇಶ್ ನೇತೃತ್ವದ ನಿಯೋಗ ಶುಕ್ರವಾರ ಚಿತ್ರದುರ್ಗಕ್ಕೆ ಭೇಟಿ ನೀಡಿ, ರೇಣುಕಾಸ್ವಾಮಿ ಕುಟುಂಬಕ್ಕೆ ಸಾಂತ್ವಾನ ಹೇಳಲು ತೀರ್ಮಾನಿಸಿದೆ. ಈ ಮೂಲಕ ದರ್ಶನ್ ಪರವಾಗಿ ಫಿಲ್ಮಂ ಛೇಂಬರ್ ಇದೆ ಎನ್ನುವ ಮಾತನ್ನು ತೊಡೆದು ಹಾಕಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಲಾಗಿದೆ.

ಹೊಂದಾಣಿಕೆ ಮಾಡಿಕೊಂಡು ನಾವು ದರ್ಶನ್ ಪರ ನಿಲ್ಲುವ ಪ್ರಶ್ನೆಯೇ ಇಲ್ಲ. ದರ್ಶನ್ ಅವರನ್ನು ಬ್ಯಾನ್ ಮಾಡುವ ಕುರಿತಂತೆ ಕಲಾವಿದರ ಸಂಘದೊಂದಿಗೆ ಚರ್ಚಿಸಿ ಮುಂದಿನ ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದೇವೆ.

-ಎಂ.ಎನ್.ಸುರೇಶ್ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ

ನಿರ್ಮಾಪಕರಿಗೆ ನೆರವು

ನಟ ದರ್ಶನ್ ನಂಬಿ ಹಲವು ನಿರ್ಮಾಪಕರು ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದರು. ಸದ್ಯ ಡೆವಿಲ್ ಚಿತ್ರದ ಚಿತ್ರೀಕರಣ ಅರ್ಧಕ್ಕೆ ನಿಂತಿದ್ದು, ಇನ್ನು ಮೂರರಿಂದ ಐದು ತಿಂಗಳವರೆಗೆ ಶೂಟಿಂಗ್ ಆರಂಭವಾಗುವುದು ಅನುಮಾನವಾಗಿದೆ. ಇದರಿಂದ ನಿರ್ಮಾಪಕರು ಸಂಕಷ್ಟಕ್ಕೆ ಸಿಲುಕುವುದು ಖಚಿತ. ಹಾಗಾಗಿ ನಾವು ನಿರ್ಮಾಪಕರನ್ನು ಕರೆಸಿ ಮಾತನಾಡಿ ಅವರಿಗೆ ನೆರವು ನೀಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕರ್ನಾಟಕ ರಾಜ್ಯ ರೈತ ಸಂಘದಿಂದ ಆಕ್ರೋಶ

ದರ್ಶನ್ ವಿರುದ್ಧ ರೈತರ ಪ್ರತಿಭಟನೆ

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ವಿರುದ್ಧ ಮಂಡ್ಯದಲ್ಲಿ ರೈತರು ಪ್ರತಿಭಟಿಸಿದರು.

ಮಂಡ್ಯ: ಚಿತ್ರದುರ್ಗದ ಯುವಕ ರೇಣುಕಾಸ್ವಾಮಿ ಎಂಬುವರನ್ನು ಅಪಹರಿಸಿ, ಭೀಕರವಾಗಿ ಹತ್ಯೆಗೈದ ಪ್ರಕರಣದಲ್ಲಿ ಬಂಧಿತರಾಗಿರುವ ಚಿತ್ರನಟ ದರ್ಶನ್, ಪವಿತ್ರ ಗೌಡ ಹಾಗೂ ಸಹಚರರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ (ರೈತ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟ ರೈತರು, ಡಿಸಿ ಮೂಲಕ ಮುಖ್ಯಮಂತ್ರಿಗೆ ಮನವಿ ನೀಡಿದರು.

ದರ್ಶನ್ ಕನ್ನಡ ಚಲನಚಿತ್ರರಂಗಕ್ಕೆ ಕಳಂಕ: ಚಲನಚಿತ್ರ ಸಮಾಜದಲ್ಲಿ ಬದಲಾವಣೆ ತರಬಹುದಾದ ಪ್ರಬಲ ದೃಶ್ಯ ಮಾಧ್ಯಮ. ಬಂಗಾರದ ಮನುಷ್ಯ ಚಿತ್ರದಿಂದ ಸ್ಫೂರ್ತಿ ಪಡೆದು ಬದುಕು ಬದಲಿಸಿಕೊಂಡವರನ್ನು ನೋಡಿದ್ದೇವೆ. ಆದರೆ, ಚಲನಚಿತ್ರದಲ್ಲಿ ಆದರ್ಶ ನಾಯಕನಂತೆ ನಟಿಸಿ, ನಿಜ ಜೀವನದಲ್ಲಿ ಖಳನಾಯಕನಂತೆ ವರ್ತಿಸಿ ಅಮಾಯಕ ಯುವಕನನ್ನು ಹತ್ಯೆ ಮಾಡಿರುವ ದರ್ಶನ್ ಕನ್ನಡ ಚಲನಚಿತ್ರ ರಂಗಕ್ಕೆ ಕಳಂಕ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಹತ್ಯೆಯಲ್ಲಿ ಪ್ರಭಾವಿಗಳು ಭಾಗಿಯಾಗಿರುವುದರಿಂದ, ಪ್ರಕರಣ ಮುಚ್ಚಿ ಹಾಕುವ ಸಂಶಯ ಇದೆ. ಹೀಗಾಗಿ ಸಿಬಿಐ ತನಿಖೆಗೆ ವಹಿಸಬೇಕು. ಈಗಾಗಲೇ ತನಿಖೆ ಕೈಗೊಂಡಿರುವ ಪೊಲೀಸರು ಯಾವುದೇ ಪ್ರಭಾವಕ್ಕೆ ಒಳಗಾಗದೆ ತನಿಖೆ ನಡೆಸಬೇಕು ಎಂದರು.

ರೌಡಿಶೀಟರ್ ಪಟ್ಟಿಗೆ ದರ್ಶನ್ ಸೇರಿಸಿ

ದರ್ಶನ್ ಅಪರಾಧ ಹಿನ್ನೆಲೆಯುಳ್ಳವರಾಗಿದ್ದು, ಈಗಾಗಲೇ ಹಲವು ಪ್ರಕರಣಗಳು ದಾಖಲಾಗಿವೆ. ಹೀಗಾಗಿ, ಅವರನ್ನು ರೌಡಿಶೀಟರ್ ಪಟ್ಟಿಗೆ ಸೇರಿಸಬೇಕು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಚಿತ್ರರಂಗದಿಂದ ಬ್ಯಾನ್ ಮಾಡಬೇಕು. ಈತ ಅಭಿನಯಿಸಿರುವ ಚಲನಚಿತ್ರಗಳನ್ನು ಬಹಿಷ್ಕರಿಸಬೇಕು. ಚುನಾವಣೆಗಳಲ್ಲಿ ಪ್ರಚಾರಕ್ಕೆ ಕರೆಯಬಾರದು. ಹಾಗೊಮ್ಮೆ ಪ್ರಚಾರ ಮಾಡಿದರೆ ಅಂತಹ ಅಭ್ಯರ್ಥಿಗೆ ಮತ ನೀಡಬಾರದು ಎಂದು ಹೇಳಿದರು.

ನಿಷೇಧಿತ ಅರಣ್ಯ ಪ್ರದೇಶದಲ್ಲಿ ಖಾಸಗಿ ವಾಹನ ಬಳಕೆ

ಚಿಕ್ಕಮಗಳೂರು : ಕೊಲೆ ಕೇಸ್‌ನಲ್ಲಿ ಬಂಧಿತನಾಗಿರುವ ನಟ ದರ್ಶನ್ ವಿರುದ್ಧ ಒಂದೊಂದೇ ಪ್ರಕರಣಗಳು ಬಹಿರಂಗಗೊಳ್ಳುತ್ತಿವೆ.

ನಟ ದರ್ಶನ್ ಮೇಲೆ ಮತ್ತೊಂದು ಗಂಭೀರ ಆರೋಪ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೇಳಿ ಬಂದಿದೆ. ವನ್ಯಜೀವಿಗಳ ನಿಷೇಧಿತ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಕೊಲೆಗೆ ಬಳಸಿದ ಜೀಪ್ ಬಳಸಿ ಅರಣ್ಯ ಮತ್ತು ವನ್ಯಜೀವಿ ಕಾಯ್ದೆ ಉಲ್ಲಂಘನೆ ಮಾಡಿರುವ ಆರೋಪ ಕೇಳಿಬಂದಿದೆ. ಕರ್ನಾಟಕ ರಾಜ್ಯ ಅರಣ್ಯ ಮತ್ತು ವನ್ಯಜೀವಿ ರಾಯಭಾರಿ ಆಗಿರುವ ನಟ ದರ್ಶನ್ ಇತ್ತೀಚೆಗೆ ಜಿಲ್ಲೆಯ ಮುತ್ತೋಡಿ, ಭದ್ರ ವನ್ಯಜೀವಿ ತಾಣದಲ್ಲಿ ಖಾಸಗಿ ವಾಹನ ಬಳಕೆ ಮಾಡಿದ್ದಾರೆ. ಸೂಕ್ಷ್ಮ ಪ್ರದೇಶಗಳಲ್ಲಿ ಅರಣ್ಯ ಸಿಬ್ಬಂದಿಗಳ ಜತೆ ಬಾಡೂಟ ಎಣ್ಣೆ ಪಾರ್ಟಿ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಘಟನೆಗೆ ಸಂಬಂಧಿಸಿದ ಫೋಟೊಗಳು ವೈರಲ್ ಆಗಿವೆ. ಅರಣ್ಯದ ಸೂಕ್ಷ್ಮ ಪ್ರದೇಶದಲ್ಲಿ ಖಾಸಗಿ ಕಾರುಗಳ ಬಳಕೆ ನಿಷಿದ್ಧವಾಗಿದೆ. ಈ ಘಟನೆ ಕುರಿತಂತೆ ಚಿಕ್ಕಮಗಳೂರಿನ ಅರಣ್ಯ ಸಿಬ್ಬಂದಿಗಳ ವಿರುದ್ಧ ಸಹಾ ಗಂಭೀರ ಆರೋಪ ಕೇಳಿಬಂದಿದೆ.

ಸರಕಾರದ ಗ್ಯಾರಂಟಿ ನಿಲ್ಲಲಿದೆ: ಶೆಟ್ಟರ್

ಬೆಳಗಾವಿ : ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾದ ಹಿನ್ನಲೆಯಲ್ಲಿ ಕಾಂಗ್ರೆಸ್ ಶಾಸಕರೇ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರು ಗ್ಯಾರಂಟಿ ಯೋಜನೆಗಳು ಮುಂಬರುವ ದಿನಗಳಲಿ ಬಂದ್ ಮಾಡುತ್ತಾರೆ ಎಂದು ಸಂಸದ ಜಗದೀಶ್ ಶೆಟ್ಟರ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಗ್ಯಾರಂಟಿ ಯೋಜನೆ ಜಾರಿಯಾಗಿದ್ದರಿಂದ ನಮಗೆ 25 ಸ್ಥಾನ ಸಿಗುತ್ತದೆ ಎಂದು ಕಾಂಗ್ರೆಸ್ ಭಾವಿಸಿತ್ತು. ಆದರೆ ಲೋಕಸಭಾ ಚುನಾವಣೆ ಇದು, ಜನ ಕೇಂದ್ರದ ನಾಯಕತ್ವ ನೋಡಿ ಮತ ನೀಡುತ್ತಾರೆ. ಈ ಚುನಾವಣೆಯಲ್ಲಿ ಜನ ಕಾಂಗ್ರೆಸ್ ತಿರಸ್ಕಾರ ಮಾಡಿದ್ದು, ಕಾಂಗ್ರೆಸ್ ನಾಯಕರೇ ಗ್ಯಾರಂಟಿ ಕೈ ಬಿಡುವಂತೆ ಹೇಳಿಕೆ ನೀಡುತ್ತಿದ್ದಾರೆ ಎಂದರು. ಮಹದಾಯಿ ಕಳಸಾ ಬಂಡೂರಿ ಯೋಜನೆ ಸಂಬಂಧ ಈಗಾಗಲೇ ರಾಜ್ಯಕ್ಕೆ 13 ಟಿಎಂಸಿ ನೀರು ಸಿಕ್ಕಿದೆ. ಅಲ್ಲದೇ ಕೇಂದ್ರ ಸರಕಾರ ಅನುಮತಿ ಕೂಡ ನೀಡಿದೆ. ಪರಿಸರ ಮತ್ತು ಅರಣ್ಯ ಇಲಾಖೆ, ವನ್ಯಜೀವಿ ಮಂಡಳಿಯಲ್ಲಿ ಬಾಕಿಯಿದೆ. ಹಾಗಾಗಿ, ಸಂಬಂಧಿಸಿದ ಸಚಿವರನ್ನು ನಾನೇ ಖುದ್ದಾಗಿ ಭೇಟಿಯಾಗುತ್ತೇನೆ. ಅಲ್ಲದೇ ವನ್ಯಜೀವಿ ಮಂಡಳಿಯವರ ಜತೆಗೂ ಸಮಾಲೋಚಿಸುತ್ತೇನೆ ಎಂದು ತಿಳಿಸಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣ ಅಮಾನವೀಯ ವರ್ತನೆ

ಕಾನೂನು ಮುಂದೆ ಎಲ್ಲರೂ ಸಮಾನರು

ಹುಬ್ಬಳ್ಳಿ: ರೇಣುಕಾಸ್ವಾಮಿ ಕೊಲೆ ಪ್ರಕರಣ ಅಮಾನವೀಯ ವರ್ತನೆಯಾಗಿದೆ. ಈ ರೀತಿ ಕೊಲೆ ಮಾಡುವ ಅಧಿಕಾರ ಯಾರಿಗೂ ಇಲ್ಲ. ಸೆಲೆಬ್ರಿಟಿಗಳು, ರಾಜಕಾರಣಿಗಳು ಕಾನೂನು ಮುಂದೆ ಎಲ್ಲರೂ ಸಮಾನರು. ಕಾನೂನು ಕೈಗೆ ತೆಗೆದುಕೊಳ್ಳುವುದೇ ಅಪರಾಧ. ಮರ್ಡರ್ ಹಂತಕ್ಕೆ ಹೋದರೆ ಬಹಳ ಗಂಭೀರವಾಗಿ ಪರಿಗಣಿಸಬೇಕು ಎಂದು ಮಾಜಿ ಮುಖ್ಯ ಮಂತ್ರಿ ಬೊಮ್ಮಾಯಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇದೊಂದು ಗಂಭೀರವಾಗಿರುವ ಪ್ರಕರಣವಾಗಿದೆ. ಪ್ರಾರಂಭದಲ್ಲಿ ತನಿಖಾ ಅಧಿಕಾರಿಗಳು ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಕೊನೆವರೆಗೂ ಚುರುಕಾಗಿ ಕಾನೂನುಬದ್ಧವಾಗಿ ಕೆಲಸ ಮಾಡಿದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತೆ ಎಂದರು.

ಶಿಗ್ಗಾವಿ ಉಪಚುನಾವಣೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಬೊಮ್ಮಾಯಿ, ಸದ್ಯದಲ್ಲೇ ಉಪಚುನಾವಣೆ ಪ್ರಕ್ರಿಯೆ ಶುರುವಾಗಲಿದೆ. ನಾನು ಇನ್ನೂ ರಾಜೀನಾಮೆ ಕೊಟ್ಟಿಲ್ಲ. ರಾಜೀನಾಮೆ ಕೊಟ್ಟ ಮೇಲೆ ಪ್ರಕ್ರಿಯೆ ಪ್ರಾರಂಭವಾಗಲಿದೆ. ಜೂನ್ 17 ರಂದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದೇನೆ. ಟಿಕೆಟ್ ನೀಡುವ ಬಗ್ಗೆಯೂ ಚರ್ಚೆ ನಡೆದಿದೆ. ಅದನ್ನು ಪಕ್ಷ ತೀರ್ಮಾನ ಮಾಡುತ್ತದೆ. ಪಕ್ಷ ಯಾರಿಗೇ ಟಿಕೆಟ್ ಕೊಟ್ಟರು ಪ್ರಾಮಾಣಿಕವಾಗಿ ಗೆಲ್ಲಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಕೇಂದ್ರ ಸಚಿವ ಸ್ಥಾನ ಕೈತಪ್ಪಿದ ವಿಚಾರ ಕುರಿತು ಮಾತನಾಡಿ, ನಾನು ಸಂಸದನಾಗಿಯೇ ಕೆಲಸ ಮಾಡಬಲ್ಲೆ. ಇಂದಿನಿಂದ ಕೇಂದ್ರದ ಯೋಜನೆಗಳನ್ನು ಚುರುಕುಗೊಳಿಸುವೆ. ಕೇಂದ್ರ ಸಂಪುಟದಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯದ ಪ್ರಶ್ನೆಯೇ ಇಲ್ಲ. ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾಗಿದ್ದಾರೆ. ಎನ್‌ಡಿಎ ಅಭ್ಯರ್ಥಿಯಾಗಿ ಮೋದಿ ಅವರನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಭಾಗಿಯಾದ ಸೌಭಾಗ್ಯ ನನ್ನದು ಎಂದು ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಬಂದಾಗ ಬರಗಾಲ ಶುರುವಾಗಿತ್ತು. ಆದರೆ, ಕೇಂದ್ರದಲ್ಲಿ ಮೋದಿಯವರ ಸರಕಾರ ಬಂದ ಕೂಡಲೇ ಮಳೆ ಶುರುವಾಗಿದೆ. ರಾಜ್ಯ ಸರಕಾರ ರೈತರಿಗೆ ಬೀಜ ಮತ್ತು ಗೊಬ್ಬರ ವ್ಯವಸ್ಥೆ ಮಾಡಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ರೈತರಿಗೆ ಅನುಕೂಲ ಮಾಡಿಕೊಡಬೇಕು.

ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ

ಕೋಮುವಾದಿ ಚಟುವಟಿಕೆಗೆ ಕಾಂಗ್ರೆಸ್ ಸರಕಾರ ಕುಮ್ಮಕ್ಕು

ಚಿಕ್ಕಮಗಳೂರು: ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರ ಕೋಮುವಾದಿ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುತ್ತಿದ್ದು, ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಬಿಜೆಪಿ ಮುಖಂಡ ಸಿ.ಟಿ. ರವಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಸಂದರ್ಭ ಮಂಗಳೂರಿನಲ್ಲಿ ನಡೆದ ಚೂರಿ ಇರಿತ ಘಟನೆ ನೋಡಿದರೆ ಗೂಂಡಾಗಿರಿ ತಲೆ ಎತ್ತುತ್ತಿದೆ. ಕಾಂಗ್ರೆಸ್ ಆಡಳಿತದಲ್ಲಿ ಆತ್ಮಹತ್ಯೆ, ಕೊಲೆ ಪ್ರಕರಣಗಳು ಹೆಚ್ಚಾಗಿವೆ ಎಂದು ಟೀಕಾ ಪ್ರಹಾರ ನಡೆಸಿದರು.

ರಾಜ್ಯ ಸರಕಾರ ಕೋಮುವಾದಿಯಾಗಿ ಮಾರ್ಪಟ್ಟಿದ್ದು, ಗೂಂಡಾಗಳು ಮತ್ತು ಪುಂಡರಿಗೆ ಭಯ ಇಲ್ಲದಂತಾಗಿದೆ. ಒಂದು ಸಮುದಾಯದ ಜನರು ರಸ್ತೆಯಲ್ಲಿ ನಮಾಜ್ ಮಾಡಿದ್ದಾರೆ. ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿದ್ದಾರೆ. ಆದರೆ ಅಧಿಕಾರಿಯನ್ನು ಕಡ್ಡಾಯ ರಜೆ ಮೇಲೆ ಕಳುಹಿಸಿ ಪ್ರಕರಣವನ್ನು ವಜಾಗೊಳಿಸಲಾಗಿದೆ. ಇದರಿಂದ ಏನು ಮಾಡಿದರೂ ಪುಂಡರ ಜತೆಗಿದ್ದೇವೆ ಎಂಬ ಸಂದೇಶವನ್ನು ಸರಕಾರ ರವಾನಿಸಿದೆ ಎಂದರು.

ಬಿಜೆಪಿ ಲೋಕಸಭೆ ಚುನಾವಣೆ ಎದುರಿಸಲು ಜೆಡಿಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ ಎಂದು ವರ್ಷದ ಹಿಂದೆ ಯಾರೂ ಊಹಿಸಿರಲಿಲ್ಲ. ಮೈತ್ರಿ ಪ್ರಯೋಗ ಯಶಸ್ವಿಯಾಗಿದ್ದು, ನೆಹರು ಅವರ ದಾಖಲೆಯನ್ನು ಸರಿಗಟ್ಟಿ, ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಲು ನೆರವಾಗಿರುವುದರಿಂದ ಎರಡೂ ಪಕ್ಷಗಳಿಗೆ ಲಾಭವಾಗಲಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಕೆರೆ ಭರ್ತಿಗೆ ಚಾಲನೆ ದೊರೆಯಲಿ

ಕಳೆದ ವರ್ಷ ಕೈಕೊಟ್ಟಿದ್ದ ಮುಂಗಾರು ಈ ಬಾರಿ ಸಮೃದ್ಧವಾಗಿರುವ ಸೂಚನೆ ಸಿಕ್ಕಿದೆ. ಮೇ ಮೊದಲ ವಾರದಿಂದಲೇ ಆರಂಭವಾದ ಮುಂಗಾರುಪೂರ್ವ ಮಳೆಯಿಂದಾಗಿ ರಾಜ್ಯದ ಜನತೆ ನೀರಿನ ಸಂಕಷ್ಟದಿಂದ ದೂರವಾಗಿದ್ದಾರೆ. ಇದೀಗ ರಾಜ್ಯಾದ್ಯಂತ ಮುಂಗಾರು ಅಬ್ಬರ ಆರಂಭವಾಗಿದ್ದು ನದಿ, ಜಲಾಶಯಗಳ ಮಟ್ಟ ಏರಿಕೆ ಕಂಡಿದೆ. ಕೆರೆ-ಕಟ್ಟೆಗಳು ಭರ್ತಿಯಾಗುತ್ತಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಜೂನ್ ತಿಂಗಳಲ್ಲಿ ಈ ತನಕ ಶೇ. 62ರಷ್ಟು ಹೆಚ್ಚು ಮಳೆ ಸುರಿದಿದೆ. ರಾಜ್ಯದ ಜನತೆಗೆ ಇದು ಶುಭ ಸುದ್ದಿ . ಆದರೆ ಈ ಹಿಂದಿನ ನಮ್ಮ ತಪ್ಪುಗಳನ್ನು ಪುನರಾವರ್ತಿಸಿದರೆ, ಎಷ್ಟೇ ಮಳೆ ಸುರಿದರೂ ಏಪ್ರಿಲ್, ಮೇ ತಿಂಗಳಲ್ಲಿ ನೀರಿಗಾಗಿ ಹಪಿಹಪಿಸುವ ಚಾಳಿ ನಿಲ್ಲುವುದಿಲ್ಲ. ರಾಜ್ಯದಲ್ಲಿ ಕೆರೆ ಕಟ್ಟೆಗಳನ್ನು ತುಂಬಿಸುವ ಕೆಲಸಕ್ಕೆ ಈಗಿಂದೀಗಲೇ ಚಾಲನೆ ನೀಡಬೇಕು. ಕಳೆದ ವರ್ಷ ಕಾವೇರಿ ಆಶ್ರಿತ ಜಿಲ್ಲೆಗಳಲ್ಲಿ ಕೆರೆಗಳನ್ನು ತುಂಬಿಸುವ ಕೆಲಸಕ್ಕೆ ತಡವಾಗಿ ಚಾಲನೆ ನೀಡಲಾಗಿತ್ತು. ಅಷ್ಟರಲ್ಲಿ ಮುಂಗಾರು ಕೈ ಕೊಟ್ಟಿತ್ತು. ತಮಿಳುನಾಡು ತನ್ನ ಪಾಲಿನ ನೀರಿಗಾಗಿ ಬೇಡಿಕೆ ಮಂಡಿಸಿತ್ತು. ಇದರಿಂದ ಈ ಭಾಗದ ರೈತರು ಬೇಸಿಗೆಯಲ್ಲಿ ಬೆಳೆಗೆ ನೀರಿಲ್ಲದೆ ಸಂಕಷ್ಟಕ್ಕೆ ಗುರಿಯಾಗಿದ್ದರು. ಈ ಬಾರಿ ತಮಿಳುನಾಡು ಕ್ಯಾತೆ ತೆಗೆಯುವ ಮುನ್ನವೇ ಕೆರೆ ಕಟ್ಟೆಗಳನ್ನು ತುಂಬಿಸುವ ಕೆಲಸಕ್ಕೆ ಚಾಲನೆ ಸಿಗಬೇಕಾಗಿದೆ. ರಾಜ್ಯದಲ್ಲಿ 10 ವರ್ಷಗಳ ಹಿಂದೆ ಕೆರೆಗಳನ್ನು ತುಂಬಿಸುವ ಯೋಜನೆ ಆರಂಭವಾದ ಬಳಿಕ 117 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಏರಿಕೆ ಕಂಡಿದೆ. ಅದರಲ್ಲೂ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರದಂತಹ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಏರಿಕೆ ಕಂಡಿದೆ. ಕೋಲಾರದ ಭಾಗದ ಫ್ಲೋರೈಡ್ ಸಮಸ್ಯೆಗೆ ಈ ಯೋಜನೆ ಸ್ವಲ್ಪ ಮಟ್ಟಿಗೆ ಪರಿಹಾರ ಕಲ್ಪಿಸಿದೆ. ಇದೇ ರೀತಿ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ವಿಶೇಷವಾಗಿ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲೂ ಕೆರೆ ತುಂಬಿಸುವ ಯೋಜನೆ ರೈತರ ಪಾಲಿಗೆ ಸಂಜೀವಿನಿಯಾಗಿದೆ. ಈ ಯೋಜನೆಯಿಂದ ಕೆರೆಗಳು ತುಂಬುವುದು ಮಾತ್ರವಲ್ಲ ಅಂತರ್ಜಲ ಮಟ್ಟ ಏರಿಕೆಯಾಗುವುದರಿಂದ ಬೋರ್‌ವೆಲ್ ಕೊರೆದು ಕೃಷಿ ಮಾಡುವ ರೈತರಿಗೂ ಪ್ರಯೋಜನಕಾರಿಯಾಗಿದೆ. ಕೆರೆ ಭರ್ತಿ ಯೋಜನೆಯ ಕಾರಣದಿಂದಲೇ ಹಲವು ಜಿಲ್ಲೆಗಳಲ್ಲಿ ಅಂತರ್ಜಲ ಕುಸಿತಕ್ಕೆ ಸ್ವಲ್ಪ ಮಟ್ಟಿಗಾದರೂ ತಡೆ ಬಿದ್ದಿದೆ. ಮಳೆ ನೀರನ್ನು ಸಮರ್ಥವಾಗಿ ಬಳಸಿಕೊಳ್ಳುವುದೊಂದೇ ಭವಿಷ್ಯದಲ್ಲಿ ನಮ್ಮ ನೀರಿನ ಬವಣೆಗಳನ್ನು ತಪ್ಪಿಸಲು ಇರುವ ಏಕೈಕ ಮಾರ್ಗ.

ಸೊಂಪಾದಕೀಯ

50 ನಾಟ್ ಔಟ್

ಇಂದಿನ ಜೆನರೇಷನ್‌ನಲ್ಲಿ ಜನರಿಗೆ ತಮ್ಮ ಜೀವನ ಸಂಗಾತಿಗಳಿಗಿಂತ ಹೆಚ್ಚು ಅಗತ್ಯ ಎನಿಸಿರೋ ವಸ್ತು ಅಂದ್ರೆ, ಅದು ಮೊಬೈಲ್ ಫೋನ್. ಪ್ರೀತಿಸುವ ಹುಡುಗ, ಹುಡುಗಿ, ಗಂಡ ಹೆಂಡತಿಯರಿಗೆ ನಿನ್ನ ಬಿಟ್ಟು ಬದುಕೋಕಾಗಲ್ಲ ಅಂತ ಹೇಳುವ ಜನ ಎಷ್ಟಿದ್ದಾರೋ ಗೊತ್ತಿಲ್ಲ. ಆದರೆ ಮೊಬೈಲ್ ಬಿಟ್ಟು ಇರೋಕಾಗಲ್ಲ ಅಂತ ಅದನ್ನು ಬಳಸುವ ಬಹುತೇಕ ಎಲ್ಲರೂ ಹೇಳುತ್ತಾರೆ. ಅಂಥ ಮೊಬೈಲ್ ಫೋನ್‌ಗೆ ಈಗ 51ನೇ



ಹುಟ್ಟುಹಬ್ಬ. ಹೌದು ಜಗತ್ತಿನ ಮೊದಲ ಮೊಬೈಲ್ ಫೋನ್ ಆವಿಷ್ಕಾರ ಆಗಿ ಇದೇ 51 ವರ್ಷ ಕಳೆದಿವೆ. 1973ರ ಏಪ್ರಿಲ್ 3ರಂದು ಮೊಬೈಲ್ ಫೋನ್ ಬಳಸಿ ಮೊದಲ ಕರೆ ಮಾಡಲಾಗಿತ್ತು. ಆದರೆ ವಿಜ್ಞಾನಿಗಳ ಪ್ರಯೋಗಾಲಯದಲ್ಲಿ ಕಂಡು ಹಿಡಿಯಲಾದ ಈ ಮೊಬೈಲ್ ಜನರ ಕೈಗೆ ಸೇರುವಂತಾಗಿದ್ದು 10 ವರ್ಷಗಳ ನಂತರ, ಅಂದರೆ 1983ರಲ್ಲಿ. ಆದರೆ ಆಗಿನ ಮೊಬೈಲ್ ಗಳು ಈಗಿನವುಗಳಂತೆ ಸುಲಭವಾದ ಹ್ಯಾಂಡ್ ಹೆಲ್ಡ್ ಡಿವೈಸ್‌ಗಳಾಗಿರಲಿಲ್ಲ ಬಿಡಿ. ಭಾರೀ ತೂಕ ಹೊಂದಿದ್ದ ಆಗಿನ ಮೊಬೈಲ್‌ಗಳು ಗ್ರಾಹಕರ ಜೇಬಿಗೂ ಬಹಳ ತೂಕವೇ ಆಗಿದ್ದವು. 10 ಗಂಟೆ ಚಾರ್ಜ್ ಮಾಡಿದರೆ 33 ನಿಮಿಷ ಮಾತಾಡಬಹುದಾಗಿದ್ದ ಮೊದಲ ಮೊಬೈಲ್‌ನ ಬೆಲೆ 9.67 ಲಕ್ಷ ರುಪಾಯಿ ಆಗಿತ್ತಂತೆ. ಅದರ ತೂಕ ಮುಕ್ಕಾಲು ಕೆಜಿ. ಈಗಿನ ಮೊಬೈಲ್‌ಗಳ ಕಥೆ ಬೇರೆ ಬಿಡಿ. ಈಗಿನವೆಲ್ಲ ಸ್ಲಿಮ್ ಆಗಿ ಝೀರೋ ಸೈಜ್ ಮೈಂಟೈನ್ ಮಾಡಿರುವ ಡಯಟ್ ಮೊಬೈಲ್‌ಗಳು. ಹಾಗಂತ ಈ ಡಯಟ್ ಮೊಬೈಲ್‌ಗಳು ಬಜೆಟ್ ವಿಷಯದಲ್ಲಿ ಕಮ್ಮಿ ಏನೂ ಇಲ್ಲ. ಸ್ಲಿಮ್, ಫೋಲ್ಡ್. ಫ್ಲಿಪ್, ರೋಲಬಲ್ ಅಂತೆಲ್ಲಾ ಮೊಬೈಲ್ ಫೋನ್‌ಗಳು ತಮ್ಮ ಆಕಾರ ಮತ್ತು ಅವತಾರ ಎಲ್ಲವನ್ನೂ ಬದಲಿಸುತ್ತಿವೆ. ಅಷ್ಟೇ ಅಲ್ಲದೆ ಮನುಷ್ಯ ಕೂಡಾ ಈ ಮೊಬೈಲ್ ಫೋನ್‌ಗಳಿಂದಾಗಿ ಹೊಸ ಹೊಸ ಅವತಾರಗಳನ್ನು ಮಾಡ್ತಾ ಇದ್ದಾನೆ. ಹಲವು ವಿಷಯಗಳಲ್ಲಿ ಮೊಬೈಲ್ ಫೋನ್ ಅನ್ನೋದು ಮನುಷ್ಯನಿಗೆ ಎಷ್ಟು ಉಪಯೋಗಿ ಆಗಿದೆಯೋ ಅದರ ಜೊತೆ ಅವನಿಗೆ ಅಷ್ಟೇ ಸಂಕಷ್ಟಗಳನ್ನೂ ತಂದಿಟ್ಟಿದೆ. ಮುಖ್ಯವಾಗಿ ಮನುಷ್ಯ ಮೊಬೈಲ್ ಫೋನ್‌ಗಳಿಂದಾಗಿ ತನ್ನ ಪ್ರೈವೆಸಿ ಕಳೆದುಕೊಳ್ಳುತ್ತಿದ್ದಾನೆ ಅನ್ನೋದಂತೂ ಸತ್ಯ. ಇವೆಲ್ಲದರ ನಡುವೆಯೂ ಮೊಬೈಲ್ ಇಲ್ಲದೆ ಜೀವನ ನಿರರ್ಥಕ ಅನ್ನುವಷ್ಟರ ಮಟ್ಟಕ್ಕೆ ನಾವು ಅದಕ್ಕೆ ಅಡಿಕ್ಟ್ ಆಗಿರೋದಂತೂ ಸತ್ಯ. ಎನಿ ಹೌ, ಹ್ಯಾಪಿ ಬರ್ತ್ ಡೇ ಮೊಬೈಲ್ ಫೋನ್.

ಸಂಪಾದಕರ ಸದ್ಯಶೋಧನೆ

ಸಾರ್ವಜನಿಕ ದಾನಿಗಳು

ಒಂದು ದಿನ ಒಬ್ಬ ಕವಿ ರಾಜನ ಆಸ್ಥಾನದಲ್ಲಿ ಹತ್ತಾರು ಹಾಡುಗಳನ್ನು ಹಾಡಿದ. ಆತನ ಹಾಡನ್ನು ಕೇಳಿದ ರಾಜನಿಗೆ ಅತೀವ ಸಂತೋಷವಾಯಿತು. ಕಾರ್ಯಕ್ರಮದ ಕೊನೆಯಲ್ಲಿ, ರಾಜ ಕವಿಯನ್ನು ಪ್ರಶಂಸಿಸಿದ. ಅಷ್ಟೇ ಅಲ್ಲ, ಕವಿಗೆ ಐವತ್ತು ಸಾವಿರ ರುಪಾಯಿಗಳನ್ನು ನೀಡುವಂತೆ ಆದೇಶಿಸಿದ. ಈ ಮಾತುಗಳನ್ನು ಕೇಳುತ್ತಿದ್ದಂತೆ, ಕವಿಗೆ ವಿಪರೀತ ಖುಷಿಯಾಯಿತು. ಬಹುಮಾನದ ಹಣವನ್ನು ಸ್ವೀಕರಿಸಲು ಖಜಾಂಚಿಯ ಬಳಿ ಹೋದ. ಆದರೆ ಕವಿಗೆ ಅಲ್ಲೊಂದು ಆಘಾತ ಕಾಡಿತ್ತು. 'ನಿನಗೆ ನಾನು ಐವತ್ತು ಸಾವಿರ ರುಪಾಯಿಗಳನ್ನು ಕೊಡಲು ಸಾಧ್ಯವಿಲ್ಲ' ಎಂದು ಖಡಾಖಡಿ ಹೇಳಿದ. ಆಗ ಕವಿ, 'ನಾನೇನು ನಿಮ್ಮ ಬಳಿ ಹಣ ಕೇಳಿಲ್ಲ. ರಾಜನೇ ಬಹುಮಾನವನ್ನು ಘೋಷಿಸಿದ್ದಾನೆ. ಅದನ್ನು ಸ್ವೀಕರಿಸಲು ಬಂದಿದ್ದೇನೆ' ಎಂದು ಹೇಳಿದ. ಆಗ ಖಜಾಂಚಿ, 'ರಾಜನು ಬಹುಮಾನ ಘೋಷಿಸಿರಬಹುದು. ಆದರೆ ನಾನು ಕೊಡುವುದಿಲ್ಲ. ನಾನು ಬಹುಮಾನ ನೀಡಲು ನಿರಾಕರಿಸುತ್ತಿದ್ದೇನೆ ಎಂದು ರಾಜನಿಗೆ ಹೋಗಿ ಹೇಳು' ಎಂದು ದಬಾಯಿಸಿದ. ಬೇರೆ ದಾರಿ ಕಾಣದೇ ಕವಿ ರಾಜನ ಬಳಿ ಹೋಗಿ, 'ಮಹಾಪ್ರಭು, ನೀವು ಘೋಷಿಸಿದ ಬಹುಮಾನದ ಹಣವನ್ನು ನೀಡಲು ಖಜಾಂಚಿ ನಿರಾಕರಿಸಿದ್ದಾನೆ' ಎಂದು ಹೇಳಿದ. ಅದಕ್ಕೆ ರಾಜ, 'ಅವನೇಕೆ ನಿನಗೆ ಹಣವನ್ನು ಕೊಡಬೇಕು? ಎಂದು ಹೇಳಿದ. ಕವಿಯ ಜಂಘಾಬಲವೇ ಉಡುಗಿ ಹೋಯಿತು. 'ನನಗೆ ಐವತ್ತು ಸಾವಿರ ರುಪಾಯಿಗಳನ್ನು ನೀಡುವಂತೆ ಆದೇಶಿಸಿದವರು ನೀವೇ ಅಲ್ಲವೇ?' ಎಂದ. ಆಗ ರಾಜ, 'ನಾನು ಹಾಗೆ ಹೇಳಿದ್ದು ನಿಜ. ನಾನೀಗ ನಿನಗೆ ಒಂದು ಪ್ರಶ್ನೆ ಕೇಳುತ್ತೇನೆ. ನಾನು ಬಹುಮಾನ ಘೋಷಿಸಿದಾಗ ನಿನಗೆ ಏನನಿಸಿತು?' ಎಂದು ಕೇಳಿದ. 'ನನಗೆ ಬಹಳ ಸಂತಸವಾಯಿತು' ಎಂದ ಕವಿ. ಆಗ ರಾಜ, 'ನಿನ್ನ ಹಾಡುಗಳಿಂದ ನನ್ನನ್ನು ಸಂತೋಷಪಡಿಸಿದ್ದೀಯಾ. ಬಹುಮಾನ ಘೋಷಿಸುವ ಮೂಲಕ ನಾನು ನಿನಗೆ ಸಂತಸ ನೀಡಿದ್ದೇನೆ. ಅಲ್ಲಿಗೆ ಮುಗಿಯಿತು. ಹೀಗಿರುವಾಗ ಬಹುಮಾನದ ಹಣವನ್ನೇಕೆ ನಿರೀಕ್ಷಿಸುತ್ತೀರಿ?' ಎಂದುಬಿಟ್ಟ. ಕವಿಗೆ ಬಹಳ ನಿರಾಸೆಯಾಯಿತು. ತನಗೆ ರಾಜ ಮೋಸ ಮಾಡಿದ ಎಂದು ಭಾವಿಸಿದ. ಆದರೆ ರಾಜನಿಗೆ ಏನೂ ಅನಿಸಲಿಲ್ಲ. ಅನೇಕರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಬಹುಮಾನವನ್ನು ಘೋಷಿಸುತ್ತಾರೆ, ಆದರೆ ಸಂಬಂಧಪಟ್ಟವರಿಗೆ ಅದನ್ನು ಕೊಡುವುದಿಲ್ಲ. ಸಾರ್ವಜನಿಕ ಸಭೆಯಲ್ಲಿ ಬಹುಮಾನ ಪ್ರಕಟಿಸಿದಾಗ, ಅಲ್ಲಿದ್ದವರು ಚಪ್ಪಾಳೆ ತಟ್ಟುತ್ತಾರೆ, ಮರುದಿನ ಪತ್ರಿಕೆಯಲ್ಲಿ ಆ ಸುದ್ದಿ ಪ್ರಕಟವಾಗುತ್ತದೆ, ಅವರಿಗೆ ಅಷ್ಟೇ ಸಮಾಧಾನ. ತಮಗೆ ಸಿಗಬೇಕಾದ ಪ್ರಚಾರ ಸಿಕ್ಕಿರುತ್ತದೆ. ಇಷ್ಟಾದ ನಂತರ, ಘೋಷಿಸಿದ ಹಣವನ್ನು ಅವರು ಕೊಡುವುದೇ ಇಲ್ಲ. ಆದರೆ ಈ ಸಂಗತಿ ಮಾತ್ರ ಬಹುಮಾನಕ್ಕೆ ಪಾತ್ರನಾದ ವ್ಯಕ್ತಿಯ ಹೊರತಾಗಿ, ಮತ್ಯಾರಿಗೂ ಗೊತ್ತಾಗುವುದಿಲ್ಲ. ಇದನ್ನು ಕೆಲವರು ಚಟವನ್ನಾಗಿ ಮಾಡಿಕೊಳ್ಳುತ್ತಾರೆ. ಸಾವಿರಾರು ಜನ ಸೇರಿದ ಸಭೆ-ಸಮಾರಂಭಗಳಲ್ಲಿ ತಾವು ಮಹಾದಾನಿಗಳು ಎಂಬಂತೆ ಪೋಸು ಕೊಡುತ್ತಾರೆ. ಆದರೆ ಹಣ ನೀಡಬೇಕಾದ ಸಂದರ್ಭ ಬಂದಾಗ, ಏನೇನೋ ಸಬೂಬು ಹೇಳಿ, ನುಣುಚಿಕೊಳ್ಳುತ್ತಾರೆ. 'ಬಹುಮಾನ ಘೋಷಿಸುವ ಮೂಲಕ ನಾನು ನಿನಗೆ ಸಂತೋಷ ನೀಡಿದ್ದೇನೆ' ಎನ್ನುವ ಜನರು ಈಗಿನ ಕಾಲದಲ್ಲೂ ಇದ್ದಾರೆ. ಅಂದ ಹಾಗೆ ಈ ಘಟನೆಯನ್ನು ಹೇಳಿದವರು ಶೃಂಗೇರಿಯ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು. ಅವರು ಬರೆದ 'ತಿಳಿ ಹೇಳುವ ನೀತಿಕಥೆಗಳು' ಎಂಬ ಕೃತಿಯಲ್ಲಿ ಈ ಘಟನೆಯನ್ನು ಪ್ರಸ್ತಾಪಿಸಿದ್ದಾರೆ.

ತರುವಿಗಿಂತ ಲತೆಯ ವಿಕಸನ ಹೆಚ್ಚು ನಿಗೂಢ!

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

ನಮ್ಮ ಊರಿನ ತೋಟಗಳಲ್ಲಿ ಅಡಿಕೆ, ತೆಂಗು ಮತ್ತು ಬಾಳೆ ಬಿಟ್ಟು ಬೆಳೆಸುವ ಇನ್ನೆರಡು ಗಿಡಗಳಿವೆ. ಅವು ಗಿಡ ಎನ್ನುವುದಕ್ಕಿಂತ ಬಳ್ಳಿಗಳು. ವೀಳ್ಯದೆಲೆ ಬಳ್ಳಿ ಮತ್ತು ಕಾಳುಮೆಣಸಿನ ಬಳ್ಳಿ. ಅಡಿಗೆಗೆ ಕಾಳುಮೆಣಸು ಮತ್ತು ತಾಂಬೂಲಕ್ಕೆ ವೀಳ್ಯದೆಲೆ. ಇವು ನಮ್ಮ ಕೃಷಿಯ ಸಹೋತ್ಪನ್ನಗಳು. ಇಲ್ಲಿ ಸ್ವಂತ ಬಳಕೆಗೆ ಪ್ರಾಧಾನ್ಯ, ಹೆಚ್ಚುವರಿಯಿದ್ದರೆ ಮಾರಾಟ, ಲಾಭ ಇತ್ಯಾದಿ. ಇವೆರಡೂ ಸಸ್ಯಗಳು ತೀರಾ ಹತ್ತಿರದ ಸಂಬಂಧಿ. ವೈಜ್ಞಾನಿಕವಾಗಿ ಒಂದೇ ತಾಯಿಯ ಮಕ್ಕಳು, ಪೈಪರ್ ಕುಲಕ್ಕೆ ಸೇರಿದವು. ವೀಳ್ಯದೆಲೆಯ ಬಯೋನೋಮಿಯಲ್ ಹೆಸರು ಪೈಪರ್ ಬೀಟ್ಲೆ. ಕಾಳುಮೆಣಸಿನದು ಪೈಪರ್ ನಿಗ್ರಮ್. ವೀಳ್ಯದೆಲೆಗೆ ಮತ್ತು ಕಾಳುಮೆಣಸಿನ ಬಳ್ಳಿಯ ಎಲೆಯ ಆಕಾರದಲ್ಲಿನ ಹೋಲಿಕೆ, ಮೇಲ್ನೋಟಕ್ಕೆ ಇದರ ಪರಿಚಯವಿಲ್ಲದವರಿಗೆ ಒಂದೇ ಎಂಬಂತೆ ಕಂಡರೂ ಸೂಕ್ಷ್ಮದಲ್ಲಿ ಅಜಗಜಾಂತರವಿದೆ. ವೀಳ್ಯದೆಲೆ ಕಾಯಿ ಬಿಡುವುದಿಲ್ಲ ಆದರೆ ಕಾಳುಮೆಣಸಿನ ಬಳ್ಳಿಯ ಕಾಯಿ - ಬ್ಲ್ಯಾಕ್ ಪೆಪ್ಪರ್. ವೀಳ್ಯದೆಲೆಯ ಬಳ್ಳಿ ಬೆಳೆಸುವುದು ಸುಲಭವಲ್ಲ, ತೀರಾ ನಾಜೂಕು. ಅದರ ಬುಡ ಸದಾ ತಂಪಾಗಿರಬೇಕು. ಪ್ರತೀ ವರ್ಷ ಅದಕ್ಕೆ ಮಣ್ಣು, ಗೊಬ್ಬರ ಹಾಕಿ ಕೊಡಬೇಕು. ನೆಲ ಸ್ವಲ್ಪವೇ ಒಣಗಿದರೂ ವೀಳ್ಯದೆಲೆಯ ಬಳ್ಳಿ ಬಾಡಿಹೋಗುತ್ತದೆ. ಬಾಡಿದ ನಂತರ ಅದನ್ನು ಬದುಕಿಸಿಕೊಳ್ಳುವುದು ಕೂಡ ಕಷ್ಟ. ಅಲ್ಲದೆ ಹಬ್ಬುವ ಮರವನ್ನು ಅಷ್ಟು ಗಟ್ಟಿಯಾಗಿ ಹಿಡಿದುಕೊಳ್ಳುವ ತಾಕತ್ತು ವೀಳ್ಯದೆಲೆಗೆ ಇಲ್ಲ. ಹಾಗಾಗಿ ಪ್ರತೀ ವರ್ಷ ಎಲೆಬಳ್ಳಿ ಬೆಳೆದಂತೆ ಮರಕ್ಕೊಂದು ಸುತ್ತು ಅಡಿಕೆಯ ಎಲೆಯನ್ನು ಒಣಗಿಸಿ ಮಾಡಿದ ತೆಳ್ಳನೆಯ ಹಗ್ಗದಿಂದ ಕಟ್ಟಿ ಕೊಡಬೇಕು. ಇಲ್ಲದಿದ್ದರೆ ಗಟ್ಟಿ ಮಳೆಗೆ ಮರಕ್ಕೆ ಹಬ್ಬಿದ ಉದ್ದನೆಯ ಬಳ್ಳಿ ನೆಲಕ್ಕೆ ಬಿದ್ದು ಬಿಡುತ್ತದೆ. ಅಲ್ಲಿಗೆ ಅದರ ಕಥೆ ಮುಗಿದಂತೆ. ಆದರೆ ಕಾಳುಮೆಣಸಿನ ಬಳ್ಳಿ ಹಾಗಲ್ಲ, ಗಟ್ಟಿ ಕುಳ. ಇದಕ್ಕೆ ವಿಶೇಷವಾಗತಿ, ಅರ್ಚನೆ ಬೇಕಾಗುವುದಿಲ್ಲ. ಆಗೀಗ ಬುಡಕ್ಕೆ ನೀರು ಬಿದ್ದರೆ ಸಾಕು. ಹಬ್ಬುವ ಮರವನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತವೆ. ವೀಳ್ಯದೆಲೆ ಬಳ್ಳಿಗಿಂತ ಇದರ ಬೆಳವಣಿಗೆಯ ವೇಗ ಜಾಸ್ತಿ. ಇಷ್ಟು ಹತ್ತಿರದ ಎರಡು ಲತೆಗಳ ಉತ್ಪನ್ನ ಬೇರೆ ಬೇರೆ. ಒಂದರದು ಎಲೆಯೇ ಉತ್ಪನ್ನ, ಇನ್ನೊಂದರದು ಕಾಳು. ಕಾಳುಮೆಣಸಿನ ಎಲೆಯನ್ನು ತಿನ್ನಲಿಕ್ಕೆ ಸಾಧ್ಯವಿಲ್ಲ.

ನಮ್ಮಲ್ಲಿ ತಾಂಬೂಲದ ಬಟ್ಟಲು ಇಡುವುದು ಪ್ರತೀ ಮನೆಯಲ್ಲೂ ಖಡ್ಡಾಯ. ಈ ವೀಳ್ಯದೆಲೆಯ ನಾಜೂಕಿನಿಂದಾಗಿ ಅದನ್ನು ಒಳ್ಳೆಯದಾಗಿ ಬೆಳೆಸುತ್ತಾನೆ ಎಂದರೆ ಆತ ಉತ್ತಮ ಕೃಷಿಕ ಎನ್ನುವ ಒಂದು ನಂಬಿಕೆ ಎಲ್ಲರಲ್ಲೂ ಇದೆ. ಮನೆಯಲ್ಲಿ ವಿಶೇಷವಿದ್ದು ಅಕ್ಕ ಪಕ್ಕದ ಮನೆಯವರು ಬರುವವರಿದ್ದರೆ ಆ ದಿನ ವಿಶೇಷವಾಗಿ ತಾಂಬೂಲದ ಬಟ್ಟಲು ತಯಾರಾಗಿರುತ್ತದೆ. ವೀಳ್ಯದೆಲೆ ಒಳ್ಳೆಯ ಕೃಷಿಕನ ದ್ಯೋತಕವೆಂಬ ಕಾರಣಕ್ಕೆ ಅತ್ಯಂತ ಒಳ್ಳೆಯ ಎಲೆಯನ್ನೇ ಕೊಯ್ದು ತಂದು ಬಟ್ಟಲಲ್ಲಿ ಹರವಿ ಇಡುವುದು ರೂಢಿ. ಅವರ ಮನೆಯ ವೀಳ್ಯದೆಲೆಯ ವಿಶೇಷವನ್ನು ತಾಂಬೂಲ ಸವಿಯುತ್ತ ಹೊಗಳುವುದು ತೀರಾ ಸಾಮಾನ್ಯ ಸೀನ್ ಆಗಿತ್ತು. ನಮ್ಮ ಮನೆಯಲ್ಲಿ ವಿಶೇಷವಿದ್ದಾಗ ಆ ತಾಂಬೂಲ ಬಟ್ಟಲ ತಯಾರಿಯ ಕೆಲಸ ನನಗೆ ಬರುತ್ತಿತ್ತು. ಆಗ ತುಂಟಾಟಿಕೆಗೆ ಎಲೆ ಅಡಿಕೆಯ ಬಟ್ಟಲಿನ ವೀಳ್ಯದೆಲೆಯ ಮಧ್ಯೆ ಕಾಳು ಮೆಣಸಿನ ಎಲೆಯನ್ನು ಇಡುವುದು ಆಗಿನ ಒಂದು ಕುಚೇಷ್ಟೆ. ಖಾಯಂ ಎಲೆ ಅಡಿಕೆ ಅಗಿಯುವವರಿಗೆ ಮಧ್ಯದಲ್ಲಿಟ್ಟ ಕಾಳುಮೆಣಸಿನ ಎಲೆ ಕಂಡಾಕ್ಷಣ, ಮುಟ್ಟಿದಾಕ್ಷಣ ತಿಳಿದುಬಿಡುತ್ತಿತ್ತು. ಆದರೆ ಕೆಲವು ಅಪರೂಪಕ್ಕೆ ಎಲೆ ಅಡಿಕೆ ತಿನ್ನುತ್ತಿದ್ದವರ ಕೈಗೆ ಅದು ಸಿಕ್ಕರೆ ಅವರು ವೀಳ್ಯದೆಲೆಯೆಂದು ತಿಂದು, ಕೂಡಲೆ ವ್ಯಾಕ್ ಎಂದು ಉಗಿಯುತ್ತಿದ್ದರು. ಈ ರೀತಿ ತುಂಟತನ ಮಾಡಿ ನೋಡುವುದು ಒಂದು ಮಜಾ.

ಎರಡು ಒಂದೇ ರೀತಿಯಿರುವ, ಒಂದೇ ಜಾತಿಯ ಆದರೆ ಉಪಪ್ರಬೇಧ ಮಾತ್ರ ಬೇರೆಯಾಗಿರುವ ಈ ಎರಡು ಬಳ್ಳಿಗಳಲ್ಲಿ ಅದೆಷ್ಟು ವ್ಯತ್ಯಾಸ. ಇದು ಒಂದು ವಿಚಾರವಾಯಿತು. ಮನೆಯ ಹಿಂದಿನ ಕಾಡಿನಲ್ಲಿ ಇನ್ನು ಕೆಲವು ಜೋಡಿ ಬಳ್ಳಿಗಳಿದ್ದವು. ಅವು ನೋಡಲು ಒಂದೇ ರೀತಿ ಎಲೆಯನ್ನು ಹೊಂದಿರುತ್ತಿದ್ದವು. ಆದರೆ ಅವುಗಳ ಕಾಂಡವನ್ನು, ಹೂವನ್ನು ಅಥವಾ ಕಾಯಿಯನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಅವು ಸಂಪೂರ್ಣ ಬೇರೆ ಬೇರೆ ಎಂದು ತಿಳಿಯುತ್ತಿತ್ತು. ಅವು ಒಂದೇ ಪ್ರಬೇಧ ಬಿಡಿ, ಸಸ್ಯಕುಲಕ್ಕೂ ಸೇರಿದವಾಗಿರುತ್ತಿರಲಿಲ್ಲ! ಈ ಕಾಡಿನಲ್ಲಿ ಇರುವ ಪ್ರತ್ಯೇಕ ಕುಲದ ಎರಡು ಬಳ್ಳಿಗಳು ಒಂದೇ ತೆರನಾದ ಎಲೆಯನ್ನು, ಆಕಾರವನ್ನು ಹೊಂದುವುದು ಹೇಗೆ ಎಂದು ಆಗೆಲ್ಲ ಬಹಳ ಆಶ್ಚರ್ಯವಾಗುತ್ತಿತ್ತು. ಪ್ರಕೃತಿಯನ್ನು ಸ್ವಲ್ಪವೇ ಸೂಕ್ಷ್ಮವಾಗಿ ನೋಡಿದರೂ ಇಂತಹ ಸಂಬಂಧವೇ ಇಲ್ಲದ ಎರಡು ಸಸ್ಯಗಳ, ಜೀವಿಗಳ ನಡುವೆ ಒಂದಿಷ್ಟು ಹೋಲಿಕೆಗಳು ಬಹಳಷ್ಟು ಬಾರಿ ಎದುರಾಗುತ್ತವೆ ಮತ್ತು ಅಚ್ಚರಿ ಹುಟ್ಟಿ ಹಾಕುತ್ತವೆ. ಅದರಲ್ಲಿಯೂ ಬೇರೆ ಕುಲದ ಸಸ್ಯಗಳು ಹೋಲಿಕೆಯಾಗುವಂತೆ ಇನ್ನೊಂದು ಬೆಳೆಯುವುದು. ಪ್ರಾಣಿಗಳಿಗಾದರೆ ಕಣ್ಣಾರೆ ಕಂಡು ವಿಕಸನವಾದವು ಎನ್ನಬಹುದು. ವಿಕಾಸವಾದವನ್ನು ಒಪ್ಪುವುದೇ ಆದರೆ ಪ್ರಾಣಿಗಳಲ್ಲಿ ಅದು ಸುಲಭ, ಏಕೆಂದರೆ ಗ್ರಹಿಸಲು ಇಂದ್ರಿಯಗಳಿವೆ. ಆದರೆ ಹೀಗೆ ಇನ್ನೊಂದರ ಆಕಾರವನ್ನು ಯಥಾವತ್ತು ನಕಲು ಹೊಡೆಯುವ ಸಸ್ಯ ಇನ್ನೊಂದು ಸಸ್ಯದ ಆಕಾರವನ್ನು ಗ್ರಹಿಸುವುದಾದರೂ ಹೇಗೆ? ಅವಕ್ಕೇನು ಕಣ್ಣು ಉಂಟೆ, ಅವೇನು ಕಾಡಿನ ಸುತ್ತ ಓಡಾಡಿಕೊಂಡು ನೋಡಿ ಬರಲು ಸಾಧ್ಯವೇ? ಹೀಗೊಂದಿಷ್ಟು ಪ್ರಶ್ನೆಗಳು ಉದ್ಭವವಾಗಿ ಹೋಲಿಕೆಗೆ ಸಮಂಜಸವಾದ ಉತ್ತರ ಸಿಗುವುದಿಲ್ಲ. ಪ್ರಾಣಿಗಳು ಮಿಮಿಕ್ರಿ ಮಾಡಬಹುದು, ಆದರೆ ಸಸ್ಯಗಳು ಈ ಮಿಮಿಕ್ರಿ ಕಲಿತದ್ದು, ಹೊಂದಿಸಿಕೊಂಡದ್ದು, ಬದಲಾದದ್ದು ಹೇಗೆ? ಇದು ವಿಕಾಸವಾದದ ಯಾವ ಆಯಾಮದಲ್ಲಿಯೂ ಹೊಂದಿಕೆಯಾಗುವುದಿಲ್ಲ.

ಪ್ರೊ. ಅರ್ನೆಸ್ಟೊ ಜಿಯನೊಲಿ ಚಿಲಿ ದೇಶದ ಪರಿಸರ ತಜ್ಞ ಮತ್ತು ಪ್ರಾಧ್ಯಾಪಕ. ಆತ ಕಲಿಸುತ್ತಿದ್ದುದು ಸಸ್ಯಶಾಸ್ತ್ರ. ಪಾಠಮಾಡಲು ಶಿಷ್ಯರನ್ನು ಕಾಡಿನಲ್ಲಿ ಓಡಾಡಿಸುವುದು ಸಾಮಾನ್ಯವಾಗಿತ್ತು. ಪಾಠಕ್ಕೆ ಕಾಡಿಗೆ ಹೋದಾಗ ನಿಗದಿತ, ಪಠ್ಯಕ್ಕೆ ಸಂಬಂಧಿಸಿದ ಗಿಡದತ್ತ ಮಾತ್ರ ನೋಡಲು ಸಾಧ್ಯವಾಗುತ್ತಿತ್ತು. ಒಂದು ದಿನ ಇನ್ನು ಮುಂದೆ ನಾನು ಪ್ರತೀ ದಿನ ಸಸ್ಯಗಳನ್ನು ನೋಡಲೆಂದೇ ಕಾಡಿಗೆ ಒಬ್ಬನೇ ಹೋಗುವುದು ಎಂದು ನಿರ್ಧರಿಸಿದ. ಕಾಡನ್ನು ಅನುಭವಿಸಬೇಕೆಂದರೆ ಒಬ್ಬರೇ ಹೋಗಬೇಕೇ ಹೊರತು, ಗುಂಪಿನಲ್ಲಿ ಕೂಗುತ್ತ ಹೋದರೆ ಕಾಡು ಗ್ರಾಹ್ಯವಾಗುವುದಿಲ್ಲ, ದಕ್ಕುವುದಿಲ್ಲ. ಪ್ರೊ. ಅರ್ನೆಸ್ಟೊ ದಶಕದ ಹಿಂದೆ ಹೀಗೆ ಒಂದು ದಿನ ಚಿಲಿಯ ಮಳೆಕಾಡಿನಲ್ಲಿ ಒಬ್ಬನೇ ಓಡಾಡುತ್ತಿದ್ದ. ಆಗ 'ಅರಾಯನ್' ಎನ್ನುವ ಪೊದೆಯಂಥ ಗಿಡ ಆತನ ಕಣ್ಣಿಗೆ ಬಿತ್ತು. ಅದು ಪರಿಚಿತ ಗಿಡ. ಎಲ್ಲೆಂದರಲ್ಲಿ, ಊರಲ್ಲೂ ಕಾಣುವ ಗಿಡ. ಆದರೆ ಆತ ನೋಡಿದ ಕಾಡಿನ ಗಿಡದ ಕಾಂಡ ವಿಭಿನ್ನವಾಗಿತ್ತು. ಕಾಂಡವೇನೋ 'ಅರಾಯನ್' ನದೆ ಇತ್ತು ಆದರೆ ಆ ಕಾಂಡದ ಸುತ್ತ ಬೇರೆ ಒಂದು ಬಳ್ಳಿ ಸುತ್ತಿಕೊಂಡಿತ್ತು. ಆದರೆ ವಿಶೇಷವೇನೆಂದರೆ ಹಾಗೆ ಸುತ್ತಿಕೊಂಡ ಬಳ್ಳಿ ಆ 'ಅರಾಯನ್' ಗಿಡದ ಎಲೆಯನ್ನು ಬಣ್ಣ, ಗಾತ್ರ ಮತ್ತು ಆಕಾರದಲ್ಲಿ ನೂರು ಪ್ರತಿಶತ ಹೊಂದುತ್ತಿತ್ತು. ಇದು ಸಸ್ಯಶಾಸ್ತ್ರದಲ್ಲೇ ಒಂದು ದೊಡ್ಡ ಗ್ರಹಿಕೆ ಎಂದೇ ಹೇಳಬಹುದು. ಇಲ್ಲಿ ಅರಾಯನ್ ಗಿಡಕ್ಕೆ ಸುತ್ತಿಕೊಂಡದ್ದು ಬೊಕ್ಯುಲಾ ಟ್ರೈಫೋಲಿಯೇಟ್ ಎನ್ನುವ ವಿಪರೀತ ಬೇರೆಯದೇ ಸಸ್ಯಕುಲಕ್ಕೆ ಸೇರಿದ್ದ ಗಿಡ. ಅದು ಹೇಗೋ ಬೊಕ್ಯುಲಾ ಗಿಡ ತಾನು ಆಶ್ರಯಿಸಿದ್ದ ಅರಾಯನ್ ಗಿಡವನ್ನು ಯಥಾವತ್ತು ನಕಲು ಮಾಡುತ್ತಿತ್ತು. ಇದು ಸಸ್ಯ ಅಧ್ಯಯನದ ದಿಶೆಯನ್ನೇ ಬದಲಿಸಿತು. ಅಲ್ಲಿಯವರೆಗೆ ಈ ರೀತಿ ತಾನು ಆಶ್ರಯಿಸಿದ ಗಿಡವನ್ನೇ ನಕಲು ಮಾಡುವ ಇನ್ನೊಂದು ಬಳ್ಳಿಯ ಪತ್ತೆಯಾದ ವರದಿಯಾಗಿರಲಿಲ್ಲ.

ಈ ವರದಿಯ ನಂತರ ಸಹಜವಾಗಿ ಕುತೂಹಲ ಹೆಚ್ಚಿ ಈ ರೀತಿ ನಕಲು ಮಾಡುವ ಹಲವು ಬಳ್ಳಿಗಳನ್ನು ಪತ್ತೆಹಚ್ಚಲಾಯಿತು. ಆದರೆ ವಿಜ್ಞಾನಿಗಳಿಗೆ ಇಂದಿಗೂ ಇದರ ಕಾರಣ ಮತ್ತು ಹೇಗೆ ಸಾಧ್ಯವಾಯಿತು ಎನ್ನುವುದು ಬಗೆಹರಿದಿಲ್ಲ. ಏಕೆ ಈ ಬಳ್ಳಿಗಳು ಇನ್ನೊಂದು ಗಿಡವನ್ನು, ತಾನೇ ಆಶ್ರಯ ಪಡೆಯುವ ಗಿಡದ ಎಲೆಯನ್ನು ನಕಲು ಮಾಡುತ್ತವೆ ಎಂದು. ಬಹುಷಃ ಇದು ಆಶ್ರಯ ಕೊಟ್ಟ ಗಿಡವನ್ನು ತಿನ್ನದ ಸಸ್ಯಾಹಾರಿ ಪ್ರಾಣಿಗಳು ತನ್ನನ್ನಷ್ಟೇ ತಿನ್ನದಿರಲಿ, ತಿನ್ನುವುದೇ ಆದರೆ ಇಬ್ಬರನ್ನೂ ತಿನ್ನಲಿ ಎಂದಿರಬೇಕು. ಹಾಗೊಂದು ವಾದವನ್ನು ನಂಬುವುದೇ ಆದರೆ, ಒಪ್ಪುವುದೇ ಆದರೆ ಆಗ ಮತ್ತೆ ಏಳುವ ಪ್ರಶ್ನೆ, ಈ ಬಳ್ಳಿಗಳು ಇನ್ನೊಂದು ಆಶ್ರಯಿಸುವ ಗಿಡದ ಎಲೆಯ ಆಕಾರವನ್ನು ಗ್ರಹಿಸಿದ್ದಾದರೂ ಹೇಗೆ ಎಂದು.

ನಮ್ಮ ಊರಿನಲ್ಲಿ ಚಂದರಕಲು ಎನ್ನುವ ಗಿಡ ಎಲ್ಲೆಡೆ ಇದೆ. ಅದಕ್ಕೆ ಸಾಮಾನ್ಯ ಹೆಸರು ಏನೆಂದು ಗೊತ್ತಿಲ್ಲ. ಅದರ ಕಾಂಡಕ್ಕೆ ಗಾಯ ಮಾಡಿದರೆ ಕೆಂಪು ಜೆಲ್ಲಿಯಂತಹ ದ್ರವ ಹೊರಬರುತ್ತದೆ ಮತ್ತು ಆ ಗಾಯವನ್ನು ಸುತ್ತಿಕೊಳ್ಳುತ್ತವೆ. ಇದು ಆ ಸಸ್ಯ ತನಗಾದ ಗಾಯದಿಂದ ಸೋಂಕು ತಗುಲದಿರಲಿ ಎಂದು ಮಾಡಿಕೊಂಡ ವ್ಯವಸ್ಥೆ. ಈ ಗಿಡದ ಸುತ್ತ ಬೆಳೆಯುತ್ತಿದ್ದ ಬಳ್ಳಿಗಳು ಯಾವತ್ತೂ ಆ ಗಿಡವನ್ನು ಆವರಿಸುವುದಿಲ್ಲ, ಬಳ್ಳಿಗಳಿಗೆ ಈ ಗಿಡವೆಂದರೆ ಅಪಥ್ಯ. ಅದಕ್ಕೆ ಕಾರಣವಿದೆ. ಚಂದರಕಲಿನ ಗಿಡದ ಎಲೆಯ ಅಗಲ ಒಂದು ಚಿಕ್ಕ ಬಟ್ಟಲಿನಷ್ಟು, ಈ ಗಿಡದ ಎಲೆಗಳು ಅಷ್ಟು ದಟ್ಟ ಮತ್ತು ದೊಡ್ಡವಿರುತ್ತಿದ್ದರಿಂದ ಅದರ ಕೆಳಗೆ ಸೂರ್ಯನ ರಶ್ಮಿ

ಮುಟ್ಟುವುದಿಲ್ಲ, ಹಾಗಾಗಿ ಅಲ್ಲಿ ಹುಟ್ಟುವ ಯಾವೊಂದು ಗಿಡವೂ ಬದುಕುವುದಿಲ್ಲ, ಆದರೆ ಕೆಲವು ಬಳ್ಳಿಗಳು ಅವುಗಳ ಸುತ್ತ ನೆಲಕ್ಕೆ ಹರಡಿಕೊಳ್ಳುತ್ತವೆ. ಅವು ಇನ್ನೊಂದು ಗಿಡಕ್ಕೆ ಹಬ್ಬುವ ಬಳ್ಳಿಗಳೇ. ಆದರೆ ಚಂದರಕಲಿನ ಗಿಡದ ತಂಟೆಗೆ ಹೋಗುವುದಿಲ್ಲ, ಅದಕ್ಕೆ ಕಾರಣವಿದೆ. ಈ ಚಂದರಕಲಿನ ಗಿಡದ ಕಾಂಡ ಮತ್ತು ಎಲೆಯ ಮೇಲೆ ಅತ್ಯಂತ ನಯವಾದ, ಬಾಗುವ, ನಾವು ಮುಟ್ಟಿದರೆ ಗಾಯವಾಗದಷ್ಟು ಸೂಕ್ಷ್ಮದ ಮುಳ್ಳುಗಳಿರುತ್ತವೆ. ಅವನ್ನು ಮುಳ್ಳು ಎನ್ನುವುದಕ್ಕಿಂತ ರೋಮದ ರೀತಿಯ ರಚನೆ ಎಂದರೆ ಹೆಚ್ಚು ಸಮಂಜಸ. ಅವು ಯಾವುದೇ ಬಳ್ಳಿಯ ಟೆಂಡ್ರಿಲ್‌ಗಳನ್ನು ಅಂಟಿಕೊಳ್ಳಲು ಬಿಡುವುದಿಲ್ಲ, ಒಮ್ಮೆ ಒಂದು ಹಾಗಲಬಳ್ಳಿಯನ್ನು ಚಂದರಕಲಿನ ಗಿಡಕ್ಕೆ ಹಬ್ಬಿಸಲು ಪ್ರಯತ್ನಿಸಿದಾಗ ಅವು ಅಂಟಿಕೊಳ್ಳಲೇ ಇಲ್ಲ, ಹಾಗಲ ಬಳ್ಳಿ ಈ ಗಿಡದ ಮೇಲೆಯೇ ಬೆಳೆಯಲು ಪ್ರಯತ್ನಿಸುತ್ತಿತ್ತು, ಆದರೆ ಸೋತು ಮತ್ತೆ ನೆಲಕ್ಕೆ ಬೀಳುತ್ತಿತ್ತು. ಆದರೆ ಹೆಸರು ಗೊತ್ತಿಲ್ಲದ ಇನ್ನೊಂದು ಕಾಡು ಬಳ್ಳಿ ಮಾತ್ರ ಈ ಚಂದರಕಲಿನ ಗಿಡವನ್ನು ಬಳಸುವುದು ಹೇಗೆಂದು ಕಲಿತಿತ್ತು. ಅದು ಕಾಂಡದ ಶುರುವಿನಿಂದಲೇ ಒಂದೆರಡು ಸುತ್ತು ಹಾಕಿ ಸ್ವಲ್ಪ ಮೇಲಕ್ಕೆ ಬೆಳೆಯುತ್ತಿತ್ತು ಮತ್ತು ಇನ್ನೊಂದಿಷ್ಟು ಸುತ್ತು ಹಾಕುತ್ತಿತ್ತು. ಈ ಒಂದು ಬಳ್ಳಿ ಮಾತ್ರ ಈ ಸ್ಪರ್ಧೆಯಲ್ಲಿ ಗೆದ್ದದ್ದು. ಅದು ಹೇಗೆ ಹೀಗೆಯೇ ಈ ಗಿಡದ ಮೇಲೆ ಹಬ್ಬಬೇಕೆಂದು ಆ ಬಳ್ಳಿ ಕಲಿಯಿತೋ, ಗೊತ್ತಿಲ್ಲ.

ಬಳ್ಳಿಯೆಂದರೆ ನಾಜೂಕು ಎನ್ನುವ ಸಹಜ ಭಾವವಿದೆ. ಬಳ್ಳಿಗೆ ಆಧಾರಕ್ಕೆ ಏನಾದರೂ ಬೇಕು. ಅದು ಇನ್ನೊಂದು ಸಸ್ಯವೇ ಆಗಿರಬೇಕೆಂದೇನೂ ಇಲ್ಲವಲ್ಲ. ಚಪ್ಪರ, ಅದಿಲ್ಲದಿದ್ದರೆ ನೆಲಕ್ಕೆ ಅಥವಾ ಏರಿಗೆ, ಗೋಡೆಗೆ ಹಬ್ಬಿಕೊಂಡುಬಿಡುತ್ತವೆಯಲ್ಲ, ಆದರೆ ಹದವಾದ ಮರದಷ್ಟೇ ದಪ್ಪವಾಗಿ, ಗಟ್ಟಿಯಾಗಿ ಬೆಳೆಯುವ ಬಳ್ಳಿಗಳೂ ಇವೆ. ಕರಾವಳಿ, ಮಲೆನಾಡಿನ ಕಾಡುಗಳಲ್ಲಿ ನೀರ್ಬಳ್ಳಿ ಎಂಬ ಒಂದು ಬಳ್ಳಿಯಿದೆ. ಅದರ ಗಾತ್ರ ಸುಮಾರಾಗಿ ಎರಡು ಕೈ ಸೇರಿಸಿದಷ್ಟು, ಇದು ಮರದಿಂದ ಮರಕ್ಕೆ ಹಬ್ಬುವ ಬಳ್ಳಿ, ನಮ್ಮ ಕಡೆ ಮಂಗಗಳು ಕಾಡಿನಲ್ಲಿ ಓಡಾಡುವಾಗ ಈ ಬಳ್ಳಿಯನ್ನು ಬಳಸಿ ಹೋಗುತ್ತವೆ. ಇವು ಕೆಲವೊಮ್ಮೆ ಕೆಲವು ಗಿಡಗಳ ಸುತ್ತ ಹಬ್ಬಿ ಬೆಳೆಯುತ್ತವೆ. ಅವುಗಳ ಅಪ್ಪುಗೆಯ ಗಟ್ಟಿತನ ಎಷ್ಟಿರುತ್ತದೆಯೆಂದರೆ ಅವು ಹಬ್ಬಿದ ಗಿಡ ಗಾತ್ರದಲ್ಲಿ ಅಗಲವಾಗಲು ಬಿಡುವುದೇ ಇಲ್ಲ, ಇದಕ್ಕೆ ನೀರ್ಬಳ್ಳಿ ಎಂದು ಹೆಸರು ಬರಲು ಕಾರಣ ಅದನ್ನು ಕಡಿದರೆ ಬಾಟಲಿಯನ್ನು ಸೋರಿದಷ್ಟು ನೀರು ಸರಾಗವಾಗಿ ಸುರಿಯುತ್ತದೆ. ನಮ್ಮಲ್ಲಿ ಶಿಕಾರಿಗೆ, ಕಾಡಿಗೆ ಹೋದಾಗ ಬಾಯಾರಿಕೆಯಾದರೆ ಈ ಬಳ್ಳಿಯನ್ನು ಕಡಿದು ಅದರಿಂದ ಬರುವ ನೀರನ್ನು ಕುಡಿಯುವುದಿದೆ. ಈ ರೀತಿ ನೀರು ಕೊಡುವ ಕೆಲವು ಬಳ್ಳಿಗಳು ಪಶ್ಚಿಮಘಟ್ಟದಲ್ಲಿವೆ.

ಕೆಲವು ಬಳ್ಳಿಗಳಿಗೆ ತಾನು ಹಬ್ಬುವ ಮರದ ಉಪಕಾರದ ಅರಿವಿದ್ದಂತಿದೆ. ಅವು ಎಂದೂ ಆಶ್ರಿತ ಮರವನ್ನು ಮೀರಿ ಬೆಳೆಯುವುದಿಲ್ಲ, ಅವುಗಳದು ಸಹಬಾಳ್ವೆ ಎಂದು ಮೇಲ್ನೋಟಕ್ಕೆ ಕಂಡರೂ ಗಿಡ ಮತ್ತು ಬಳ್ಳಿ ಪರಸ್ಪರ ಜೀವನದ ಸ್ಪರ್ಧೆ ನಡೆಸುತ್ತಿರುತ್ತವೆ. ಇನ್ನು ಕೆಲವು ಬಳ್ಳಿಗಳು ಇಡೀ ಕಾಡನ್ನೇ ಸರ್ವನಾಶಮಾಡುವ ಮಟ್ಟಿಗೆ ಬೆಳೆಯುವುದೂ ಇದೆ. ಫ್ಲೋರಿಡಾದ ಉಪನಗರಗಳ ಪಕ್ಕದಲ್ಲಿ ಚಿಕ್ಕ ಚಿಕ್ಕ, ನೂರು ಐನೂರು ಎಕರೆಯ ಕಾಡುಗಳಿವೆ. ನಾನು ಅಲ್ಲಿ ಈಗೆರಡು ವರ್ಷದ ಹಿಂದೆ ಹೋಗಿದ್ದಾಗ ಈ ಕಾಡುಗಳನ್ನು ಒಂದಿಷ್ಟು ಬಲಿತ ಬಳ್ಳಿಗಳು ಸಂಪೂರ್ಣ ವಶಪಡಿಸಿಕೊಂಡದ್ದನ್ನು ಗ್ರಹಿಸಿದ್ದೆ. ಅವು ಹೇಗೆಂದರೆ ಆ ಕಾನನದ ಚಪ್ಪರದಂತೆ ಕಾಣುತ್ತಿದ್ದವು. ಅವು ಬಹುತೇಕ ಮರಗಳ ಸುತ್ತ ಗಟ್ಟಿಯಾಗಿ ಅಂಟಿ ಆವರಿಸಿದ್ದವು. ಅದು ಕುಡ್ಜು ಎನ್ನುವ ಬಳ್ಳಿ. 1876 ರಲ್ಲಿ ಅಮೆರಿಕದಲ್ಲಿ ಸುಂದರ ವಿದೇಶಿ ಬಳ್ಳಿ- ಗಿಡಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿತ್ತು. ಅಲ್ಲಿ ಕುಡ್ಜು ಬಳ್ಳಿ ಬಹಳಷ್ಟು ಜನರನ್ನು ಆಕರ್ಷಿಸಿತ್ತು. ಈ ಬಳ್ಳಿಯನ್ನು ಸುಲಭದಲ್ಲಿ ಮನೆಯೊಳಗೆ ಬೆಳೆಸಬಹುದು ಎಂದು ಸಸಿಗಳು ಯಥೇಚ್ಚ ಮಾರಾಟವಾದವು. ಹೀಗೆ ಈ ಬಳ್ಳಿ ಯುರೋಪಿನಿಂದ ಅಮೆರಿಕ್ಕೆ ವಲಸೆ ಬಂದು ನೆಲೆಸಿತು. ಕ್ರಮೇಣ ಇದು ಮನೆಯ ಪಕ್ಕದ ಕಾಡನ್ನು ಸೇರಿತು. ಇಂದು ಈ ಬಳ್ಳಿ ಅಮೆರಿಕಾದ ಹಲವು ರಾಜ್ಯಗಳ ಕಾಡನ್ನು ಹೊಕ್ಕಿ ಆಗಿದೆ. ಕುಡ್ಜು ಮೂಲತಃ ಆಫ್ರಿಕಾದ ಮಳೆಕಾಡಿನ ಬಳ್ಳಿ. ಅಲ್ಲಿನ ಮಳೆಯಿಂದಾಗಿ ಗಿಡಗಳು ವೇಗವಾಗಿ ಬೆಳೆಯುತ್ತವೆ. ಅಂತೆಯೇ ಕುಡ್ಜು ಕೂಡ ದಿನಕ್ಕೆ ಒಂದು ಫೂಟ್ ಬೆಳೆಯುತ್ತದೆ. ಅಮೆರಿಕಾ ಉತ್ತರಾರ್ಧದಲ್ಲಿರುವುದರಿಂದ ಇಲ್ಲಿ ಕುರುಚಲು ಅಥವಾ ಅಷ್ಟು ವೇಗವಾಗಿ ಬೆಳೆಯದ ಗಿಡಗಳು. ಕುಡ್ಜು ಅಷ್ಟು ವೇಗವಾಗಿ ಬೆಳೆಯುವುದರಿಂದ ಇಂದು ಅಮೆರಿಕಾದ ಕಾಡುಗಳನ್ನೇ ನುಂಗಲಾರಂಭಿಸಿವೆ. ಇನ್ನೊಂದು ವಿಷಯ ಏನು ಗೊತ್ತಾ, ಈ ಕುಡ್ಜು ಬಳ್ಳಿಯ ಬೆಳವಣಿಗೆಯ ವೇಗ ಅಮೆರಿಕಾದಲ್ಲಿ ಪ್ರತೀ ವರ್ಷ ಕ್ಷೀಣಿಸುತ್ತಿದೆ. ಇದಕ್ಕೆ ವಾತಾವರಣದ ಬದಲಾವಣೆ ಕಾರಣವಲ್ಲ, ಏಕೆಂದರೆ ಈ ಬೆಳವಣಿಗೆಯ ವೇಗ ಕ್ಷೀಣಿಸಲು ಶುರುವಾದದ್ದು ಈಗ ಇಪ್ಪತ್ತು ವರ್ಷದಿಂದ. ಅತ್ತ ಅದರ ಮೂಲ ನೆಲದಲ್ಲಿ ಅದರ ವೇಗ ಇನ್ನಷ್ಟು ಹೆಚ್ಚಿದೆ. ಸಸ್ಯಶಾಸ್ತ್ರಜ್ಞರ ಪ್ರಕಾರ ಈ ಕುಡ್ಜು ಎಂಬ ಬಳ್ಳಿ ಅಷ್ಟೇ ವೇಗವಾಗಿ ಬೆಳೆಯುವ ಅವಶ್ಯಕತೆಯಿಲ್ಲ ಎಂದು ಇಂದು ಗ್ರಹಿಸಿದೆಯಂತೆ. ಏಕೆಂದರೆ ಅದರ ಸುತ್ತಲಿನ ಮರಗಳು ಅಷ್ಟು ವೇಗವಾಗಿ ಬೆಳೆಯುತ್ತಿಲ್ಲ.

ತೋಟದಲ್ಲಿ, ಮನೆಯ ಹಿತ್ತಲಲ್ಲಿ, ಟೆರೇಸಿನಲ್ಲಿ ನೀವು ಹಣ್ಣು, ತರಕಾರಿ ಕೊಡುವ ಬಳ್ಳಿಯನ್ನು ಬೆಳೆಯುವುದು ನೋಡಿಯೇ ಇರುತ್ತೀರಿ. ಇವುಗಳಲ್ಲಿ ಬಹುತೇಕ ಬಳ್ಳಿಗಳನ್ನು ಸೂಕ್ಷ್ಮವಾಗಿ ನೋಡಿದಾಗ ನಿಮಗೆ ಇನ್ನೊಂದಿಷ್ಟು ಅಚ್ಚರಿ ಖಂಡಿತ. ಅವುಗಳ ತುದಿಯ ಭಾಗ ದಿನದ ಸಮಯ ಕಳೆದಂತೆ ತಮ್ಮ ದಿಕ್ಕನ್ನು ಬದಲಿಸುವುದು ಗ್ರಹಿಸಿರಬಹುದು. ಅವುಗಳ ತುದಿ ಕೆಲ ಹೊತ್ತಿನಲ್ಲಿ ಗಾಳಿಯಲ್ಲಿ ಒಂದು ಸುತ್ತು ಬಂದಿರುತ್ತವೆ. ಬಳ್ಳಿಯ ತುದಿ ಎಲ್ಲಿ ಆಸರೆ ಪಡೆಯಬೇಕು ಎಂದು ಅನ್ವೇಷಿಸುವ ರೀತಿ ಅದು. ಬಳ್ಳಿಗಳಲ್ಲಿ ಮರಗಳಿಗಿಂತ ಸ್ಪರ್ಶಜ್ಞಾನ ಜಾಸ್ತಿ. ಬಳ್ಳಿಗಳ ತುದಿಗೆ ಪೆಟ್ಟು ಮಾಡಿದರೆ ಅವು ಆ ದಿಕ್ಕಿನಲ್ಲಿ ಬೆಳೆಯುವುದೇ ನಿಲ್ಲಿಸಿಬಿಡುತ್ತವೆ. ಅವು ತಮ್ಮ ಸುತ್ತಲಿನ ಅಪಾಯವನ್ನು ಕೂಡ ಗ್ರಹಿಸಬಲ್ಲವು ಮತ್ತು ನೆನಪಿಟ್ಟುಕೊಳ್ಳಬಲ್ಲವು. ಇನ್ನು ಕೆಲವು ಬಳ್ಳಿಗಳು ಆಸರೆ ಸಿಕ್ಕರೆ ಮರಕ್ಕೆ ಹತ್ತುತ್ತವೆ, ಆಸರೆ ಇಲ್ಲದಿದ್ದರೆ ನೆಲದಲ್ಲಿಯೇ ಬಿದ್ದು ಬೆಳೆದು ಆವರಿಸಿಕೊಳ್ಳುತ್ತವೆ. ಇದಕ್ಕೆ ಉದಾಹರಣೆ ಮಧ್ಯ ಅಮೆರಿಕದ ವಿಂಟರ್ ಕ್ರೀಪರ್ ಬಳ್ಳಿಗಳು. ಇವು ನೆಲದಲ್ಲಿ ಬಿದ್ದ ಭಾಗದಲ್ಲಿ ಇಲ್ಲಿನ ಜಿಂಕೆಗೆ ವಿಷವಾಗುವ ರಾಸಾಯನಿಕವನ್ನು ತನ್ನಲ್ಲಿ ಉತ್ಪಾದಿಸಿಕೊಂಡಿರುತ್ತವೆ. ಆಸರೆ ಸಿಕ್ಕು ಮರ ಹತ್ತಿದ ಬಳ್ಳಿಗಳಲ್ಲಿ ಆ ವಿಷವಿರುವುದಿಲ್ಲ, ಅವು ಮಾತ್ರ ಹೂವು, ಸಿಹಿಯಾದ ಕಾಯಿ ಬಿಡುತ್ತವೆ.

ಒಟ್ಟಾರೆ ಸಸ್ಯಶಾಸ್ತ್ರಜ್ಞರಿಗೆ ಸಸ್ಯಪ್ರಬೇಧದಲ್ಲಿ ಬಳ್ಳಿಗಳೆಂದರೆ ಇಂದಿಗೂ ನಿಗೂಢ, ಬಗೆಹರಿಯದ ಅಚ್ಚರಿ. ಅದರ ಜೊತೆ ಅದೇನೋ ಒಂದು ತಾತ್ಸಾರ. ಹಾಗಾಗಿ ಬಳ್ಳಿಗಳ ಮೇಲಿನ ಅಧ್ಯಯನದ ಪ್ರಗತಿ ತೀರಾ ಕಡಿಮೆ. ಅವುಗಳ ಬುದ್ಧಿವಂತಿಕೆ, ಜೀವ ವಿಶೇಷ, ನೆನಪಿನ ಶಕ್ತಿ, ಬುದ್ಧಿವಂತಿಕೆಯ ಅಧ್ಯಯನ ಇನ್ನಷ್ಟು ಆಗಬೇಕಿದೆ.

ವೈದ್ಯ ವಿದ್ಯಾರ್ಥಿಗಳ ನೋವಿಗೆ ನೀಟ್ ಕಾರಣವೇ?

ಅಭಿಮತ
ಡಾ.ಕರವೀರಪ್ರಭು ಕ್ಯಾಲಕೊಂಡ
vveditoped@gmail.com

ನೀಟ್ ಫಲಿತಾಂಶ ನಿಗದಿತ ಅವಧಿಗಿಂತ ಮೊದಲೇ ಬಂತು. ಕೆಲವರಿಗೆ ಖುಷಿ ತಂತು. ಕೆಲವರ ಜೀವಕ್ಕೆ ಕುತ್ತು ತಂತು. ಫಲಿತಾಂಶದ ಪೋಸ್ಟ್ ಮಾರ್ಟಮ್ ವರದಿ ದೂರದರ್ಶನದವರಿಗೆ ಬ್ರೇಕಿಂಗ್ ನ್ಯೂಸ್ ಆಯ್ತು. ಪತ್ರಿಕೆಗಳಿಗೆ ದಪ್ಪಕ್ಷರದ ಸುದ್ದಿ ಆಯ್ತು. ದೇಶದ ತುಂಬೆಲ್ಲಾ ಸದ್ದುಗದ್ದಲಕ್ಕೆ ನಾಂದಿ ಹಾಡ್ತು. ಫಲಿತಾಂಶದಲ್ಲಿನ ದೋಷಗಳ ಕುರಿತು ಆಕಾಂಕ್ಷಿಗಳ ಅಸಮಾಧಾನ ನಿಗಿ ನಿಗಿ ಕಿಚ್ಚಾಯ್ತು. ಮರುಪರೀಕ್ಷೆಗೆ ಪೋಷಕರು ದನಿಯೆತ್ತಿದರು. ಪ್ರಶ್ನೆ ಪತ್ರಿಕೆ ಸೋರಿಕೆ, ಕೃಪಾಂಕದ ಅಸಮರ್ಪಕ ಹಂಚಿಕೆ, ಪರೀಕ್ಷಾ ನಕಲು, ದೋಷಪೂರಿತ ಪ್ರಶ್ನೆಪತ್ರಿಕೆಗಳು, ಒಎಂಆರ್ ಶೀಟ್‌ಗಳಲ್ಲಿ ಲೋಪಗಳು, ಉತ್ತರಪತ್ರಿಕೆ ಮಾದರಿಗಳು ತಪ್ಪಾಗಿರುವುದು, ಮೌಲ್ಯಮಾಪನ ಸರಿಯಾಗಿ ನಡೆದಿಲ್ಲ... ಸೇರಿದಂತೆ ಆರೋಪಗಳನ್ನು ಮಾಡಿರುವ ಅಭ್ಯರ್ಥಿಗಳು ಮತ್ತು ಪೋಷಕರು ಪರೀಕ್ಷಾ ಅಕ್ರಮಗಳ ಕುರಿತು ಸಿಬಿಐ ಅಥವಾ ಉನ್ನತ ಮಟ್ಟದ ಸಮಗ್ರ ತನಿಖೆಗೆ ಪಟ್ಟು ಹಿಡಿದಿರುವುದು ಕೇಳಿ ಬಂದಿದೆ. ಮರುಪರೀಕ್ಷೆಗೆ ಕೆಲವರು ಕೋರಿದ್ದಾರೆ. ರಾಜಕೀಯ ಪಕ್ಷಗಳು ನೀಟ್ ಪರೀಕ್ಷೆ ಕುರಿತು ಸಾಕಷ್ಟು ಮಾತನಾಡಿವೆ .

ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದ ರಾಜ್ಯಗಳು ಅಪಾರ ಸಾಧನೆಗಳನ್ನು ಮಾಡುತ್ತಾ ಬಂದಿವೆ. ಉನ್ನತ ವೈದ್ಯಕೀಯ ಶಿಕ್ಷಣಕ್ಕಾಗಿ ಅಪಾರ ಹಣವನ್ನು ತಮ್ಮ ಬಜೆಟ್‌ನಲ್ಲಿ ಮೀಸಲಿಡುತ್ತಾ ಬಂದಿವೆ. ದಕ್ಷಿಣ ಭಾರತದ ಜನತೆಯ ತೆರಿಗೆ ಹಣವನ್ನು ದೊಡ್ಡ ಪ್ರಮಾಣದಲ್ಲಿ ಉನ್ನತ ಶಿಕ್ಷಣಕ್ಕೆ ವ್ಯಯ ಮಾಡುತ್ತಿರುವುದರಿಂದ, ಇಲ್ಲಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೇ ಹೆಚ್ಚು ಅವಕಾಶ ಸಿಗಬೇಕು ಎನ್ನುವುದು ದಕ್ಷಿಣ ಭಾರತದ ರಾಜ್ಯಗಳ ಆಗ್ರಹವಾಗಿದೆ . ಆದರೆ, ನೀಟ್ ಪರೀಕ್ಷೆಯಿಂದಾಗಿ ಉತ್ತರ ಭಾರತದ ವಿದ್ಯಾರ್ಥಿಗಳು ಇಲ್ಲಿನ ವಿದ್ಯಾರ್ಥಿಗಳ ಅವಕಾಶವನ್ನು ಕಸಿದುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಈ ಕಾರಣದಿಂದಲೇ, ಉನ್ನತ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ಆಯಾ ರಾಜ್ಯಗಳಿಗೇ ಸೇರಬೇಕು ಎನ್ನುವ ಒತ್ತಾಯವನ್ನು ದಕ್ಷಿಣ ಭಾರತದ ರಾಜ್ಯಗಳು ಮಾಡುತ್ತಲೇ ಬಂದಿವೆ. ಆದರೆ, ಕೇಂದ್ರ ಸರಕಾರ ಈ ಆಗ್ರಹಕ್ಕೆ ಜಾಣಕಿವುಡು ಪ್ರದರ್ಶಿಸುತ್ತಲೇ ಬಂದಿದೆ. ಕೇಂದ್ರ ಸರಕಾರವು ಯುವ ಸಮುದಾಯವನ್ನು ವಂಚಿಸುವ ಮೂಲಕ ಅವರ ಭವಿಷ್ಯದ ಜೊತೆ ಚೆಲ್ಲಾಟ ಆಡುತ್ತಲೇ ಇದೆ.

ಸರಿಸುಮಾರು 4,750 ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಇದು ದೇಶದ ಅತಿದೊಡ್ಡ ಪ್ರವೇಶ ಪರೀಕ್ಷೆ. ಸುಮಾರು 23.33 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಪರೀಕ್ಷೆ ನಡೆಯುವ ಬಗೆಯ ಸುತ್ತ ಇಷ್ಟೊಂದು ದೂರುಗಳು, ಇಷ್ಟೊಂದು ಪ್ರಶ್ನೆಗಳು, ಅಪಸ್ವರಗಳು ಇರಲೇಬಾರದು. ದೊಡ್ಡ ಮಟ್ಟದಲ್ಲಿ ನಡೆಯುವ ಹಾಗೂ ಹೆಚ್ಚು ಪ್ರಾಮುಖ್ಯ ಪಡೆದ ನೀಟ್ ನಂತಹ ಪರೀಕ್ಷೆಗಳು ಅತ್ಯಂತ ಹೆಚ್ಚು ವಿಶ್ವಾಸಾರ್ಹ ಆಗಿರಬೇಕು. ಹೀಗಾಗಬೇಕು ಎಂದಾದರೆ ಪಾರದರ್ಶಕತೆ ಹಾಗೂ ದಕ್ಷತೆ ಇರಬೇಕು.

ನೀಟ್ ಪರೀಕ್ಷೆ ಬರೆದವರಲ್ಲಿ 67 ಅಭ್ಯರ್ಥಿಗಳು 720 /720 ಅಂಕ ಗಳಿಸಿ, ಪ್ರಥಮ ರ‍್ಯಾಂಕ್ ಬಂದಿರುವುದು ಆರೋಪಕ್ಕೆ ಪ್ರಮುಖ ಕಾರಣವಾಗಿದ್ದು, ಇದು ಅಸಾಧ್ಯ ಎನ್ನಲಾಗುತ್ತಿದೆ. 2019 ರಿಂದೀಚಿನ ಮಾಹಿತಿ ಪ್ರಕಾರವೇ ನೀಟ್‌ನಲ್ಲಿ ನಾಲ್ಕಕ್ಕಿಂತ ಹೆಚ್ಚು ಮಂದಿಗೆ ಸಂಪೂರ್ಣ ಅಂಕ, ಅಂದರೆ 720/720 ಅಂಕ ದೊರೆಕಿದ ದಾಖಲೆಯಿಲ್ಲ, 2022 ರಲ್ಲಿ ಸಂಪೂರ್ಣ ಅಂಕ ಪಡೆದವರು ಯಾರೂ ಇರಲಿಲ್ಲ. 2023 ರಲ್ಲಿ ಇಬ್ಬರು ಟಾಪರ್‌ಗಳಿದ್ದರು. ಈ ವರ್ಷ ಸಂಪೂರ್ಣ ಅಂಕ ಪಡೆದವರು 67 ಅಭ್ಯರ್ಥಿಗಳು. ಅದರಲ್ಲಿ 6 ಜನರು ಒಂದೇ ಪರೀಕ್ಷಾ ಕೇಂದ್ರದಲ್ಲಿ ಬರೆದವರು. ಅವರ ರೋಲ್ ನಂಬರ 62 ರಿಂದ 69. ಉಳಿದ ಇಬ್ಬರಲ್ಲಿ ಒಬ್ಬರಿಗೆ 719, ಮತ್ತೊಬ್ಬರಿಗೆ 718. ನೀಟ್ ಪರೀಕ್ಷೆಯಲ್ಲಿ ಅಂಕ ನೀಡುವ ಸೂತ್ರದ ಪ್ರಕಾರ ಇಷ್ಟು ಅಂಕ ಪಡೆಯಲು ಸಾಧ್ಯವೇ ಇಲ್ಲ. ಈ ಟಾಪರ್‌ಗಳು ಪರೀಕ್ಷೆ ಬರೆದ ಕೇಂದ್ರ ಫರೀದಾಬಾದ ಕೇಂದ್ರ. ಇಲ್ಲಿಯೇ ತಪ್ಪಾದ ಪ್ರಶ್ನೆ ಪತ್ರಿಕೆ ವಿತರಿಸಲಾಗಿತ್ತು ಮತ್ತು ಅವರಿಗೆ 45 ನಿಮಿಷಗಳು ವ್ಯರ್ಥವಾಗಿದ್ದವು.

ಪರೀಕ್ಷಾ ಸಮಯ ನಷ್ಟಕ್ಕೆ ಪರಿಹಾರಾತ್ಮಕ ಅಂಕ ಪಡೆದ 1,563 ಅಭ್ಯರ್ಥಿಗಳಲ್ಲಿ, ಈ ಗರಿಷ್ಠ ಅಂಕ ಪಡೆದವರೂ ಇದ್ದಾರೆ. ಇದರಿಂದಾಗಿ ಹಲವು ವಿದ್ಯಾರ್ಥಿಗಳ ಅಂಕಗಳಲ್ಲಿ ಸಾಕಷ್ಟು ವ್ಯತ್ಯಾಸಗಳಾಗಿದ್ದು, ಒಬ್ಬರಿಗೆ 718, ಮತ್ತೊಬ್ಬರಿಗೆ 719 ಅಂಕಗಳು ಬಂದಿವೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್ ಟಿಎ) ಸ್ಪಷ್ಟೀಕರಣ ನೀಡಿದೆ. ಒಂದು ಕೀ ಉತ್ತರದ ಪರಿಷ್ಕೃತ ಅಂಶಗಳ ಲಾಭ ಪಡೆದ 44 ಅಭ್ಯರ್ಥಿಗಳು 720 ಅಂಕಗಳನ್ನು ಪಡೆಯಲು ಸಾಧ್ಯವಾಯಿತು ಎಂದು ಎನ್ ಟಿಎ ನೀಡಿರುವ ಸಬೂಬುಗಳಿಂದ ನಗೆಪಾಟಲಿಗೆ ತುತ್ತಾಗಿದೆ. ಆದರೆ, ಯಾವ ಮಾನದಂಡದಲ್ಲಿ ಈ ಅಂಕಗಳನ್ನು ನೀಡಲಾಗಿದೆ ಎನ್ನುವುದಕ್ಕೆ ಸ್ಪಷ್ಟ ಉತ್ತರವಿಲ್ಲ, ಉತ್ತರ ಭಾರತದಲ್ಲಿ ಮರು ಪರೀಕ್ಷೆಗೆ ಆಗ್ರಹಿಸಿ ವಿದ್ಯಾರ್ಥಿಗಳು ಮತ್ತು ಪೋಷಕರು ಬೀದಿಗಿಳಿದಿದ್ದಾರೆ. ನೀಟ್ ಫಲಿತಾಂಶದ ವಿರುದ್ಧ ಹಲವರು ನ್ಯಾಯಾಲಯದ ಮೆಟ್ಟಿಲುಗಳನ್ನು ತುಳಿದಿದ್ದಾರೆ.

ಮೇ 5 ರಂದು ದೇಶದಾದ್ಯಂತ ನಡೆದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪ ಕೇಳಿ ಬಂದಿತ್ತು. ಇದನ್ನು ಎನ್‌ಟಿಎ ಅಲ್ಲಗಳೆದಿದೆಯಾದರೂ, ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ 13 ಆರೋಪಿಗಳನ್ನು ಬಂಧಿಸಿರುವುದಾಗಿ ಬಿಹಾರ ಪೋಲಿಸರು ತಿಳಿಸಿದ್ದಾರೆ. ಇದರ ಬೆನ್ನಲ್ಲೇ ನೀಟ್ ಪರೀಕ್ಷಾ ಅಕ್ರಮದಲ್ಲಿ ತೊಡಗಿದ್ದ ಗುಂಪನ್ನು ಬೇಧಿಸಿದ್ದ ದೆಹಲಿ ಪೋಲಿಸರು, ಎಂಬಿಬಿಎಸ್‌ನ ಇಬ್ಬರು ವಿದ್ಯಾರ್ಥಿಗಳು ಸೇರಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಿರುವರು. ನೀಟ್ ಪರೀಕ್ಷೆಗೆ ಅಭ್ಯರ್ಥಿಯ ಪರವಾಗಿ ನಕಲಿ ಅಭ್ಯರ್ಥಿಯಿಂದ ಪರೀಕ್ಷೆ ಬರೆಸಲು ಇವರು ತಲಾ 20 - 25 ಲಕ್ಷ ಪಡೆಯುತ್ತಿದ್ದರು ಎಂಬುದು ತಿಳಿಯಿತು. ಈ ರೀತಿ ದೆಹಲಿ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಹಾಜರಿದ್ದ ಇಬ್ಬರು ನಕಲಿ ಅಭ್ಯರ್ಥಿಗಳನ್ನು ಪೋಲಿಸರು ವಶಕ್ಕೆ ಪಡೆದಿದ್ದರು. ಸತ್ಯದ ತಲೆಯ ಮೇಲೆ ಹೊಡೆಯುವಂಥ ಸುಳ್ಳಿನ ಕಂತೆಗಳನ್ನೇ ಬತ್ತಳಿಕೆಯಲ್ಲಿ ಇಟ್ಟುಕೊಂಡಿರುವ ಎನ್‌ಟಿಎ ವಿಶ್ವಾಸ ಕಳೆದುಕೊಂಡಿದೆ .

ರಾಜಸ್ಥಾನದ ಕೇಂದ್ರವೊಂದರಲ್ಲಿ ಉತ್ತರ ಗುರುತಿಸಿರುವ ಉತ್ತರ ಪತ್ರಿಕೆಗಳನ್ನು ನೀಡಿ, ಅನಂತರ ವಾಪಸ್ ಪಡೆಯಲಾಯಿತು ಎನ್ನಲಾಗಿದೆ. ಈ ಕೇಂದ್ರಗಳಲ್ಲಿ 120 ವಿದ್ಯಾರ್ಥಿಗಳಿಗೆ ನಡೆಸಲಾಯಿತೆಂದು ಎನ್‌ಟಿಎ ಸಮಜಾಯಿಸಿ ನೀಡಿದೆಯಾದರೂ ಅದು ಅನುಮಾನಾಸ್ಪದವೆನಿಸಿದೆ .ದೇಶದಾದ್ಯಂತ ವೈದ್ಯಕೀಯ ಕೋರ್ಸ್‌ಗಳಿಗೆ ಬೇಡಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಈ ಹಿನ್ನೆಲೆಯಲ್ಲಿ ನೀಟ್ ತರಬೇತಿ ನೀಡುವ ಅಕಾಡೆಮಿಗಳ ಮಾಫಿಯಾ ಈ ಹಗರಣದ ಹಿಂದೆ ಕಾಣದ ಕೈಯಂತೆ ಕೆಲಸ ಮಾಡುತ್ತಿದೆ ಎನ್ನಲಾಗಿದೆ. ಶಿಕ್ಷಣ ಕ್ಷೇತ್ರವು ನೀಟ್ ಪರೀಕ್ಷೆಯನ್ನೇ ವಾಣಿಜ್ಯೋದ್ಯಮವಾಗಿ ಮಾಡಿಕೊಂಡ ಬಗೆಯೂ ಬೆರಗು ಮೂಡಿಸುವಂಥದ್ದೇ!

ನೂರಾರು ವಿದ್ಯಾರ್ಥಿಗಳಲ್ಲಿ ಖಿನ್ನತೆಯ ಕಾಟ ಶುರುವಾಗಿದೆ. 'ನೀಟ್ ಒತ್ತಡ' ಹೊಸ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿದೆ. ನೀಟ್ ಬರೆಯುವ ಸಲುವಾಗಿ ಸುಮಾರು ಎರಡು ವರ್ಷಗಳ ಕಾಲ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನಿದ್ದೆಗೆಟ್ಟು ಅವಿರತವಾಗಿ ಶ್ರಮಿಸುವ ಹದಿಹರೆಯದ ಮಕ್ಕಳಲ್ಲಿ ಒತ್ತಡ ಎಂದು ಹೊರನೋಟಕ್ಕೆ ಗೊತ್ತಾಗದ, ಆದರೆ ಒತ್ತಡವೇ ಮೂಲವಾದ ಹಲವು ಕಾಯಿಲೆಗಳು ಸದ್ದಿಲ್ಲದೇ ಹೆಜ್ಜೆ ಹಾಕುವವು. ವೈದ್ಯಕೀಯ ಶಿಕ್ಷಣಕ್ಕಾಗಿ ರಾಜ್ಯದಿಂದ ನೂರಾರು ವಿದ್ಯಾರ್ಥಿಗಳು ಉಕ್ರೇನ್‌ಗೆ ತೆರಳುವುದು ಮತ್ತು ಯುದ್ಧ ಕಾರಣದಿಂದ ಅವರು ಬೀದಿಗೆ ಬಿದ್ದಿರುವುದು ಮಾಧ್ಯಮಗಳಲ್ಲಿ ಸುದ್ದಿ ಆಯಿತು. ಭಾರತದಲ್ಲೇ ಸಾಕಷ್ಟು ವೈದ್ಯಕೀಯ ಕಾಲೇಜುಗಳು ಇರುವಾಗ ವೈದ್ಯಕೀಯ ಶಿಕ್ಷಣಕ್ಕಾಗಿ ಉಕ್ರೇನ್‌ನಂತಹ ಸಣ್ಣ ದೇಶಗಳಿಗೆ ಯಾಕೆ ಹೋಗುತ್ತಾರೆ ಎಂದು ಅಮಾಯಕರಂತೆ ನಮ್ಮ ದೇಶದ ಪ್ರಧಾನಿಗಳು ಕಳವಳ ವ್ಯಕ್ತಪಡಿಸಿದ್ದರು.

ಈಗಾಗಲೇ ಪರೀಕ್ಷೆಯ ಪಾವಿತ್ರ್ಯಕ್ಕೆ ಧಕ್ಕೆ ಆಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆಯಲ್ಲದೆ, ಎನ್‌ಟಿಎ ಮತ್ತು ಕೇಂದ್ರ ಸರಕಾರದ ಪ್ರತಿಕ್ರಿಯೆಗೆ ನಿರ್ದೇಶಿಸಿದೆ. ನೀಟ್ ಪರೀಕ್ಷೆಯ ವಿರುದ್ಧ ತಮಿಳುನಾಡು ಮತ್ತು ಕೇರಳ ಸ್ಪಷ್ಟ ಧ್ವನಿಯಲ್ಲಿ ತಮ್ಮ ಆಕ್ಷೇಪಗಳನ್ನು ವ್ಯಕ್ತ ಪಡಿಸುತ್ತ ಬಂದಿದ್ದವು. ಇವರ ಧ್ವನಿಗೆ ಎಲ್ಲ ರಾಜ್ಯಗಳು ಧ್ವನಿ ಗೂಡಿಸಿ ನಿಂತಾಗ ನೀಟ್‌ಗೆ ಪರ್ಯಾಯ ಪರಿಹಾರ ಸಿಕ್ಕೀತು. ಸರಕಾರ ಕಿವುಡು ಜಾಣತನ ತೋರಿಸದೇ ನೀಟ್ ಫಲಿತಾಂಶ ರದ್ದುಗೊಳಿಸಬೇಕು. ಮರುಪರೀಕ್ಷೆ ನಡೆಸಿ, ಆಕಾಂಕ್ಷಿಗಳಿಗೆ ನ್ಯಾಯ ಒದಗಿಸಬೇಕು. ಗುಣಾತ್ಮಕ ವೈದ್ಯಕೀಯ ಶಿಕ್ಷಣ ನಿಯಂತ್ರಿಸುವ ಜವಾಬ್ದಾರಿ ಹೊತ್ತಿರುವ ಎನ್‌ಎಮ್‌ಸಿ ಕುಂಬಕರ್ಣ ನಿದ್ದೆಯಿಂದ ಎದ್ದೇಳಬೇಕು. ಸುಳ್ಳು ಸ್ಪಷ್ಟೀಕರಣ, ಸಮಜಾಯಿಷಿ ನೀಡುವ ಸೋಗಲಾಡಿತನ ಬಿಟ್ಟು ಮೌಲಿಕ ಪರೀಕ್ಷೆ ನಡೆಸುವ ಗುರುತರ ಹೊಣೆಗಾರಿಕೆ ಹೊತ್ತಿರುವ ಎನ್‌ಟಿಎ ತನ್ನ ವೈಫಲ್ಯಗಳನ್ನು ಪರಾಮರ್ಶೆ ಮಾಡಿಕೊಂಡು, ಅವು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಆಗ ವಿದ್ಯಾರ್ಥಿಗಳ ನೇಣಿಗೆ ನೀಟ್ ಗೂಟವಾಗುವುದು ತಪ್ಪೀತು!

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮರೆಯಲಾಗದ ಸಾಧಕ

ದೇಶ ಮತ್ತು ವಿದೇಶಗಳಲ್ಲಿ ಸರೋದ್ ವಾದಕರಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಖ್ಯಾತಿ ಮತ್ತು ಮನ್ನಣೆ ಗಳಿಸಿದ್ದ ಪ್ರಖ್ಯಾತ ಸರೋದ್ ವಾದಕ, ಸಂಗೀತ ನಿರ್ದೇಶಕ. ಡಾ ರಾಜೀವ್ ತಾರಾನಾಥ್ ನಮ್ಮನ್ನಗಲಿದ್ದಾರೆ. ಸರೋದ್ ವಾದಕರಾಗಿ ಕೀರ್ತಿಯ ಉತ್ತುಂಗ ಏರಿದ್ದ ಡಾ ತಾರಾನಾಥ್ ತಮ್ಮ 92ನೇ ವಯಸ್ಸಿನಲ್ಲಿ ಇಹಲೋಕದ ಜಂಜಾಟಗಳಿಗೆ ವಿದಾಯ ಹೇಳಿ ಅನಂತದಲ್ಲಿ ಲೀನವಾಗಿದ್ದಾರೆ. ಒಂದು ಸಾಮಾನ್ಯ ತಂತಿ ವಾದ್ಯಕ್ಕೆ ಜಾಗತಿಕ ಮನ್ನಣೆ ಗಳಿಸಿಕೊಟ್ಟ ಹಿರಿಮೆಗೂ ಸಹ ಅವರು ಪಾತ್ರರಾಗಿದ್ದಾರೆ.

ರಾಯಚೂರು ಜಿಲ್ಲೆಯ ಪಂಡಿತ್ ತಾರಾನಾಥ ಮತ್ತು ಸುಮತಿ ಬಾಯಿ ಇವರ ಪುತ್ರರಾಗಿ 1932 ರ ಅಕ್ಟೋಬರ್ 17 ರಂದು ಜನಿಸಿದ್ದ ಡಾ ರಾಜೀವ್ ತಾರಾನಾಥ, ತಮ್ಮ ಪ್ರಾರಂಭಿಕ ಸಂಗೀತ ಪಾಠಗಳನ್ನು ತಮ್ಮ ತಂದೆಯವರಿಂದ ಪಡೆದ ಬಳಿಕ ಕೇವಲ ಒಂಬತ್ತು ವರ್ಷದವರಿದ್ದಾಗಲೇ ತಮ್ಮ ಪ್ರಥಮ ಸಂಗೀತ ಕಛೇರಿ ನೀಡಿ ದಾಖಲೆ ಬರೆದಿದ್ದರು. ತಮ್ಮ 20 ನೇ ವಯಸ್ಸಿನಲ್ಲಿ ಆಕಾಶವಾಣಿಯಲ್ಲಿ ಸಂಗೀತಗಾರನಾಗಿ ಹಾಡುತ್ತಿದ್ದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಎಂ.ಎ ಮತ್ತು ಪಿಎಚ್.ಡಿ ಪದವಿಗಳನ್ನು ಪಡೆದಿದ್ದ ಡಾ.ರಾಜೀವ್ ತಾರಾನಾಥ, ಕೆಲಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ ಸಹ, ಸಂಗೀತ ಕ್ಷೇತ್ರದ ಮೇಲಿನ ಸೆಳೆತದಿಂದ ತಮ್ಮ ಉನ್ನತ ಹುದ್ದೆ ತ್ಯಜಿಸಿ ಹೆಚ್ಚಿನ ಹೆಚ್ಚಿನ ಸಾಧನೆಗಾಗಿ ಕಲ್ಕತ್ತಾಗೆ ತೆರಳಿ ಅಲ್ಲಿ ಪಂಡಿತ್ ಉಸ್ತಾದ್ ಅಲಿ ಅಕ್ಬರ್ ಖಾನ್ ರವರ ಬಳಿ ಶಿಷ್ಯತ್ವ ಪಡೆದಿದ್ದರು. ನಂತರದ ವರ್ಷಗಳಲ್ಲಿ ಪಂಡಿತ್ ರವಿಶಂಕರ್ ಮತ್ತು ಅನ್ನಪೂರ್ಣ ದೇವಿಯವರ ಬಳಿ ಸಹ ಶಿಷ್ಯತ್ವ ಪಡೆದರು. ಇಡೀ ವಿಶ್ವವೇ ಮೆಚ್ಚಿ ಬೆರಗಾಗುವಂತಹ ಸಂಗೀತ ಕಛೇರಿಗಳನ್ನು ವಿಶ್ವಾದ್ಯಂತ ನಡೆಸಿಕೊಟ್ಟಿದ್ದ ಪಂಡಿತ್ ರಾಜೀವ್ ತಾರಾನಾಥ, ಓವರ್ ಶ್ರೇಷ್ಠ ಹಾಗೂ ಸೃಜನಶೀಲ ಸಂಗೀತ ನಿರ್ದೇಶಕರಾಗಿ ಸಹ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ.

ಕನ್ನಡದ ಚಿತ್ರಗಳಾದ ಸಂಸ್ಕಾರ, ಪಲ್ಲವಿ, ಅನುರೂಪ', ಆಗಂತುಕ ಮುಂತಾದ ಚಿತ್ರಗಳಿಗೆ ಹಾಗೂ ಮಲಯಾಳಂನ ಕಾಂಚನ ಸೀತಾ ಎಂಬ ಚಿತ್ರಕ್ಕೆ ಸಹ ಇವರ ಸಂಗೀತ ನೀಡಿದ್ದಾರೆ. ಪದ್ಮಶ್ರೀ ಪ್ರಶಸ್ತಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ನಡೋಜ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ವಿದ್ವಾನ್ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದ ಪಂಡಿತ್ ರಾಜೀವ್ ನಾಥ್.

ತಮ್ಮ ಅಪೂರ್ವ ಮತ್ತು ಅತ್ಯಮೂಲ್ಯ ಕೊಡುಗೆಗಳ ಮೂಲಕ, ದೇಶದ ಸಂಗೀತ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಇಂತಹ ಮಹಾನ್ ಸಾಧಕನ ಅಗಲಿಕೆ ಇಡೀ ದೇಶಕ್ಕೆ, ಸಂಗೀತ ಲೋಕಕ್ಕೆ ಹಾಗೂ

ಸಂಗೀತ ಪ್ರೇಮಿಗಳಿಗೆ ಅಪಾರವಾದ ನಷ್ಟವನ್ನುಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿ ಕೋರೋಣ.

-ಕೆ.ವಿ.ವಾಸು ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಪ್ರಜ್ವಲ್ ಗೌಡ, ನಿವೇದಿತಾ ಗೌಡ, ಸಪ್ತಮಿ ಗೌಡ, ಪವಿತ್ರ ಗೌಡ ಹೀಗೆ 'ಗೌಡ್ರ' ಹವಾ ಜಾಸ್ತಿಯಾಯ್ತು ಅಲ್ವಾ?
- ಕುಮಾರಣ್ಣ ಮಂತ್ರಿ ಆದ್ರೂ ಯಾರೂ ಮಾತಾಡ್ತಾ ಇಲ್ಲವಲ್ಲ, ಅದೇ ಸಂಕಟ!

● **ಸಚಿನ್ ಕರ್ಬಾರಿ , (ಇಮೇಲ್ ಮೂಲಕ)**
ಭಟ್ರೇ, ವಿಶ್ವವಾಣಿ ಭಟ್ರಿಗೂ, ರಿಪಬ್ಲಿಕ್ ಶೆಟ್ರಿಗೂ ಇರುವ ವ್ಯತ್ಯಾಸವೇನು?
- ಒಬ್ಬರಿಗೆ ಪೆನ್ನೇ ಮಾತು, ಮತ್ತೊಬ್ಬರಿಗೆ ಮಾತೇ ಪೆನ್ನು!

● **ರಂಗ ರಾಮಾನುಜ, ಮೇಲುಕೋಟೆ**
ಭಟ್ರೇ, ಮಣ್ಣಿನಿಂದ ಉಕ್ಕಿನೆಡೆ ಹಾರಿದ ಕುಮಾರಣ್ಣನಿಗೆ ಕುಹಕಿಗಳು ಏನೆಂದು ಕಿಚಾಯಿಸಬಹುದು?
- ತುಕ್ಕುಹಿಡಿದ ಮಗ!

● **ಶೀಲಾ ಒಂಟಿಕೊಪ್ಪಲು, ಮೈಸೂರು**
ಭಟ್ರೇ, ಜೀವನದುದ್ದಕ್ಕೂ ಸ್ವಾವಲಂಬಿಯಾಗಿರುವ ನನಗೆ ಪತಿ ಹಿಂದೆ ಸ್ಕೂಟರಿನಲ್ಲಿ ಹೋಗುವಾಗ ಪರಾವಲಂಬಿತನ ಕುಕ್ಕುತ್ತಲ್ಲ?
- ಗಂಡನನ್ನು ಪರ ವಸ್ತು ಎಂದು ತಿಳಿದಿದ್ದೇ ತಪ್ಪು!

● **ಕಾಶಿ ಪ್ರಾಣೇಶ, ವಿದ್ಯಾಪೀಠ ಸರ್ಕಲ್**
ಭಟ್ರೇ, ಕಾಟೇರ ಕಂಬಿ ಎಣಿಸುತ್ತಿರುವ ಈ ವೇಳೆ ಅಭಿಮಾನಿಗಳಿಗೆ ಆದ ನಷ್ಟ?
- ದರ್ಶನ ಭಾಗ್ಯ!

● **ವಸಂತ ಬಾಳೇಕಾರ್, (ಇಮೇಲ್ ಮೂಲಕ)**
ಭಟ್ರೇ, ದರ್ಶನ್ ಮರ್ಡರ್ ಮಾಡಿಸಿದ್ದು ಗೊತ್ತಾದ ನಂತರವೂ ಅವನ ಅಭಿಮಾನಿಗಳು ಇಷ್ಟಪಡ್ತಾರಲ್ಲ?
- ನಟನಿಗೆ ತಕ್ಕ ಅಭಿಮಾನಿಗಳು!

● **ರಾಜೇಶ ಕಂಬಿ, ಬೆಳಗಾವಿ**
ಭಟ್ರೇ, ಕುಮಾರಸ್ವಾಮಿ ಕೇಂದ್ರದಲ್ಲಿ ಮಂತ್ರಿಯಾದ ನಂತರ ಕಾಂಗ್ರೆಸ್ ನಾಯಕರ ಮುಖ ಬಾಡಿ ಹೋಗಿದೆಯಂತೆ?
- ಎರಡು ಸೀಟು ಗಿಟ್ಟಿಸಿ ಕ್ಯಾಬಿನೆಟ್ ಮಂತ್ರಿ ಹೇಗಾದ್ರು ಎಂಬುದು ಅರ್ಥವಾಗಿಲ್ಲವಂತೆ!

● **ಸಂಜೀವ ನಾರಾಯಣ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ ನಾನು ದರ್ಶನ್ ಅಭಿಮಾನಿ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಅಂತಾನಲ್ಲ?
- ಸದ್ಯದಲ್ಲಿಯೇ ನಿನಗೆ ಶೆಡ್ ದರ್ಶನ ಆಗುತ್ತೆ ಅಂತ ಹೇಳಬೇಕಿತ್ತು!

ನಮ್ಮ ರಾಜ್ಯದಲ್ಲಿ ಒಂದು ಹಸಿರು ಪ್ರವಾಸಿ ಮಾರ್ಗ!

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಒಂದು ಕ್ವಿಜ್ ಪ್ರಶ್ನೆಯಿಂದ ಆರಂಭಿಸೋಣ. ನಮ್ಮ ರಾಜ್ಯದಲ್ಲಿ ಎಷ್ಟು ನ್ಯಾಷನಲ್ ಪಾರ್ಕ್ (ರಾಷ್ಟ್ರೀಯ ಉದ್ಯಾನವನ) ಗಳಿವೆ? ಹೆಚ್ಚಿನವರಿಗೆ ಇದಕ್ಕೆ ಸ್ಪಷ್ಟವಾದ ಉತ್ತರವಿಲ್ಲ; ಅಷ್ಟೇಕೆ, ನನಗೂ ಇದುವರೆಗೆ ಗೊತ್ತಿರಲಿಲ್ಲ. ಇದನ್ನು ಓದುತ್ತಿರುವ ನೀವು ತಕ್ಷಣ ಗೂಗಲ್ ಮಾಡಿ ನೋಡುವ ಸಾಧ್ಯತೆ ಇದೆ. ಅಚ್ಚರಿ ಎಂದರೆ, ಅಂತರ್ಜಾಲದಲ್ಲಿ ಹುಡುಕಿದರೂ, ತಕ್ಷಣ ಈ ಕ್ವಿಜ್ ಪ್ರಶ್ನೆಗೆ ನಿಖರವಾದ ಉತ್ತರ ನೀಡುವ ಸಾಧ್ಯತೆ ಕಡಿಮೆ! ಏಕೆಂದರೆ, ಒಂದೊಂದು ವೆಬ್‌ಸೈಟ್‌ನಲ್ಲಿ ಒಂದೊಂದು ರೀತಿಯ ಮಾಹಿತಿ ದೊರಕಬಹುದು; ಜತೆಗೆ, ಹುಲಿಯೋಜನೆಯ ವ್ಯಾಪ್ತಿಯ ಪ್ರದೇಶಗಳು, ಅಭಯಾರಣ್ಯಗಳು ಮತ್ತು ಇತರ ರಕ್ಷಿತ ಅರಣ್ಯಗಳು ಒಂದಕ್ಕೊಂದು ಸಮಾನಾಂತರವಾಗಿ ಅಡಕಗೊಂಡಿರುವುದರಿಂದ, ನಮ್ಮ ರಾಜ್ಯದಲ್ಲಿರುವ ನ್ಯಾಷನಲ್ ಪಾರ್ಕ್‌ಗಳ ಒಟ್ಟೂ ಸ್ವರೂಪವನ್ನು ಚಿತ್ರಿಸಿಕೊಳ್ಳಲು ಕೆಲ ಕಾಲ ಬೇಕಾಗುವುದಂತೂ ನಿಜ.

ನಮ್ಮ ರಾಜ್ಯದ ಅರಣ್ಯ ಇಲಾಖೆಯ ವೆಬ್‌ಸೈಟ್ ಮಾಹಿತಿ ಪ್ರಕಾರ ಐದು ನ್ಯಾಷನಲ್ ಪಾರ್ಕ್‌ಗಳಿವೆ: ನಾಗರಹೊಳೆ, ಬಂಡಿಪುರ, ಬನ್ನೇರುಘಟ್ಟ, ಅಣಶಿ ಮತ್ತು ಕುದುರೆಮುಖ ನ್ಯಾಷನಲ್ ಪಾರ್ಕ್‌ಗಳು. ಇವುಗಳ ಜತೆಯಲ್ಲೇ ಹುಲಿ ಯೋಜನೆಯ ವ್ಯಾಪ್ತಿಯ ಹಲವು ಪ್ರದೇಶಗಳಿವೆ; ರಕ್ಷಿತ ಪ್ರದೇಶಗಳಿವೆ (ರಾಣೆಬೆನ್ನೂರು ಕೃಷ್ಣಮೃಗ ರಕ್ಷಿತಾರಣ್ಯ, ದರೋಜಿ ಕರಡಿ ಧಾಮ ಇತ್ಯಾದಿ), ನಿಸರ್ಗಧಾಮಗಳಿವೆ, ಅಭಯಾರಣ್ಯಗಳಿವೆ, ಚಿಟ್ಟೆ ಪಾರ್ಕ್‌ಗಳಿವೆ, ಕಾಂಡ್ಲಾವನಗಳಿವೆ.. ಇನ್ನೊಂದು ವಿಚಾರವೆಂದರೆ, ನಮ್ಮ ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿಲೆ, ನ್ಯಾಷನಲ್ ಪಾರ್ಕ್‌ಗಳ ಮಾಹಿತಿಯು ಸಮಗ್ರವಾಗಿಲ್ಲ. (ಉದಾ: ತಂಗಲು ತಾಣ, ರೂಟ್‌ಮ್ಯಾಪ್ ಇತ್ಯಾದಿ.) ನಮ್ಮ ರಾಜ್ಯದ ಪ್ರಕೃತಿ ಸಂಪತ್ತು, ವೈವಿಧ್ಯ, ಐತಿಹಾಸಿಕ ಸಿರಿವಂತಿಕೆ, ವಾಸ್ತು ಕಲಾಕೃತಿಗಳು, ಪುರಾತನ ಶಿಲಾ ತಾಣಗಳು ಮೊದಲಾದ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡರೆ, ನ್ಯಾಷನಲ್ ಪಾರ್ಕ್ ಮತ್ತು ಇವೆಲ್ಲವುಗಳನ್ನೂ ಒಳಗೊಂಡು, ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಬಹುದು ಮತ್ತು ಇದರಿಂದಾಗಿ, ಸಾವಿರಾರು ಜನರಿಗೆ ಉದ್ಯೋಗವೂ ದೊರಕುವುದು ಸಹಜ. ಇದನ್ನು ಯಾವ ರೀತಿಯಲ್ಲಿ ಮಾಡಬಹುದು?

ನ್ಯಾಷನಲ್ ಪಾರ್ಕ್ ವಿಚಾರ ಬಂದರೆ, ಅಮೆರಿಕ (ಯುಎಸ್) ನೆನಪಿಗೆ ಬರುತ್ತದೆ. ಅಮೆರಿಕದಲ್ಲಿ ಇಂದು 63 ನ್ಯಾಷನಲ್ ಪಾರ್ಕ್‌ಗಳಿವೆ; ನ್ಯಾಷನಲ್ ಪಾರ್ಕ್‌ಗಳ ಜತೆಯಲ್ಲೇ ಹಲವು ಐತಿಹಾಸಿಕ ತಾಣಗಳು, ರಿಕ್ರಿಯೇಷನಲ್ ಪ್ರದೇಶಗಳು, ಗಣ್ಯರ ಜನ್ಮಸ್ಥಳಗಳು ಮೊದಲಾದವುಗಳನ್ನು ಅಡಕಗೊಳಿಸಿ, ಇವುಗಳನ್ನು ನೋಡುವಂತೆ ಅಲ್ಲಿನ ಜನರನ್ನು ಪ್ರೋತ್ಸಾಹಿಸುತ್ತಿದ್ದಾರೆ; ಇಂತಹ ತಾಣಗಳ ಒಟ್ಟು ಸಂಖ್ಯೆ ಸುಮಾರು 429. ಸ್ಥಳೀಯರು ಮತ್ತು ವಿದೇಶಿ ಪ್ರವಾಸಿಗಳು ಈ ನ್ಯಾಷನಲ್ ಪಾರ್ಕ್ ಮತ್ತು ಇತರ ತಾಣಗಳನ್ನು ನೋಡುವುದರ ಮೂಲಕ ಅಲ್ಲಿನ ಆರ್ಥಿಕತೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ; ನ್ಯಾಷನಲ್ ಪಾರ್ಕ್ ಮತ್ತು ಇತರ ಪ್ರಮುಖ ತಾಣಗಳನ್ನು, ದಾರಿಗಳನ್ನು, ಪ್ರವಾಸಿ ರಸ್ತೆಗಳನ್ನು ನಿರ್ವಹಿಸಲೆಂದೇ ಅಲ್ಲೊಂದು ಪ್ರಮುಖ ಇಲಾಖೆಯಿದೆ! ಕೇಂದ್ರದ (ಫೆಡರಲ್) ನಿಯಂತ್ರಣದಲ್ಲಿರುವ, 'ನ್ಯಾಷನಲ್ ಪಾರ್ಕ್ ಸರ್ವಿಸ್' ಎಂಬ ಇಲಾಖೆಯು ಸುಮಾರು 20,000 ಜನರಿಗೆ ಉದ್ಯೋಗ ಒದಗಿಸಿದೆ ಮತ್ತು ಎರಡು ಲಕ್ಷಕ್ಕೂ ಅಧಿಕ ಸ್ವಯಂಸೇವಕರ ಸೇವೆಯನ್ನು ಪಡೆಯುತ್ತಿದೆ! ಸರಳವಾಗಿ ಹೇಳಬೇಕೆಂದರೆ, ಅಮೆರಿಕದಲ್ಲಿ ನ್ಯಾಷನಲ್ ಪಾರ್ಕ್ ವ್ಯವಸ್ಥೆಯು ಒಂದು ದೊಡ್ಡ ಬಿಸಿನೆಸ್; ಅದರಿಂದ ಸರಕಾರಕ್ಕೂ ಆದಾಯವಿದೆ, ಇತರ ರೀತಿಯಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ಅಪಾರ ಪ್ರೋತ್ಸಾಹ ದೊರಕುತ್ತಿದೆ. ಇಂತಹದೊಂದು ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಮತ್ತು ದೇಶದಲ್ಲಿ ಜಾರಿಗೆ ತರಬಹುದೇ ಎಂಬ ಚಿಂತನೆಯನ್ನೊಳಗೊಂಡಂತೆ, ಅಲ್ಲಿನ ಕೆಲವು ವ್ಯವಸ್ಥೆಗಳ ವಿವರಗಳನ್ನು, ಕಲ್ಪಿಸಿರುವ ಸೌಲಭ್ಯಗಳನ್ನು, ಅಂಕಿ ಅಂಶಗಳನ್ನು ನೋಡೋಣ.

ನಮಗೆಲ್ಲಾ ಪಾಸ್‌ಪೋರ್ಟ್ ಗೊತ್ತು. ಪಾಸ್‌ಪೋರ್ಟ್‌ಗೆ ಬಹು ಮೌಲ್ಯವಿದೆ. ಅದನ್ನು ಎಲ್ಲರೂ ಜೋಪಾನವಾಗಿಟ್ಟುಕೊಳ್ಳುವುದು ಸಹಜ. ಪಾಸ್‌ಪೋರ್ಟ್ ಹೊಂದುವುದೇ ಒಂದು ಹೆಮ್ಮೆ ಎಂದು ಹಲವರು ಇಂದಿಗೂ ತಿಳಿದಿದ್ದಾರೆ. ಅಮೆರಿಕದಲ್ಲಿ, ನ್ಯಾಷನಲ್ ಪಾರ್ಕ್‌ಗಳಿಗೆಂದೇ ಒಂದು 'ಪಾಸ್‌ಪೋರ್ಟ್' ಲಭ್ಯ! ಆಕರ್ಷಕ ಬಣ್ಣ, ಆಕಾರ, ವಿನ್ಯಾಸ ಹೊಂದಿರುವ ಇದರಲ್ಲಿ, ನ್ಯಾಷನಲ್ ಪಾರ್ಕ್ ವಿವರಗಳು, ಸ್ಟಾಂಪಿಂಗ್ ಮಾಡುವ ಅವಕಾಶ, ಫೋಟೋಗಳು, ವಿವಿಧ ಪ್ರಾಕೃತಿಕ ಮತ್ತು ಐತಿಹಾಸಿಕ ತಾಣಗಳ ವಿವರಗಳು, 'ಬ್ಲ್ಯೂರಿಜ್ ಪಾರ್ಕ್‌ವೇ' ಅಂತಹ ಸುಂದರ ರಸ್ತೆಗಳ ವಿವರ, ನೂರಾರು ಮೈಲಿ ಉದ್ದದ ಚಾರಣ (ಹೈಕಿಂಗ್) ದಾರಿಯ ವಿವರಗಳನ್ನು ಮುದ್ರಿಸಲಾಗಿದೆ; ಜತೆಯಲ್ಲಿ ಆಕರ್ಷಕ ಮ್ಯಾಪ್! ಈ 'ಪಾಸ್‌ಪೋರ್ಟ್ ಟು ಯುವರ್ ನ್ಯಾಷನಲ್ ಪಾರ್ಕ್'ನ್ನು ಹೊಂದಿದ ಮಕ್ಕಳು, ಯುವಕರು, ಹಿರಿಯರು, ಹೆಮ್ಮೆಯಿಂದ ಅದನ್ನು ಕೈಯಲ್ಲಿ ಹಿಡಿದು, ಒಂದು ತಾಣದಿಂದ ಇನ್ನೊಂದು ತಾಣಕ್ಕೆ ಪಯಣಿಸುತ್ತಾ, ಪ್ರತಿ ಜಾಗದಲ್ಲಿ ಸೀಲ್ ಮಾಡಿಸಿಕೊಂಡು, ಮುಂದಿನ ತಾಣದತ್ತ ಧಾವಿಸುವುದನ್ನು ಕಾಣಬಹುದು. ಇಂತಹ ದೊಂದು ವರ್ಣಮಯ 'ಪಾಸ್‌ಪೋರ್ಟ್'ನ್ನು ನೀಡುವ ಮೂಲಕ, ಅಲ್ಲಿನ ಸರಕಾರವು, ಜನರಲ್ಲಿ ನ್ಯಾಷನಲ್ ಪಾರ್ಕ್ ಸುತ್ತುವ ಹವ್ಯಾಸವನ್ನು ಬೆಳೆಸಿದೆ.

ಜಗತ್ತಿನ ಮೊತ್ತಮೊದಲ ನ್ಯಾಷನಲ್ ಪಾರ್ಕ್‌ನ್ನು ರೂಪಿಸಿದ್ದು ನಾವೇ ಎಂದು ಅಮೆರಿಕದವರು ಹೇಳಿಕೊಳ್ಳುತ್ತಿದ್ದಾರೆ. ಅದೇ ಯೆಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್. 1872ರಲ್ಲಿ ಅಲ್ಲಿ ಘೋಷಣೆಗೊಂಡ ಯೆಲ್ಲೋಸ್ಟೋನ್ ನ್ಯಾಷನಲ್ ಪಾರ್ಕ್, ಇಂದಿಗೂ ಒಂದು ಪ್ರಮುಖ ಪ್ರವಾಸಿ ಆಕರ್ಷಣೆ. 2022ರಲ್ಲಿ ಈ ನ್ಯಾಷನಲ್ ಪಾರ್ಕ್‌ಗೆ 32 ಲಕ್ಷ ಜನ ಭೇಟಿ ನೀಡಿದ್ದರು. ಅಲ್ಲಿನ ಇನ್ನೊಂದು ಪ್ರಮುಖ ನ್ಯಾಷನಲ್ ಪಾರ್ಕ್ ಎನಿಸಿದ ಸ್ಮೋಕಿ ಮೌಂಟೆನ್ ನ್ಯಾಷನಲ್ ಪಾರ್ಕ್‌ಗೆ 2022ರಲ್ಲಿ 1 ಕೋಟಿ 29 ಲಕ್ಷ ಜನರು ಭೇಟಿ ನೀಡಿದ್ದರು! ಕೊಲರೋಡೋ ರಾಜ್ಯದ ನಾಲ್ಕು ನ್ಯಾಷನಲ್ ಪಾರ್ಕ್‌ಗಳಿಗೆ ವಾರ್ಷಿಕ ಒಂದು ಕೋಟಿಗೂ ಅಧಿಕ ಜನರು ಭೇಟಿ ನೀಡುತ್ತಿದ್ದಾರೆ. ಸಹಜವಾಗಿಯೇ, ನ್ಯಾಷನಲ್ ಪಾರ್ಕ್ ಸುತ್ತ ಮುತ್ತ ಇರುವ ವಸತಿ ಗೃಹ, ರೆಸ್ಟೋರೆಂಟ್, ಅಂಗಡಿಗಳಿಗೆ ವ್ಯಾಪಾರವೂ ಆಗಿ, ಹಲವರಿಗೆ ಉದ್ಯೋಗವೂ ದೊರಕಿದಂತಾಗುತ್ತದೆ.

ಅಮೆರಿಕದ ಸ್ಥಳೀಯರು ಮತ್ತು ಪ್ರವಾಸಿಗರು ಹಲವು ದಿನ ಪಯಣ ಮಾಡಿ, ನಿಸರ್ಗಸೌಂದರ್ಯವನ್ನು ಆಸ್ವಾದಿಸಲು ಅನುಕೂಲವಾಗುವಂತೆ ರೂಪಿಸಲಾಗಿರುವ 'ಬ್ಲ್ಯೂ ರಿಜ್ ಪಾರ್ಕ್‌ವೇ' ವಿಶಿಷ್ಟ. ಬೆಟ್ಟ ಗುಡ್ಡಗಳ ನಡುವೆ ರಸ್ತೆಯ ಮೂಲಕ ಪ್ರವಾಸ ಮಾಡುವಂತೆ ವಿನ್ಯಾಸಗೊಳಿಸಲಾಗಿರುವ ಇಲ್ಲಿನ ರಸ್ತೆಗಳಲ್ಲಿ ಗರಿಷ್ಠ ವೇಗ 45 ಮೈಲು. ಅಂದರೆ, ಅಮೆರಿಕದ ಇತರ ಹೆದ್ದಾರಿಗಳಂತೆ ಇಲ್ಲಿ 70 ಮೈಲು ವೇಗದಲ್ಲಿ ಚಲಿಸುವಂತಿಲ್ಲ. ಈ 'ನ್ಯಾಷನಲ್ ಪಾರ್ಕ್‌ವೇ'ಯನ್ನು ಪ್ರಾಕೃತಿಕ ಸೌಂದರ್ಯವನ್ನು ಸವಿಯಲೆಂದೇ ವಿನ್ಯಾಸಗೊಳಿಸಲಾಗಿದ್ದು, ಇದು ಅಲ್ಲಿನ ವರ್ಜೀನಿಯಾ ಮತ್ತು ಉತ್ತರ ಕ್ಯಾರೊಲಿನಾ ರಾಜ್ಯಗಳಲ್ಲಿ ಸಾಗಿದೆ. ಈ ಪಾರ್ಕ್‌ವೇ ಉದ್ದ 469 ಮೈಲಿ (755 ಕಿ.ಮೀ.) ಬಹುಮಟ್ಟಿಗೆ ಅಲ್ಲಿನ ಬ್ಲ್ಯೂ ರಿಜ್ ಪರ್ವತ ಶ್ರೇಣಿಯ ಹಾದಿಯಲ್ಲೇ ಸಾಗುವ ಈ ರಸ್ತೆಯು, ಇತರ ಕೆಲವು ನ್ಯಾಷನಲ್ ಪಾರ್ಕ್‌ಗಳಿಗೆ ಸಂಪರ್ಕವನ್ನು ನೀಡುತ್ತದೆ. 26 ಸುರಂಗ, 1689 ಸೇತುವೆ ಈ ರಸ್ತೆಯ ಆಕರ್ಷಣೆ. ಅಮೆರಿಕದ ನ್ಯಾಷನಲ್ ಪಾರ್ಕ್ ವ್ಯವಸ್ಥೆಯಲ್ಲಿ, ಅತಿ ಹೆಚ್ಚು ಜನರು ಭೇಟಿ ನೀಡುವ ರಸ್ತೆ ಇದು ಎಂಬ ಪ್ರಚಾರವೂ ಇದೆ. ಕಾಡು, ಜಲಪಾತ, ಬೆಟ್ಟ ಗುಡ್ಡಗಳ ನಡುವೆ ಸಾಗುವ ಈ ರಸ್ತೆಯಲ್ಲಿ ಚಲಿಸಲು ವಾಹನಗಳ ಶುಲ್ಕ ನೀಡಬೇಕಿಲ್ಲ. ಚಳಿಗಾಲ ಕಳೆದ ನಂತರ, ಬಿಸಿಲು ಬೀಳುವ ಸಮಯದಲ್ಲಿ ನಡೆಯುವುದು, ಹೈಕಿಂಗ್ ಮಾಡುವುದು, ಸ್ಕೈಯಿಂಗ್ ಮಾಡುವುದು ಅಮೆರಿಕದವರ ನೆಚ್ಚಿನ ಹವ್ಯಾಸ; ಅದಕ್ಕಾಗಿ ಇಲ್ಲಿ ಹಲವು ಅನುಕೂಲಗಳನ್ನು ಮಾಡಿಕೊಡಲಾಗಿದೆ. ನಡುನಡುವೆ ಹಲವು ಕ್ಯಾಂಪಿಂಗ್ ತಾಣಗಳಿವೆ. ಬ್ಲೂ ರಿಜ್ ಪಾರ್ಕ್‌ವೇಯಲ್ಲಿ ಕಾರ್ ಮೂಲಕ ಪ್ರವಾಸ ಮಾಡುವವರಿಗೆ, ಎಲ್ಲೆಲ್ಲಿ ಯಾವ ಯಾವ ಆಕರ್ಷಕ ತಾಣಗಳನ್ನು ನೋಡಬಹುದು ಎಂಬ ಮಾಹಿತಿಯನ್ನು ನೀಡಿ, ಆಗಾಗ ವಾಹನ ನಿಲ್ಲಿಸಿ, ನಡೆಯಲು ಸೂಚಿಸಲಾಗಿದೆ. ಕೆಲವು ಕಡೆ ಕುದುರೆ ಸವಾರಿ ಮಾಡಬಹುದು! ಇನ್ನು ಕೆಲವು ಕಡೆ ಮೀನು ಹಿಡಿಯಬಹುದು! ಸ್ಥಳೀಯ ಇಂಡಿಯನ್ ಬುಡಕಟ್ಟು ಜನಾಂಗವಾದ ಅಪ್ಪಲಾಚಿಯನ್ ಅವರ ಜನಪದ ಕಲೆಯನ್ನು ಪ್ರದರ್ಶಿಸುವ ಕೇಂದ್ರವೂ ಇದೆ.

ಇದೊಂದು ರಸ್ತೆಯ ಕುರಿತು ಇಷ್ಟು ವಿವರವಾಗಿ ಏಕೆ ಬರೆದೆ ಎಂದು ನಿಮಗೆ ಕುತೂಹಲವಾಗಿರಬಹುದು. ಇಂತಹದೊಂದು ಪ್ರಯತ್ನವನ್ನು ನಮ್ಮ ರಾಜ್ಯದಲ್ಲಿ ಮಾಡಬಹುದು ಮತ್ತು ಅದೇಕೆ ಮಾಡಬಾರದು ಎಂಬ ಯೋಚನೆಯಿಂದ ಈ ಮಾಹಿತಿ ಹಂಚಿಕೊಂಡೆ. ನಮ್ಮ ದೇಶದ ಎಲ್ಲಾ ನ್ಯಾಷನಲ್ ಪಾಕ್‌ಗಳನ್ನು ನೋಡುವಂತೆ ನಮ್ಮ ದೇಶದ ನಿವಾಸಿಗಳನ್ನು ಹುರಿದುಂಬಿಸುವ ಕೆಲಸವಾಗಬೇಕಾಗಿದೆ; ಅದು ಸದ್ಯಕ್ಕೆ ಕಷ್ಟ – ಏಕೆಂದರೆ, ಅದೊಂದು ದೊಡ್ಡ ಕೆಲಸ, ಹಲವು ರಾಜ್ಯಗಳ ಸಹಕಾರ ಬೇಕು ಮತ್ತು, ನ್ಯಾಷನಲ್ ಪಾರ್ಕ್ ಮೇಲುಸ್ತುವಾರಿಗೆ, ಬೇರೊಂದೇ ನಿಗಮ ಬೇಕಾಗುತ್ತದೆ (ರಾಷ್ಟ್ರೀಯ ಹೆದ್ದಾರಿ ನಿಗಮದ ರೀತಿ). ಇದಕ್ಕೆ ಪೂರಕವಾಗಿ, ನಮ್ಮ ರಾಜ್ಯದ ನ್ಯಾಷನಲ್ ಪಾರ್ಕ್ ಮತ್ತು ಇತರ ತಾಣಗಳನ್ನು ಒಟ್ಟಾಗಿ

ನೋಡುವಂತೆ ಜನರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡಬಹುದು ಎಂದೆನಿಸುತ್ತದೆ. ಇದಕ್ಕೆ ಬೇಕಾದ ಪ್ರಾಕೃತಿಕ ಸೌಂದರ್ಯ ನಮ್ಮಲ್ಲಿದೆ, ಮೂಲಭೂತ ಸೌಕರ್ಯ (ವಸತಿ ಗೃಹ, ರೆಸ್ಟೋರೆಂಟ್ ಇತ್ಯಾದಿ) ಈಗಾಗಲೇ ಅಲ್ಲಲ್ಲಿ ಇವೆ. ನ್ಯಾಷನಲ್ ಪಾರ್ಕ್, ಐತಿಹಾಸಿಕ ತಾಣ ಮತ್ತು ಇತರ ಪ್ರವಾಸಿ ಸ್ಥಳಗಳನ್ನು ಬೆಸೆಯುವ, ಒಂದು ವೈಜ್ಞಾನಿಕ ರೂಟ್ ಮ್ಯಾಪ್‌ನ್ನು ಜನರಿಗೆ ನೀಡುವ ಕೆಲಸ ಆಗಬೇಕಿದೆ. ನಮ್ಮ ಸರಕಾರದ ಪ್ರವಾಸೋದ್ಯಮ ಮತ್ತು ಅರಣ್ಯ ಇಲಾಖೆಗಳು ಇದನ್ನು ಖಂಡಿತ ಮಾಡಬಹುದು.

ಸಾಕಷ್ಟು ದಟ್ಟ ಕಾಡಿನಿಂದ ಕೂಡಿದ, ಬೆಟ್ಟ ಗುಡ್ಡಗಳಿಂದ ಆವೃತವಾಗಿರುವ, ಪ್ರಾಕೃತಿಕ ದೃಶ್ಯಗಳನ್ನು ಹೊಂದಿರುವ ಪಶ್ಚಿಮ ಘಟ್ಟಗಳು, ಈ ನಿಟ್ಟಿನಲ್ಲಿ ನಮ್ಮ ರಾಜ್ಯದ ಅಪೂರ್ವ ಸಂಪತ್ತು. ಈಚಿನ ಒಂದು ದಶಕಗಳಲ್ಲಿ ನಮ್ಮ ರಾಜ್ಯದ ಹಲವು ಉತ್ಸಾಹಿಗಳು ಸಾಕಷ್ಟು ಪ್ರವಾಸ ಹೋಗುತ್ತಿದ್ದಾರೆ; ವಾರಾಂತ್ಯ ಬಂದರೆ ಸಾಕು, ಬೆಂಗಳೂರಿನಿಂದ ನೂರಾರು ಕಾರುಗಳು ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಹೋಂಸ್ಟೇಗಳಿಗೆ ಸಾಗುವುದನ್ನು ಕಾಣಬಹುದು ಮತ್ತು ಅದು ಇಂದು ಸಹಜ ಚಟುವಟಿಕೆಯಾಗಿದೆ. ಜನರ ಈ ಪ್ರವಾಸೋತ್ಸಾಹವನ್ನು, ಪಶ್ಚಿಮ ಘಟ್ಟಗಳ ವೀಕ್ಷಣೆಗೆ ಸದುಪಯೋಗ ಪಡಿಸಿಕೊಳ್ಳುವ ಕೆಲಸವನ್ನು ನಮ್ಮ ರಾಜ್ಯದಲ್ಲಿ ಮಾಡುವ ಅವಕಾಶವಿದೆ. ಮಡಿಕೇರಿಯಿಂದಾರಂಭಿಸಿ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳ ಮೂಲಕ ಸಾಗುವ ರಸ್ತೆಗಳನ್ನು ಉಪಯೋಗಿಸಿಕೊಂಡು, ಒಂದು ಪ್ರವಾಸಿ ಮ್ಯಾಪ್‌ನ್ನು ರೂಪಿಸಿದರೆ, ಅಂತಹದೊಂದು ವಿಶಿಷ್ಟ ಹವ್ಯಾಸಕ್ಕೆ ಸಹಕರಿಸಬಹುದು. ಇಂದು ನಮ್ಮ ರಾಜ್ಯದ ರಸ್ತೆಗಳು ಸಾಕಷ್ಟು ಉತ್ತಮವಾಗಿವೆ; ಯಾವ ರಸ್ತೆಯಲ್ಲಿ ಸಾಗಿದರೆ, ಯಾವ ಪ್ರವಾಸಿ ತಾಣ ದೊರಕುತ್ತದೆ ಎಂಬ ರೂಟ್ ಮ್ಯಾಪ್‌ನ್ನು ರಾಜ್ಯ ಸರಕಾರದ ಸಂಬಂಧಪಟ್ಟ ಇಲಾಖೆಗಳು ಮಾಡಿಕೊಟ್ಟರೆ, ಖಂಡಿತಾ ಅನುಕೂಲವಾಗುತ್ತದೆ. ಜತೆಗೆ, ಕೆಲವು ಕಡೆ, ಮೂಲಭೂತ ಸೌಕರ್ಯಗಳನ್ನು ಸಹ ಮಾಡಿಕೊಡಬೇಕಾದೀತು. ಅರಣ್ಯ ಇಲಾಖೆ ಮತ್ತು ಪ್ರವಾ ಸೋದ್ಯಮ ಇಲಾಖೆಗಳ ಜಂಟಿ ಜವಾಬ್ದಾರಿ ಇದು.

ಈ ಉದ್ದೇಶಿತ ರಸ್ತೆ ಪ್ರವಾಸವನ್ನು ಕೈಗೊಳ್ಳುವವರು, ನಮ್ಮ ರಾಜ್ಯದ ನ್ಯಾಷನಲ್ ಪಾರ್ಕ್‌ಗಳನ್ನು ಸಹ ನೋಡಬಹುದು. ಆರಂಭದಲ್ಲಿ ಬನ್ನೇರುಘಟ್ಟ ನ್ಯಾಷನಲ್ ಪಾಕ್‌ನ್ನೂ ಸೇರಿಸಿ, ನಾಗರಹೊಳೆ, ಬಂಡಿಪುರ, ಕುದುರೆಮುಖ, ಅಣಶಿ ನ್ಯಾಷನಲ್ ಪಾರ್ಕ್‌ಗಳು ದಾರಿಯಲ್ಲಿ ದೊರಕುವಂತೆ ರೂಪಿಸಬಹುದಾದ ಈ ಉದ್ದೇಶಿತ ರಸ್ತೆಯು, ಎತ್ತಿನ ಭುಜ, ಕೊಡಚಾದ್ರಿ ಮೊದಲಾದ ಹಲವು ತಾಣಗಳಿಗೆ ಚಾರಣಕ್ಕೂ ಅವಕಾಶ ಮಾಡಿಕೊಡಬಲ್ಲದು; ಹಲವು ಜಲಪಾತಗಳನ್ನು, ಬೀಚ್‌ಗಳನ್ನು ಸಹ ಒಳಗೊಳ್ಳಬಹುದು. ಈ ಕುರಿತು ಒಂದು ಪುಟ್ಟ ಪುಸ್ತಕವನ್ನು ಸಹ ಮುದ್ರಿಸಬಹುದು : ಅದೇ ಕರ್ನಾಟಕದ ಹಸಿರು ಪಾಸ್‌ಪೋರ್ಟ್! ಹಸಿರು ಸಿರಿಯ ಮೂಲಕ ಸಾಗುವ ಈ ಉದ್ದೇಶಿತ ರಸ್ತೆಯು, ನಮ್ಮ ರಾಜ್ಯದ ಪ್ರವಾಸೋದ್ಯಮಕ್ಕೆ ಹೊಸ ಆಯಾಮವನ್ನು ಕೊಡುವುದಂತೂ ನಿಜ. ಇದೇ ರೀತಿ ಬಯಲು ಸೀಮೆಯ ತಾಣಗಳನ್ನು ನೋಡುವ ಚಟುವಟಿಕೆಗೂ ಆಹ್ವಾನ ನೀಡುವ ಅವಕಾಶವಿದೆ.

ಇದರಿಂದೇನು ಲಾಭ ಎಂದು ಕೇಳಬಹುದು. ನಮ್ಮ ರಾಜ್ಯದ ಎಲ್ಲಾ ನ್ಯಾಷನಲ್ ಪಾರ್ಕ್‌ಗಳನ್ನು ನೋಡುವಂತೆ ಆಹ್ವಾನ ನೀಡುವ ಮೂಲಕ, ಮಕ್ಕಳಲ್ಲಿ, ಯುವಕರಲ್ಲಿ, ಹಿರಿಯರಲ್ಲಿ ಒಂದು ಆರೋಗ್ಯಪೂರ್ಣ ಹವ್ಯಾಸಕ್ಕೆ, ಚಟುವಟಿಕೆಗೆ ನಾಂದಿ ಹಾಡಬಹುದು. ಜತೆಗೆ, ಸಹಜವಾಗಿಯೇ, ವಸತಿ ಗೃಹ, ರೆಸ್ಟೋರೆಂಟ್, ಪೆಟ್ರೋಲ್ ಬಂಕ್, ಸ್ಥಳೀಯ ಅಂಗಡಿಗಳ ವ್ಯಾಪಾರ. ವೃದ್ಧಿಗೂ ಈ ಆರೋಗ್ಯಕರ ಚಟುವಟಿಕೆಯಿಂದ ಸಹಾಯವಾಗುತ್ತದೆ. ರಾಜ್ಯ ಸರಕಾರದ ಸಂಬಂಧಪಟ್ಟ ಇಲಾಖೆಗಳು ಇಂತಹದೊಂದು 'ಹಸಿರು ಪ್ರವಾಸಿ ಮಾರ್ಗ'ವನ್ನು ರೂಪಿಸಿ, ನಮ್ಮ ರಾಜ್ಯದ ಎಲ್ಲಾ ನ್ಯಾಷನಲ್ ಪಾರ್ಕ್ ವೀಕ್ಷಣೆಗೆ ವಿಶೇಷ ಒತ್ತು ನೀಡಬೇಕು ಎಂದು ಮನವಿ ಮಾಡುತ್ತೇನೆ.

ಲೋಕಸಭೆ ಚುನಾವಣೆ ಫಲಿತಾಂಶದ ಕಪ್ಪು ಮುಖ



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

2024ರ ಲೋಕಸಭೆ ಚುನಾವಣೆಯ ಫಲಿತಾಂಶ ಜೂನ್ 4ರಂದು ಹೊರಬಿದ್ದ ನಂತರ ಟೀವಿ ಚಾನಲ್‌ಗಳಲ್ಲಿ ಕುಳಿತು ಕಿರುಚಾಡಿದ ಬಹುತೇಕರು ಒಂದು ಅಪಾಯಕಾರಿ ಸಂಗತಿಯನ್ನು ಗಣನೆಗೇ ತೆಗೆದುಕೊಂಡಿಲ್ಲ. ಯಾವಾಗಲೂ ಹಾಗೆಯೇ. ಸುದ್ದಿ ವಾಹಿನಿಗಳಲ್ಲಿ ಅತ್ಯಂತ ಪ್ರಮುಖವಾದ ಅಂಶವೇ ಹಿನ್ನೆಲೆಗೆ ಸರಿದು, ಡ್ರಾಮಾ ಮುನ್ನೆಲೆಗೆ ಬಂದುಬಿಡುತ್ತದೆ. ಸಹಜವಾಗಿಯೇ ಈ ಬಾರಿಯೂ ಹೀಗೇ ಆಗಿದೆ.

ಏನದು ಅಂತಹ ಅಪಾಯಕಾರಿ ಸಂಗತಿ? ಈ ಸಲದ ಚುನಾವಣೆಯಲ್ಲಿ ಪ್ರತ್ಯೇಕತಾವಾದಿ ಹೋರಾಟಗಾರರ ಮೂವರು ಉತ್ತರಾಧಿಕಾರಿಗಳು ಸಂಸತ್ತಿಗೆ ಆಯ್ಕೆಯಾಗಿದ್ದಾರೆ. ಅವರಲ್ಲಿ ಇಬ್ಬರು ಪಂಜಾಬ್‌ನವರು, ಒಬ್ಬ ಕಾಶ್ಮೀರದವರು.

ಅಮೃತ್‌ಪಾಲ್ ಸಿಂಗ್ ಸಂಧು ಪಂಜಾಬ್‌ನಿಂದ ಆಯ್ಕೆಯಾದ, ಖಲಿಸ್ತಾನ್ ಚಳವಳಿಯ ಪರ ತನ್ನದೇ ಆದ ಶೈಲಿಯಲ್ಲಿ ಹೋರಾಟ ನಡೆಸುತ್ತಾ ಬಂದಿರುವ ಪ್ರತ್ಯೇಕತಾವಾದಿ ಸಂಸದ. ಈತ ನಾಲ್ಕು ದಶಕಗಳ ಹಿಂದೆ ಇದೇ ಜೂನ್‌ನಲ್ಲಿ ಅಮೃತಸರದ ಸ್ವರ್ಣ ಮಂದಿರದೊಳಗೆ ಆಪರೇಷನ್ ಬ್ಲೂಸ್ಟಾರ್‌ನಲ್ಲಿ ಹತ್ಯೆಗೀಡಾದ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆಯ ಅಪರಾವತಾರದಂತಿದ್ದಾನೆ. ಪಂಜಾಬ್‌ನಿಂದಲೇ ಆಯ್ಕೆಯಾದ ಇನ್ನೊಬ್ಬ ಪ್ರತ್ಯೇಕತಾವಾದಿ ಧೋರಣೆಯ ಸಂಸದ ಸರಬ್ಜಿತ್ ಸಿಂಗ್ ಖಾಲ್ಸಾ. ಈತ ಇಂದಿರಾ ಗಾಂಧಿಯ ಹಂತಕ ಬಿಯಾಂತ್ ಸಿಂಗ್‌ನ ಮಗ. ಮೂರನೆಯ ಪ್ರತ್ಯೇಕತಾವಾದಿ ಸಂಸದ ಶೇಖ್ ಅಬ್ದುಲ್ ರಶೀದ್. ಅವನಿಗೀಗ 56 ವರ್ಷ ವಯಸ್ಸು. ಜಮ್ಮು ಮತ್ತು ಕಾಶ್ಮೀರದ ಲೋಕೋಪಯೋಗಿ ಇಲಾಖೆಯಲ್ಲಿ ಈ ಹಿಂದೆ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದವನು. ಪ್ರಚಂಡ ಬುದ್ಧಿವಂತ. ಈ ಮೂವರೂ ಸ್ವತಂತ್ರವಾಗಿ ಸ್ಪರ್ಧಿಸಿ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ಈ ಮೂವರಲ್ಲಿ ಒಬ್ಬೊಬ್ಬರೂ ಬಹಳ ಆಸಕ್ತಿಕರ ವ್ಯಕ್ತಿತ್ವದವರು. ಆದರೆ ನಿಜವಾದ ಕತೆ ಯಾವಾಗಲೂ ಮತದಾರರ ಜೋಳಿಗೆಯಲ್ಲೇ ಇದ್ದಿರುತ್ತದೆ. ನಮ್ಮ ದೇಶದ ಚುನಾವಣಾ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳಿಂದ ಸ್ಪರ್ಧಿಸಿಲ್ಲದ ಸ್ವತಂತ್ರ ಅಭ್ಯರ್ಥಿಗಳಿಗೆ ಗೆಲುವು ಸಿಗುವುದು ಅಪರೂಪ. ಸ್ವತಂತ್ರ ಅಭ್ಯರ್ಥಿಯೊಬ್ಬ ಗೆದ್ದಿದ್ದಾನೆ ಅಂದರೆ ಅವನಿಗೆ ಸ್ಥಳೀಯವಾಗಿ ಅವನದೇ ಆದ ಸಂಪರ್ಕ ಜಾಲದ ಮೂಲಕ ವ್ಯಾಪಕ ಜನಬೆಂಬಲ ಇದ್ದಿರುತ್ತದೆ. ಆ ಸ್ಥಳದಲ್ಲಿ ಅವನು ಬಲವಾಗಿ ಬೇರು ಬಿಟ್ಟಿರಬೇಕು. ಆಗ ಮಾತ್ರ ಗೆಲ್ಲಲು ಸಾಧ್ಯ. ಹಾಗಿದ್ದರೆ ದೇಶವನ್ನು ಒಡೆಯಬೇಕೆಂದು ಪ್ರತಿಪಾದಿಸುವ ಈ ಮೂವರಿಗೆ ಸ್ಥಳೀಯವಾಗಿ ಅದಿನ್ನೆಂಥ ಬೆಂಬಲ ಇದ್ದಿರಬೇಕು? ಇದು ಅಪಾಯಕಾರಿ ಟ್ರೆಂಡ್ ಅಲ್ಲವೇ?

1993ರಲ್ಲಿ ಜನಿಸಿದ ಅಮೃತ್‌ಪಾಲ್ ಸಿಂಗ್ ಸಂಧು ತನ್ನ ಬೆಂಬಲಿಗರಿಗೆ ಸಿಖ್ಖರ ಧಾರ್ಮಿಕ ನಂಬಿಕೆ ಮತ್ತು ಪ್ರತ್ಯೇಕತಾವಾದದ ಕ್ರಾಂತಿಕಾರಿ ಹೋರಾಟದ ಸಿದ್ಧಾಂತವನ್ನು ಮಿಶ್ರಣ ಮಾಡಿ ಬೋಧಿಸುತ್ತಾನೆ. ಇವನದು ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆಯ ಖಲಿಸ್ತಾನಿ ಹೋರಾಟದ್ದೇ ಸಿದ್ಧಾಂತ. ಜರ್ನೈಲ್ ಸಿಂಗ್‌ನನ್ನು ಇವನು ಸಂತ ಎಂದು ಕರೆಯುತ್ತಾನೆ. ಜರ್ನೈಲ್ ಸಿಂಗ್ ಪಂಜಾಬ್‌ನಲ್ಲಿ ರಕ್ತಪಾತಕ್ಕೆ ಕಾರಣವಾದ ಖಲಿಸ್ತಾನಿ ಸಶಸ್ತ್ರ ಹೋರಾಟವನ್ನು ದೊಡ್ಡ ಪ್ರಮಾಣದಲ್ಲಿ ನಡೆಸಿದ ಪ್ರತ್ಯೇಕತಾವಾದಿ ನಾಯಕ. 1984ರ ಜೂನ್ 1ರಿಂದ ಜೂನ್ 10ರ ನಡುವೆ ಅಮೃತಸರದ ಸ್ವರ್ಣ ಮಂದಿರದಲ್ಲಿ ಹಿಂದೆಂದೂ ಕೇಳರಿಯದ ಆಪರೇಷನ್ ಬ್ಲೂಸ್ಟಾರ್ ಹೆಸರಿನ ಬಂದೂಕು ಕಾರ್ಯಾಚರಣೆ ನಡೆದು ಭಯೋತ್ಪಾದಕರು ಹತ್ಯೆಗೀಡಾದ ಘಟನೆಯ ಮೂಲ ಕಾರಣ ಈತನೇ. ನಂತರ ಇದೇ ಘಟನೆ ಆ ವರ್ಷದ ಅಕ್ಟೋಬರ್ 31ರಂದು ಪ್ರಧಾನಿ ಇಂದಿರಾ ಗಾಂಧಿಯ ಹತ್ಯೆಗೂ ಕಾರಣವಾಯಿತು. ಆ ದಶಕದಲ್ಲಿ ಪಂಜಾಬ್‌ನಲ್ಲಿ ನಡೆದ ಸಾವುನೋವಿನ ಸರಣಿಗಳು ಹಾಗೂ ರಕ್ತಪಾತ ನನ್ನ ನೆನಪಿನಲ್ಲಿ ಇನ್ನೂ ಕಡುಕೆಂಪು ಬಣ್ಣದಲ್ಲಿ ಅಚ್ಚೊತ್ತಿದೆ. ಜರ್ನೈಲ್ ಸಿಂಗ್‌ನನ್ನು ಕೊನೆಯ ಬಾರಿ ಸಂದರ್ಶನ ನಡೆಸಿದ ಪತ್ರಕರ್ತರಲ್ಲಿ ನಾನೂ ಒಬ್ಬ. 1984ರಲ್ಲಿ ನಾನು ಆತನನ್ನು ಭೇಟಿಯಾದ ಮನೆಯ ಟೆರೇಸ್ ಮೇಲೆ ಆಮೇಲೆ ಎಕೆ 47 ಗನ್‌ಗಳಿಂದ ದಾಳಿ ನಡೆದಿತ್ತು.

ಈ ಸಂಧು ಅಮೃತಸರದ ಬಾಕಲಾ ತಾಲೂಕಿನ ನಿವಾಸಿ. 2012ರಲ್ಲಿ ಯುವಕನಾಗಿದ್ದಾಗ ದುಬೈಗೆ ಹೋಗಿ ಟ್ರಾನ್ಸ್‌ಪೋರ್ಟ್ ಬಿಸಿನೆಸ್‌ಗೆ ಸೇರಿಕೊಂಡಿದ್ದ. ಸುಮಾರು ಒಂದು ದಶಕದ ಕಾಲ ಅಲ್ಲಿದ್ದು, ನಂತರ ಪಂಜಾಬ್‌ಗೆ ಮರಳಿ ವಾರಿಸ್ ಪಂಜಾಬ್ ದೇ ಸಂಘಟನೆಯ ನಾಯಕನಾದ. ಈ ಸಂಘಟನೆಯ ಛತ್ರದಡಿ ಆನಂದಪುರ ಖಾಲ್ಸಾ ಫೌಜ್ ಎಂಬ ಭಯೋತ್ಪಾದಕರ ಘಟಕವೂ ಇದೆ. ಇವನ ದೀಕ್ಷಾ ಸಮಾರಂಭ ಅದ್ದೂರಿಯಾಗಿ ನಡೆದಿತ್ತು. ನಂತರ ಭಿಂದ್ರನ್‌ವಾಲೆಯ ರೀತಿಯಲ್ಲೇ ಈತ ಪಂಜಾಬಿನ ಯುವಕರನ್ನು ಡ್ರಗ್ಸ್ ದಾಸ್ಯದಿಂದ ಹೊರತರಲು ಹೋರಾಟ ನಡೆಸಿದ. ಹೀಗಾಗಿ ಸಾವಿರಾರು ಕುಟುಂಬಗಳು ಈತನ ಬೆಂಬಲಿಗರಾದರು. ಬೆಂಬಲ ಹೆಚ್ಚಿದಂತೆ ಈತನ ಭಯೋತ್ಪಾದಕ ಚಟುವಟಿಕೆಗಳೂ ತೀವ್ರತೆ ಪಡೆದವು. 2022ರ ಡಿಸೆಂಬರ್‌ನಲ್ಲಿ ಒಂದಷ್ಟು 'ನಿರ್ದಿಷ್ಟ ಗುರಿಯ ದಾಳಿಗಳು ಇವನ ಕಡೆಯಿಂದ ನಡೆದವು. ಎರಡು ತಿಂಗಳ ನಂತರ ಫೆಬ್ರವರಿಯಲ್ಲಿ ಅವನ ಬೆಂಬಲಿಗರು ಅಂಜಲಾ ಪೊಲೀಸ್ ಸ್ಟೇಶನ್ ಮೇಲೆ ಧರ್ಮಗ್ರಂಥಗಳನ್ನು ಗುರಾಣಿಯಂತೆ ಹಿಡಿದು ಹಿಂಸಾತ್ಮಕ ದಾಳಿ ನಡೆಸಿದರು. 2023ರ ಮಾರ್ಚ್ 18ರಂದು ಪಂಜಾಬ್ ಪೊಲೀಸರು ವಾರಿಸ್ ಪಂಜಾಬ್ ದೇ ಸಂಘಟನೆಯ ಮೇಲೆ ಕಾರ್ಯಾಚರಣೆ ಆರಂಭಿಸಿದರು. 2023ರ ಏಪ್ರಿಲ್ 23ರಂದು ಮೋಗಾದಲ್ಲಿ ಸಂಧು ಅರೆಸ್ಟ್ ಆದ. ಅವನ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಕೇಸು ದಾಖಲಿಸಿ ಅಸ್ಸಾಂ ಜೈಲಿಗೆ ತಳ್ಳಲಾಯಿತು. ಪಂಜಾಬ್‌ನಿಂದ ಅಷ್ಟು ದೂರದಲ್ಲಿರುವ ಜೈಲಿನ ಕೋಣೆಯಿಂದಲೇ ಅವನು ಈ ಸಲ ಖದೂರ್ ಸಾಹಿಬ್ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ 1,93,130 ಮತಗಳಿಂದ ಗೆದ್ದಿದ್ದಾನೆ. ಅವನ ತಂದೆ ಈ ಜಯಕ್ಕಾಗಿ ದೇವರು ಹಾಗೂ ಸಂಘಟನೆಗೆ ಧನ್ಯವಾದ ಹೇಳಿದ್ದಾರೆ.

ಖದೂರ್ ಸಾಹಿಬ್‌ನಿಂದ ಸುಮಾರು 100 ಕಿಲೋಮೀಟರ್ ದೂರದಲ್ಲಿ ಫರೀದ್‌ಕೋಟ್ ಇದೆ. ಅಲ್ಲಿ ಗೆದ್ದವನು ಸರಬ್ಜಿತ್ ಸಿಂಗ್ ಖಾಲ್ಸಾ. ಆಪ್ ಅಭ್ಯರ್ಥಿಯಾಗಿದ್ದ ಚಿತ್ರನಟ ಹಾಗೂ ಪಂಜಾಬ್ ಮುಖ್ಯಮಂತ್ರಿಯ ಸ್ನೇಹಿತನಾದ ಕರಮ್ಜಿತ್ ಅನ್ಮೋಲ್ ವಿರುದ್ಧ 70,053 ಮತಗಳಿಂದ ಈತ ಜಯ ಗಳಿಸಿದ್ದಾನೆ. ಇವನ ತಂದೆ ಬಿಯಾಂತ್ ಸಿಂಗ್ ಪ್ರಧಾನಿ ಇಂದಿರಾ ಗಾಂಧಿಗೆ ಬಾಡಿಗಾರ್ಡ್ ಆಗಿದ್ದ. ಇಂದಿರಾ ಗಾಂಧಿ ಆಪರೇಷನ್ ಬ್ಲೂಸ್ಟಾರ್‌ಗೆ ಆದೇಶ ನೀಡಿದ್ದರಿಂದ ಆತ ಬಹಳ ಕ್ರುದ್ಧಗೊಂಡಿದ್ದ. ಗುಪ್ತಚರ ದಳದವರು ಇಂದಿರಾಗೆ ಸಂಭವನೀಯ ಅಪಾಯದ ಬಗ್ಗೆ ಎಚ್ಚರಿಕೆ ನೀಡಿದ್ದರೂ ಇಂದಿರಾ ಗಾಂಧಿ ಮಾತ್ರ ಬಿಯಾಂತ್ ಸಿಂಗ್ ಮೇಲೆ ತಾನು ಇರಿಸಿದ್ದ ನಂಬಿಕೆಯನ್ನು ಕಳೆದುಕೊಂಡಿರಲಿಲ್ಲ. ಆದರೆ 1984ರ ಅಕ್ಟೋಬರ್ 31ರಂದು ಬೆಳಿಗ್ಗೆ 9.30ಕ್ಕೆ ಬಿಯಾಂತ್ ಸಿಂಗ್ ಮತ್ತು ಅವನ ಸಹೋದ್ಯೋಗಿ ಸತ್ವಂತ್ ಸಿಂಗ್ ಇಬ್ಬರೂ ಸೇರಿ ಇಂದಿರಾ ಗಾಂಧಿ ಮೇಲೆ ಗುಂಡಿನ ಮಳೆಗರೆದಿದ್ದರು. ಸಫ್ದರ್‌ಜಂಗ್ ರಸ್ತೆಯ ಪ್ರಧಾನಿ ನಿವಾಸದಲ್ಲಿ ಇಂದಿರಾ ಶವ ಅಸಹಾಯಕವಾಗಿ ಉರುಳಿತ್ತು.

ಇನ್ನು, ಜಮ್ಮು ಮತ್ತು ಕಾಶ್ಮೀರದಲ್ಲಿ 2013ರಲ್ಲಿ ಅವಾಮಿ ಇತ್ತೆಹಾದ್ ಪಾರ್ಟಿ (ಎಐಪಿ)ಯನ್ನು ಹುಟ್ಟುಹಾಕಿದವನು ಇಂಜಿನಿಯರ್ ರಶೀದ್. ಇವನು ತುಂಬಾ ಸರಳ ವ್ಯಕ್ತಿ. ಆ ಕಾರಣಕ್ಕಾಗಿಯೇ ಜನರು ಈತನನ್ನು ಬಹಳ ಇಷ್ಟಪಡುತ್ತಾರೆ. ಎಲ್ಲಾ ಕಡೆಗಳಂತೆ ಜಮ್ಮು ಮತ್ತು ಕಾಶ್ಮೀರದಲ್ಲೂ ರಾಜಕಾರಣಿಗಳು ತುಂಬಾ ಅದ್ದೂರಿ ಜೀವನ ನಡೆಸುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ ರಶೀದ್ ಸರಳಾತಿಸರಳವಾಗಿ ಬದುಕುತ್ತಾನೆ. ಬಸ್‌ಗಳಲ್ಲಿ ಜನಸಾಮಾನ್ಯರ ಜೊತೆಗೆ ಓಡಾಡುತ್ತಾನೆ. 2019ರಲ್ಲಿ ಈತ ಭಯೋತ್ಪಾದನಾ ಕಾಯ್ದೆ (ಯುಎಪಿಎ) ಅಡಿ ಬಂಧಿತನಾಗಿದ್ದಾನೆ. ದೆಹಲಿಯ ಕುಖ್ಯಾತ ತಿಹಾರ್ ಜೈಲಿನಲ್ಲಿ ಈತನನ್ನು ಬಂಧಿಸಿಡಲಾಗಿದೆ. ಅಲ್ಲಿಂದಲೇ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿ ಭರ್ಜರಿ ಜಯ ಗಳಿಸಿದ್ದಾನೆ. ಈತ ಸೋಲಿಸಿದ್ದು ಇನ್ನಾರನ್ನೂ ಅಲ್ಲ, ಖುದ್ದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾರನ್ನು! ಒಮರ್ 2,68,339 ವೋಟು ಪಡೆದಿದ್ದರೆ, ಇಂಜಿನಿಯರ್ ರಶೀದ್ 4,72,481 ವೋಟು ಗಳಿಸಿ ಜಯಭೇರಿ ಬಾರಿಸಿದ್ದಾನೆ. ಜಯದ ಅಂತರ ನೋಡಿದರೇ ತಿಳಿಯುತ್ತದೆ, ಈತನಿಗೆ ಎಂಥಾ ಬೆಂಬಲವಿದೆ ಎಂಬುದು. ರಶೀದ್‌ನ 22 ವರ್ಷದ ಮಗ ಅಬ್ರಾರ್ ಹೇಳಿದ ಮಾತು ನೆನಪಿಡುವಂಥದ್ದು. 'ನನ್ನ ಅಪ್ಪನ ಪರ ಪ್ರಚಾರ ಮಾಡಲು ನಾವು ಇಡೀ ಚುನಾವಣೆಗೆ ಖರ್ಚು ಮಾಡಿದ್ದು 27000 ರೂಪಾಯಿ. ಅದೂ ನಾವು ಓಡಾಡಲು ಬಳಸಿದ ಜೀಪಿಗೆ ಡೀಸೆಲ್ ಹಾಕಿಸಲು ಮಾಡಿದ ಖರ್ಚು. ಇದನ್ನು ನಮ್ಮ ದೇಶದಲ್ಲಿ ಈಗ ಸಾಮಾನ್ಯ ಅಭ್ಯರ್ಥಿಗಳು ಚುನಾವಣೆಗೆ ಮಾಡುವ ಖರ್ಚಿನ ಜೊತೆಗೆ ಒಮ್ಮೆ ಹೋಲಿಸಿ ನೋಡಿ. ಅಬ್ರಾರ್ ಮತ್ತು ಅವನ ತಮ್ಮ ಅಸ್ರಾರ್ ರಶೀದ್ ಚುನಾವಣಾ ಪ್ರಚಾರಕ್ಕೆ ಬಳಸಿದ ಘೋಷಣೆ ತುಂಬಾ ಸರಳವಾಗಿತ್ತು: 'ಜೈಲಿನ ಸೇಡು ಮತದಿಂದ ತೀರಿಸಿಕೊಳ್ಳೋಣ.

ಆದರೆ ಈ ಮೂವರೂ ಒಂದು ಸಂಗತಿಯನ್ನು ಮಾತ್ರ ಈಗ ಒಪ್ಪಿಕೊಳ್ಳಲೇಬೇಕು. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಎಷ್ಟು ವಿಶಿಷ್ಟವಾಗಿದೆ ಅಂದರೆ, ಇದು ತನ್ನ ಆಂತರ್ಯದಲ್ಲಿ ಸ್ವಾತಂತ್ರ್ಯವನ್ನು ಹುದುಗಿಸಿಟ್ಟುಕೊಂಡು, ಪ್ರತ್ಯೇಕತಾವಾದಿಗಳಿಗೂ ಕೂಡ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡುತ್ತದೆ. ಆದರೆ ಅವರು ಗೆದ್ದು ಬಂದರೆ ಲಕ್ಷ್ಮಣರೇಖೆ ಹಾಕುತ್ತದೆ. ಈಗ ಗೆದ್ದಿರುವ ಮೂವರೂ ಸಂಸತ್ತಿನ ಸದಸ್ಯರಾಗುವುದಕ್ಕಿಂತ ಮೊದಲು ನಾವು ಭಾರತದ ಸಾರ್ವಭೌಮತೆಯನ್ನು ಗೌರವಿಸುತ್ತೇವೆ ಮತ್ತು ರಕ್ಷಿಸುತ್ತೇವೆ ಎಂದೇ ಪ್ರಮಾಣವಚನ ಸ್ವೀಕರಿಸಬೇಕು. ಏನಾಗುತ್ತದೆಯೋ ನೋಡೋಣ.

★★★

ನಾವೀಗ ಮತ್ತೆ 1982ರ ದಿನಗಳನ್ನು ನೋಡುತ್ತಿದ್ದೇವಾ? ರಾಷ್ಟ್ರೀಯ ಹಿತಾಸಕ್ತಿ ಹೊಂದಿರುವ ಎಲ್ಲರ ಮನದಲ್ಲೂ ಇಂಥದ್ದೊಂದು ಪ್ರಶ್ನೆ ಮೂಡುತ್ತಿದೆ. 1982ರಲ್ಲಿ ದೆಹಲಿ ಪೊಲೀಸರು ಏಷ್ಯನ್ ಗೇಮ್ಸ್ ಆರಂಭವಾಗುವುದಕ್ಕೂ ಮುನ್ನ ಬಸ್ಸು, ಕಾರುಗಳನ್ನು ರಸ್ತೆಯಲ್ಲಿ ತಡೆದು ಅವುಗಳಲ್ಲಿರುವ ಸಿಖ್ಖರನ್ನು ತಪಾಸಣೆಗೆ ಒಳಪಡಿಸುತ್ತಿದ್ದರು. ಆಗ ಕೇಂದ್ರ ಸರ್ಕಾರದಲ್ಲಿರುವ ಯಾರಿಗೂ ಅದರಿಂದ ಸಮಸ್ಯೆಯಿರಲಿಲ್ಲ. ಏಕೆಂದರೆ ಪಂಜಾಬ್‌ನ ಸಮಸ್ಯೆಗಳು ದೆಹಲಿಯಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಕಣ್ಣಿನಲ್ಲಿ ಸಿಖ್ಖರನ್ನೆಲ್ಲ ಶಂಕಿತರನ್ನಾಗಿ ಮಾಡಿದ್ದವು. ವಿಮಾನ ನಿಲ್ದಾಣಗಳಲ್ಲಿ ಮಾಡುವಂತೆ ಬಸ್ಸು, ರೈಲಿನ ಎಲ್ಲಾ ಪ್ರಯಾಣಿಕರನ್ನೂ ತಪಾಸಣೆಗೆ ಒಳಪಡಿಸಿದರೆ ಅದರಿಂದ ಸಮಸ್ಯೆಯಿಲ್ಲ. ಏಕೆಂದರೆ ಆಗ ತಾರತಮ್ಯ ಮಾಡಿದಂತಾಗುವುದಿಲ್ಲ. ಆದರೆ ಅಂದು ಕೇವಲ ಸಿಖ್ಖರನ್ನೇ ಗುರುತಿಸಿ ತಪಾಸಣೆ ಮಾಡಲಾಗುತ್ತಿತ್ತು. ಅದು ಆ ಧರ್ಮೀಯರಿಗೆ ಅವಮಾನ ಮಾಡಿದಂತಾಗುತ್ತಿತ್ತು. ಹೀಗಾಗಿ ಸಿಖ್ಖರು ಸಿಟ್ಟಾಗಿದ್ದರು. ಅದು ಕೆಲ ಒಳಪಂಗಡಗಳು ಒಟ್ಟಾಗಿ ಕ್ರಾಂತಿಕಾರಿ ಗುಂಪುಗಳಾಗಿ ಮಾರ್ಪಡುವುದಕ್ಕೆ ಪ್ರಚೋದನೆ ನೀಡಿತು. ದೇಶಭಕ್ತಿಯ ಪರಮೋಚ್ಚ ತಾಣವೆಂದು ನಂಬಲಾದ ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಸಿಖ್ಖರನ್ನೂ ಅನುಮಾನದಿಂದಲೇ ನೋಡಲಾಗುತ್ತಿತ್ತು. ಆಘಾತಕಾರಿ ಘಟನೆಯೊಂದರಲ್ಲಿ ಘರವಾಲ್ ರೈಫಲ್ಸ್‌ನ ಮೇಜರ್ ಜನರಲ್ ಶಾಬೇಗ್ ಸಿಂಗ್ 1982ರಲ್ಲಿ ತಮ್ಮ ದೆಹಲಿಯ ಮನೆ ಬಿಟ್ಟು ಹೋಗಬೇಕಾಯಿತು. ಏಕೆಂದರೆ ಅವರನ್ನೂ ಭದ್ರತಾ ಪಡೆಗಳು ದೇಶದ ಭದ್ರತೆಗೆ ಅಪಾಯಕಾರಿ ವ್ಯಕ್ತಿ ಎಂದು ಶಂಕಿಸಿದ್ದವು. 1947, 1962, 1965 ಹಾಗೂ 1971ರ ಯುದ್ಧಗಳಲ್ಲಿ ಭಾರತದ ಪರವಾಗಿ ಹೋರಾಡಿದ್ದ ವೀರ ಯೋಧ ಅವರಾಗಿದ್ದರು. ದುರದೃಷ್ಟವಶಾತ್ ಅವರು ಅವಮಾನದಿಂದ ಕ್ರುದ್ಧರಾಗಿ ಸಂತ ಭಿಂದ್ರನ್‌ವಾಲೆಯ ಖಾಸಗಿ ಸೇನೆಗೆ ಕಮಾಂಡರ್ ಆಗಿ ಸೇರ್ಪಡೆಗೊಂಡರು. ಆಪರೇಷನ್ ಬ್ಲೂಸ್ಟಾರ್ ವೇಳೆ ತಮ್ಮ ಪರಾಕ್ರಮವನ್ನೂ ತೋರಿಸಿದರು.

ಹಿಂದೆ ಆದ ತಪ್ಪುಗಳಿಗೆ ಬೆಲೆ ಕಟ್ಟುವುದಕ್ಕೆ ಇತಿಹಾಸಕ್ಕೆ ಅಷ್ಟೇನೂ ಅವಸರ ಇರುವುದಿಲ್ಲ. ಆದರೆ ಅದು ತಪ್ಪನ್ನು ಯಾವತ್ತೂ ಮರೆಯುವುದಿಲ್ಲ.

ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಆಪ್ತ ಭದ್ರತಾ ತಂಡ ಮೂರನೇ ಅವಧಿಗೆ ಅಧಿಕಾರ ಆರಂಭಿಸುತ್ತಿದ್ದಂತೆ ಈ ಮೂರು ಫಲಿತಾಂಶಗಳು ಅತ್ಯಂತ ಆದ್ಯತೆಯ ವಿಷಯವಾಗಿ ಪರಿಣಮಿಸುತ್ತವೆ. ಸಂಸತ್ತಿಗೆ ಆಯ್ಕೆಯಾದ ಈ ಮೂವರು ಪ್ರತ್ಯೇಕತಾವಾದಿಗಳಿಂದ ಎದುರಾಗಿರುವ ಅಪಾಯವನ್ನು ಅತ್ಯಂತ ಜಾಣ್ಮೆಯಿಂದ, ರಾಜಕೀಯ ಮತ್ತು ಆಡಳಿತಾತ್ಮಕ ಕ್ರಮಗಳ ನಾಜೂಕು ಮಿಶ್ರಣದಿಂದಲೇ ಬಗೆಹರಿಸಿಕೊಳ್ಳಬೇಕು. ಏನೂ ಆಗುವುದಿಲ್ಲ ಬಿಡಿ ಎಂಬ ನಿರ್ಲಕ್ಷ್ಯ ಅಥವಾ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಅಸಡ್ಡೆ ಅಥವಾ ದಬ್ಬಾಳಿಕೆಯ ನೀತಿಯಿಂದ ಇದನ್ನು ಬಗೆಹರಿಸಲು ಸಾಧ್ಯವಿಲ್ಲ. ಅಥವಾ 1982ರಲ್ಲಿ ಇದ್ದ ದಪ್ಪ ಚರ್ಮದ, ತೆಳು ಬುದ್ಧಿಯ ಸರ್ಕಾರ ಮಾಡಿದಂತೆ ಒಡೆದು ಆಳುವ ಅಥವಾ ತಾರಾತಮ್ಯದ ನೀತಿ ತೋರುವುದರಿಂದಲೂ ಇದು ಬಗೆಹರಿಯುವುದಿಲ್ಲ. ಕ್ಷಿಪ್ರವಾಗಿ ಬದಲಾಗುತ್ತಿರುವ ಸಮಾಜದ ಚಿಂತನಾ ಕ್ರಮವನ್ನು ಗುರುತಿಸುವ ಚುರುಕಾದ ಕಣ್ಣು ಹಾಗೂ ಮುಕ್ತ ಮನಸ್ಸು ಇದಕ್ಕೆ ಅಗತ್ಯವಿದೆ.

ಎಲ್ಲಾ ಫಲಿತಾಂಶಕ್ಕೂ ಒಂದು ಅರ್ಥವಿರುತ್ತದೆ. ಕಳೆದೊಂದು ದಶಕದಲ್ಲಿ ನೂರಾರು ಲಕ್ಷ ಭಾರತೀಯರ ಆರ್ಥಿಕ ಸ್ಥಿತಿಗತಿ ಅಳತೆಗೂ ಮೀರಿ ಸುಧಾರಿಸಿದೆ. ಆದ್ದರಿಂದಲೇ ಬಿಜೆಪಿಗೆ 240 ಸೀಟು ಲಭಿಸಿದೆ. ಆದರೆ ಒಳಗಿನ ಅಂಕಿಅಂಶಗಳನ್ನು ನಿಕಷಕ್ಕೆ ಒಡ್ಡಿದರೆ ಬೇರೆ ಬೇರೆ ಸಂಗತಿಗಳು ಗೋಚರಿಸುತ್ತವೆ. ಈ ಚುನಾವಣೆಯಲ್ಲಿ, ನಗರ ಪ್ರದೇಶಗಳಲ್ಲಿ ಬಿಜೆಪಿಯ ಮತ ಗಳಿಕೆ ಪ್ರಮಾಣ 2019ರಲ್ಲಿ ಇದ್ದ ಶೇ.33ರಿಂದ ಶೇ.40ಕ್ಕೆ ಏರಿಕೆಯಾಗಿದೆ. ಯಾವ ಲೆಕ್ಕದಲ್ಲಿ ನೋಡಿದರೂ ಇದು ಅದ್ಭುತವಾದ ಬೆಳವಣಿಗೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಹಿಂದೆ ಲಭಿಸಿದ್ದ ಶೇ.39.5ರಷ್ಟು ವೋಟುಗಳು ಈ ಬಾರಿ ಶೇ.35ಕ್ಕೆ ಕುಸಿದಿವೆ. ಪ್ರಧಾನಿ ಮೋದಿಗೆ ಗ್ರಾಮೀಣ ಮಹಿಳೆಯರಿಂದ ಲಭಿಸುತ್ತಿರುವ ಅಭೂತ ಬೆಂಬಲ ಹಾಗೂ ಉಚಿತ ಪಡಿತರ ಮತ್ತು ಉತ್ತಮ ಆಡಳಿತದ ಮೂಲಕ ಅವರು ಮಹಿಳೆಯರ ಮನಸ್ಸನ್ನು ಗೆದ್ದಿರುವುದರ ಹೊರತಾಗಿಯೂ ಹಳ್ಳಿಗಾಡಿನಲ್ಲಿ ಬಿಜೆಪಿಯ ಮತ ಗಳಿಕೆ ಇಳಿಕೆಯಾಗಿದೆ. ನಿರುದ್ಯೋಗದ ಸಮಸ್ಯೆ ಹಾಗೇ ಇರುವುದರಿಂದ ಯುವಕರೂ ದೂರ ಹೋಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಬಿಜೆಪಿ ಕಳೆದುಕೊಂಡ ಮತಗಳನ್ನು ಸೀಟುಗಳಾಗಿ ಪರಿವರ್ತಿಸಿದರೆ 63 ಸೀಟುಗಳಾಗುತ್ತವೆ! ಬಿಜೆಪಿ ಕಳೆದುಕೊಂಡ ಸೀಟುಗಳು ಎಲ್ಲಿ ಹೋದವು ಎಂಬುದಕ್ಕೆ ಉತ್ತರ ಇಲ್ಲೇ ಇದೆ. ಸಂಪುಟ ಸಚಿವ ಅರ್ಜುನ್ ಮುಂಡಾ ಅವರ ಸೋಲು ಇನ್ನೊಂದು ಸಂದೇಶ ನೀಡುತ್ತಿದೆ. ಜಾರ್ಖಂಡ್‌ನ ಗುಡ್ಡಗಾಡು ಪ್ರದೇಶಗಳ ಮತ ಈ ಬಾರಿ ಬಿಜೆಪಿಯ ಕೈತಪ್ಪಿದೆ. ಇಷ್ಟೇ ಅಲ್ಲ, ದುರಸ್ತಿ ಮಾಡುವುದಕ್ಕೆ ಇನ್ನೂ ಸಾಕಷ್ಟಿದೆ. ಬಹಳ ದೊಡ್ಡ ಅಪಾಯವಿರುವುದು ಈಶಾನ್ಯ ರಾಜ್ಯಗಳಲ್ಲಿ. ಅದಕ್ಕೆ ಕ್ಷಿಪ್ರ ಪರಿಹಾರವೂ ಇಲ್ಲ. ಜಾದೂ ಮಾಡಿ ಈಶಾನ್ಯ ರಾಜ್ಯಗಳ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ. ಈಶಾನ್ಯಕ್ಕೆ ತಕ್ಷಣ ಬೇಕಿರುವುದು ಕನಿಕರ, ಸ್ಪಷ್ಟತೆ, ಕಳಕಳಿ ಹಾಗೂ ಕೆಲವು ಕಡೆ ಶಕ್ತಿ. ಪ್ರಚೋದಕರಿಂದ ಪ್ರಚೋದನೆಗೆ ಒಳಗಾಗುವುದು ಒಳ್ಳೆಯ ಆಡಳಿತಗಾರರ ಲಕ್ಷಣವಲ್ಲ. ಹಾಗೆಯೇ, ದೇಶದ ನಿಜವಾದ ಶತ್ರುಗಳಿಗೆ ಯಾವ ಪ್ರಮಾಣದ ಚಾಟಿ ಬೀಸಬೇಕೋ ಅದನ್ನು ಬೀಸಲೇಬೇಕು.

1980ರ ದಶಕದಲ್ಲಿ ಪಂಜಾಬ್‌ನಲ್ಲಿ ಸಂಭವಿಸಿದ ರಾಜಕೀಯ ಭೂಕಂಪನವನ್ನು ನಾವು ನೋಡಿದ್ದೇವೆ. 1970ರ ದಶಕದಲ್ಲಿ ಪ್ರಜಾಸತ್ತಾತ್ಮಕ ಪಾಲ್ಗೊಳ್ಳುವಿಕೆಯಿಂದಾಗಿ ಶಾಂತಿ ಹಾಗೂ ಸಹಬಾಳ್ವೆಗೆ ಮರಳಿದ್ದ ಜಮ್ಮು ಮತ್ತು ಕಾಶ್ಮೀರದಲ್ಲಿ 1987ರಲ್ಲಿ ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳು ಅಧಿಕಾರ ಉಳಿಸಿಕೊಳ್ಳುವುದಕ್ಕಾಗಿ ಚುನಾವಣೆಯಲ್ಲಿ ಅಕ್ರಮ ಎಸಗಿದ್ದರಿಂದ ಅಲ್ಲಿನ ಪರಿಸ್ಥಿತಿ ಏಕ್‌ದಂ ಹದಗೆಟ್ಟಿದ್ದನ್ನೂ ನೋಡಿದ್ದೇವೆ. ಅಲ್ಲಿನ ಜನರು ಅವೆರಡೂ ಪಕ್ಷಗಳನ್ನು ಕ್ಷಮಿಸಲಿಲ್ಲ. ಆದರೆ ಅದು ಅಷ್ಟೇನೂ ಮುಖ್ಯವಲ್ಲ. ಬಹಳ ಮುಖ್ಯವಾದ ಸಂಗತಿ ಏನೆಂದರೆ, ಹಾಗೆ ಸೃಷ್ಟಿಯಾದ ಅಶಾಂತಿಯ ಪರಿಣಾಮದಿಂದಾಗಿ ಹಿಂಸಾಚಾರ ಭುಗಿಲೆದ್ದು, ಜಮ್ಮು ಮತ್ತು ಕಾಶ್ಮೀರದ ಒಗ್ಗಟ್ಟು ಛಿದ್ರಗೊಂಡು, ಪಾಕಿಸ್ತಾನದ ಪ್ರಚೋದಕ ಶಕ್ತಿಗಳ ಕುಮ್ಮಕ್ಕಿನಿಂದ ಸ್ಥಳೀಯರು ಕಾಶ್ಮೀರಿ ಪಂಡಿತರನ್ನು ಅವರ ಮನೆ ತೊರೆದು ಹೋಗುವಂತೆ ಮಾಡಿದರಲ್ಲ, ಅದರ ಘೋರ ಪರಿಣಾಮ ತಣ್ಣನೆಯ ಕಣಿವೆ ರಾಜ್ಯದಲ್ಲಿ ಇವತ್ತಿಗೂ ಅನುರಣಿಸುತ್ತಿದೆ.

ಇವೆಲ್ಲವನ್ನೂ ಮೀರಿ, 2024ರ ಚುನಾವಣೆಯ ಸಂದೇಶ ಏನೆಂದರೆ ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ವಿಶ್ವಾಸಾರ್ಹತೆ ಮತ್ತೊಮ್ಮೆ ಗೆದ್ದಿದೆ. ಜನರ ನಂಬಿಕೆಯನ್ನು ಯಾರೂ ಘಾಸಿಗೊಳಿಸಲು ಸಾಧ್ಯವಾಗಿಲ್ಲ. ಯಾರಾದರೂ ಅದಕ್ಕೆ ಪ್ರಯತ್ನ ಪಟ್ಟಿದ್ದರೂ ಯಶಸ್ವಿಯಾಗುತ್ತಿರಲಿಲ್ಲ. ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಐದು ವರ್ಷದ ಅವಧಿಗೆ ರಾಜನಾಗಿ ಮೆರೆಯಬಹುದು. ಆದರೆ ನಿಜವಾದ ರಾಜ ಮತದಾರ. ಕೆಲ ವಿದೇಶಿ ಪತ್ರಕರ್ತರು ಸೇರಿಕೊಂಡು ನರೇಂದ್ರ ಮೋದಿ ಸರ್ಕಾರದ ವಿರುದ್ಧ ವ್ಯವಸ್ಥಿತ ಆರೋಪವೊಂದನ್ನು ಹೊರಿಸಿ, ಭಾರತದ ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯಲು ನಿರಂತರವಾಗಿ ಯತ್ನಿಸಿದ್ದರು. ಭಾರತವೀಗ ಪ್ರಜಾಪ್ರಭುತ್ವವಾಗಿ ಉಳಿದಿಲ್ಲ ಎಂದು ಅವರು ಪ್ರಚಾರ ಮಾಡುತ್ತಿದ್ದರು. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಚುನಾವಣೆಯು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯುತ್ತಿರುವುದನ್ನು ನೋಡಿಕೊಂಡೂ ಹೀಗೆ ಹೇಳುವುದಕ್ಕೆ ಒಂದೋ ನೀವು ಮೂರ್ಖರಾಗಿರಬೇಕು, ಇಲ್ಲಾ ಕುರುಡರಾಗಿರಬೇಕು.

ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡದೆ ಇದ್ದರೆ ಉಳಿಗಾಲವಿಲ್ಲ. ಆಡಳಿತವನ್ನು ಹೇಗೆ ನಡೆಸಬೇಕು ಎಂಬುದಕ್ಕೆ ರಾಜಕೀಯಕ್ಕೆ ಸಂಬಂಧಿಸಿದ ಎಲ್ಲಾ ಪುಸ್ತಕಗಳಲ್ಲೂ ಒಂದಲ್ಲಾ ಒಂದು ಪಾಠ ಇದ್ದೇ ಇರುತ್ತದೆ. ನಾನು ಓದಿದ ಅತ್ಯಂತ ಒಳ್ಳೆಯ ಉಪದೇಶ ಇಡೀ ಪುಸ್ತಕ ಆಗಿರಲಿಲ್ಲ, ಬದಲಿಗೆ ಅದೊಂದು ಪ್ಯಾರಾ ಅಷ್ಟೇ ಆಗಿತ್ತು. 7ನೇ ಶತಮಾನದಲ್ಲಿ ಡಮಾಸ್ಕಸ್ ಅನ್ನು ಆಳಿದ ಉಮಾಯದ್ ಕ್ಯಾಲಿಫ್, ಮೌವಿಯಾ ಇಬ್ನ್ ಸೂಫಿಯಾ ಹೇಳಿದ ಮಾತು ಇದು: 'ಎಲ್ಲಿ ನಾಲಿಗೆ ಸಾಕೋ ಅಲ್ಲಿ ಛಡಿಯನ್ನು ನಾನು ಬಳಸುವುದಿಲ್ಲ. ಎಲ್ಲಿ ಛಡಿ ಸಾಕೋ ಅಲ್ಲಿ ಖಡ್ಗ ಬಳಸುವುದಿಲ್ಲ. ನನ್ನ ಪ್ರಜೆಗಳ ಜೊತೆಗೆ ನನಗೆ ಒಂದೇ ಒಂದು ಕೂದಲಿನಷ್ಟಾದರೂ ನಂಟು ಇದೆ ಎಂದಾದರೆ, ಅದು ತುಂಡಾಗಲು ಯಾವತ್ತೂ ಬಿಡುವುದಿಲ್ಲ. ಅವರು ಎಳೆದರೆ ನಾನೇ ಸಡಿಲ ಬಿಡುತ್ತೇನೆ. ಅವರು ಸಡಿಲ ಬಿಟ್ಟರೆ ನಾನು ಎಳೆಯುತ್ತೇನೆ. ಇದೊಂದು ಮಾತಿನಲ್ಲಿ ಎಂಥಾ ರಾಜಕೀಯ ಪಾಠವಿದೆ!

ಪ್ರಜಾಪ್ರಭುತ್ವದಲ್ಲಿ ಮತದಾನದ ದಿನವೆಂಬುದು ಒಂದು ಸುದೀರ್ಘ ಪ್ರಕ್ರಿಯೆಯ ಅಂತ್ಯವಷ್ಟೆ. ಪ್ರಜಾಪ್ರಭುತ್ವವೆಂಬುದು ಅಧಿಕಾರ ಮತ್ತು ಜನರ ನಡುವೆ ನಂಬಿಕೆ, ವಿಶ್ವಾಸ, ಸಂವಾದ ಹಾಗೂ ಪರಸ್ಪರ ಕಲಿಕೆಯ ಮೂಲಕ ಬೆಸೆದುಕೊಂಡಿರುವ ಅನುದಿನದ ಸಂಬಂಧ. ಪ್ರಜಾಪ್ರಭುತ್ವವೆಂಬುದು ಡ್ಯಾನ್ಸ್ ಅಲ್ಲ, ಅದೊಂದು ಕೊರಿಯೋಗ್ರಫಿ. ಅಲ್ಲಿ ಜನರು ದಾರಿ ತೋರಿಸುತ್ತಾರೆ ಮತ್ತು ಸರ್ಕಾರ ದಾರಿಯ ನಕ್ಷೆಯನ್ನು ಸಿದ್ಧಪಡಿಸುತ್ತದೆ. ಇಬ್ಬರೂ ಸೇರಿಕೊಂಡು ಆ ದಾರಿಯಲ್ಲಿ ಎಲ್ಲಿ ಶಾಂತಿ, ಸಹಬಾಳ್ವೆ ಹಾಗೂ ನೆಮ್ಮದಿಯಿಂದ ಕೂಡಿದ ಒಳ್ಳೆಯ ಭವಿಷ್ಯವಿದೆಯೋ, ಎಲ್ಲಿ ಸಾಕಷ್ಟು ಆಹಾರ ಹಾಗೂ ಸಮೃದ್ಧಿಯಿದೆಯೋ ಆ ದಿಗಂತದತ್ತ ಕೈಕೈ ಹಿಡಿದು ಸಾಗುತ್ತಾರೆ.

(ಲೇಖಕರು: ಹಿರಿಯ ಪತ್ರಕರ್ತ)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 39

ಸಮಾಚಾರ ಸಣ್ಣದಲ್ಲ

ಭತ್ತ ಬೆಂಬಲ ಬೆಲೆ ರು.3100ಕ್ಕೆ ಹೆಚ್ಚಳ

ಭುವನೇಶ್ವರ: ಒಡಿಶಾದಲ್ಲಿ ಇದೀಗಷ್ಟೇ ನೂತನ ಸರಕಾರ ರಚನೆ ಮಾಡಿರುವ ಬಿಜೆಪಿ, ಮೊದಲಿಗೇ ರೈತರ ಹಿತಕಾಯುವ ಕೆಲಸ ಮಾಡಿದೆ. ಭತ್ತದ ಕನಿಷ್ಠ ಬೆಂಬಲ ಬೆಲೆಯನ್ನು(ಎಂಎಸ್‌ಪಿ) ಪ್ರತಿ ಕ್ವಿಂಟಲ್‌ಗೆ 3100 ರು.ಗೆ ಹೆಚ್ಚಿಸಿದೆ. ಬೆಂಬಲ ಬೆಲೆ ಹೆಚ್ಚಳ ಕ್ರಮ ಜಾರಿಗೊಳಿಸಲು ಸಂಬಂಧಿಸಿದ ಇಲಾಖೆಗೆ ಸೂಚಿಸಲಾಗಿದೆ. ಈ ಸಂಬಂಧ ಅತಿ ಶೀಘ್ರದಲ್ಲಿ ಸಮಿತಿಯನ್ನೂ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಹೇಳಿದ್ದಾರೆ. ಮಹಿಳಾ ಸಬಲೀಕರಣ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಹಿಂದಿನ ಬಿಜೆಡಿ ಸರಕಾರದ ಪ್ರಯತ್ನಗಳು ವಿಫಲವಾಗಿವೆ. ಹೊಸ ಸರಕಾರ 100 ದಿನಗಳಲ್ಲಿ ಸುಭದ್ರಾ ಯೋಜನೆ ಜಾರಿಗೆ ತರಲಿದೆ ಎಂದಿದ್ದಾರೆ.

ಪಾಕ್ ಕತ್ತೆ ಸಂಖ್ಯೆ 59 ಲಕ್ಷಕ್ಕೆ ಏರಿಕೆ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಕತ್ತೆಗಳ ಸಂಖ್ಯೆ 2023-24ರ ಆರ್ಥಿಕ ವರ್ಷದಲ್ಲಿ ಶೇ.1.72ರಷ್ಟು ಹೆಚ್ಚಳವಾಗಿದ್ದು, 59 ಲಕ್ಷಕ್ಕೆ ಏರಿಕೆಯಾಗಿದೆ! ಪಾಕ್

ಸರಕಾರ ಗುರುವಾರ ಆರ್ಥಿಕ ಸಮೀಕ್ಷೆ ಪ್ರಕಟಿಸಿದ್ದು, 2019-20ರಲ್ಲಿ 55 ಲಕ್ಷದಷ್ಟಿದ್ದ ಕತ್ತೆಗಳ ಸಂಖ್ಯೆ, 2020-21ರಲ್ಲಿ 56 ಲಕ್ಷಕ್ಕೇರಿತು. ಬಳಿಕ 2021-22ರಲ್ಲಿ 57 ಲಕ್ಷ, 2022-23ರಲ್ಲಿ 58 ಲಕ್ಷ ಹಾಗೂ 2023-24ರಲ್ಲಿ 59 ಲಕ್ಷಕ್ಕೆ ಏರಿಕೆಯಾಗಿದೆ. ಏತನ್ಮಧ್ಯೆ, ಕುದುರೆ ಹಾಗೂ ಹೇಸರಗತ್ತೆಗಳ ಸಂಖ್ಯೆ 5 ವರ್ಷಗಳಿಂದಲೂ ಸ್ವಲ್ಪವೂ ಬದಲಾವಣೆ ಆಗಿಲ್ಲ. ವಿಶ್ವದಲ್ಲೇ ಅತಿ ಹೆಚ್ಚು ಕತ್ತೆಗಳನ್ನು ಹೊಂದಿರುವ ದೇಶ ಪಾಕ್. ಚೀನಾಗೆ ಕತ್ತೆಗಳನ್ನು ರಫ್ತು ಮಾಡುವ ಮೂಲಕ ಗಣನೀಯ ಲಾಭ ಗಳಿಸಲಾಗುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. 2023-24ರಲ್ಲಿ ಪಾಕ್‌ನ ಜಿಡಿಪಿ ಪ್ರಗತಿ ದರ ಶೇ.3.5 ಎಂದು ಅಂದಾಜು ಮಾಡಲಾಗಿತ್ತು. ಆದರೆ, ಅದನ್ನು ಸಾಧಿಸಲು ಪಾಕ್ ಸರಕಾರಕ್ಕೆ ಸಾಧ್ಯವಾಗಿಲ್ಲ. ಸದ್ಯ ಜಿಡಿಪಿ ಪ್ರಗತಿ ಶೇ.2.38ರಷ್ಟು ಮಾತ್ರ ಸಾಧನೆಯಾಗಿದೆ.

ಕಟ್ಟಡಕ್ಕೆ ಬೆಂಕಿ: ಹಸುಳೆ ಸೇರಿ 5 ಸಜೀವ ದಹನ

ಘಾಜಿಯಾಬಾದ್: ಉತ್ತರ ಪ್ರದೇಶದ ಘಾಜಿಯಾಬಾದ್ ನಲ್ಲಿ 3 ಮಹಡಿಯ ಕಟ್ಟಡದಲ್ಲಿ ಬುಧವಾರ ತಡರಾತ್ರಿ ಅಗ್ನಿ ಅವಘಡವಾಗಿದ್ದು, ಏಳು ತಿಂಗಳ ಹಸುಳೆ ಸೇರಿದಂತೆ ಐವರು ಸಜೀವ ದಹನಗೊಂಡಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ. ಲೋನಿ ಪ್ರದೇಶದಲ್ಲಿರುವ ಕಟ್ಟಡದ ತಳಭಾಗದಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿದೆ. ಬಳಿಕ ಕಟ್ಟಡಕ್ಕೆ ಆವರಿಸಿದೆ. 2-3ನೇ ಮಹಡಿಗಳಲ್ಲಿದ್ದ ಐವರು ತಕ್ಷಣ ಹೊರಬರಲಾಗದೆ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಮೃತರಲ್ಲಿ ಏಳು ತಿಂಗಳ ಹಸುಳೆ, 7 ವರ್ಷದ ಬಾಲಕಿ, ಮಹಿಳೆಯರು, ವೃದ್ಧ ಸೇರಿದ್ದಾರೆ. ಬಳಿಕ ಬಹಳ ಶ್ರಮಪಟ್ಟು ಅಗ್ನಿಶಾಮಕ ಸಿಬ್ಬಂದಿ ಸ್ಥಳೀಯರ ಸಹಕಾರದಿಂದ ಬೆಂಕಿ ನಂದಿಸಿದ್ದಾರೆ. ಬೆಂಕಿ ಅವಘಡದಲ್ಲಿ ಒಬ್ಬ ಮಹಿಳೆ ಮತ್ತು ಬಾಲಕಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬೆಂಕಿ ಅವಘಡ ಹೇಗೆ ಸಂಭವಿಸಿದೆ ಎಂಬುದು ಇನ್ನಷ್ಟೇ ತಿಳಿಯಬೇಕಿದೆ. ಕಟ್ಟಡದಲ್ಲಿ ಥರ್ಮಾಕೋಲ್ ಫೋಮ್ ಮತ್ತು ಗಮ್ ಟಿನ್ ಸೇರಿದಂತೆ ರಾಸಾಯನಿಕಗಳ ಸಂಗ್ರಹ ಇದ್ದುದರಿಂದ ಬೆಂಕಿ ತೀವ್ರವಾಗಿತ್ತು.

ಶಾಸಕತ್ವ ತ್ಯಜಿಸಿದ ಸಿಕ್ಕಿಂ ಸಿಎಂ ಪತ್ನಿ

ಗ್ಯಾಂಗ್ಟಕ್: ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಅವರ ಪತ್ನಿ ಕೃಷ್ಣ ಕುಮಾರಿ ರೈ

ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದ ಮರು ದಿನವೇ ರಾಜೀನಾಮೆ ನೀಡಿದ್ದಾರೆ. ಸ್ಪೀಕರ್ ಎಂ.ಎನ್.ಶೆರ್ಪಾ ರಾಜೀನಾಮೆ ಅಂಗೀಕರಿಸಿದ್ದಾರೆ. ಈ ಬೆಳವಣಿಗೆ ಬಗ್ಗೆ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ ನಾಯಕರ್‍ಯಾರೂ ಪ್ರತಿಕ್ರಿಯೆ ನೀಡಿಲ್ಲ. ಶಾಸಕರಾಗಿ ಪ್ರಮಾಣವಚನ ಸ್ವೀಕರಿಸಿದ ಮರು ದಿನವೇ ರಾಜೀನಾಮೆ ನೀಡುವ ಹಿಂದಿನ ಉದ್ದೇಶದ ಬಗ್ಗೆ ತೀವ್ರ ಕುತೂಹಲ ಮೂಡಿದೆ. ಇತ್ತೀಚೆಗೆ ಮುಗಿದ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣ ಕುಮಾರಿ ರೈ ನಾಮ್ಚಿ-ಸಿಂಘಿತಂಗ್ ಕ್ಷೇತ್ರದಲ್ಲಿ ಸಿಕ್ಕಿಂ ಡೆಮೊಕ್ರೆಟಿಕ್ ಫ್ರಂಟ್ ಅಭ್ಯರ್ಥಿಯ ವಿರುದ್ಧ ಗೆಲುವು ಸಾಧಿಸಿದ್ದರು.

ನಾಗಪುರ ಕಾರ್ಖಾನೆ ಸ್ಫೋಟ; 5 ಸಾವು

ನಾಗಪುರ: ಮಹಾರಾಷ್ಟ್ರದ ನಾಗಪುರದ ಧಮ್ನಾ ಗ್ರಾಮದಲ್ಲಿರುವ ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಗುರುವಾರ ಮಧ್ಯಾಹ್ನ 1ರ ವೇಳೆ ದಿಢೀರ್ ಸ್ಫೋಟವಾಗಿದ್ದು, ಐವರು ಕಾರ್ಮಿಕರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಹಿಂಗನಾ ಪೊಲೀಸ್ ಠಾಣಾ ವ್ಯಾಪ್ತಿಯ ಚಾಮುಂಡಿ ಎಕ್ಸ್‌ಪ್ಲೋಸಿವ್ ಪ್ರೈ.ಲಿ.ನಲ್ಲಿ ಸ್ಫೋಟವಾಗಿದೆ. 4 ಮಹಿಳೆಯರು, ಒಬ್ಬ ಪುರುಷ ಮೃತಪಟ್ಟಿದ್ದಾರೆ. ಐದು ಮಂದಿ ಗಾಯಗೊಂಡಿದ್ದಾರೆ. ಕಾರ್ಮಿಕರು ಸ್ಫೋಟಕಗಳನ್ನು ಪ್ಯಾಕ್ ಮಾಡುತ್ತಿದ್ದಾಗ ಸ್ಫೋಟವಾಗಿದೆ. ಕಂಪನಿ ಮಾಲೀಕ ನಾಪತ್ತೆಯಾಗಿದ್ದು, ಆತನನ್ನು ಬಂಧಿಸಲು ಪೊಲೀಸರು ಬಲೆ ಬೀಸಿದ್ದಾರೆ. ಮಹಾರಾಷ್ಟ್ರದಲ್ಲಿ ಸ್ಫೋಟ ಅವಘಡ ಮರುಕಳಿಸುತ್ತಲೇ ಇವೆ. ಇದು ಕಾರ್ಮಿಕರ ಸುರಕ್ಷತೆ ಬಗ್ಗೆ ಆತಂಕಕ್ಕೆ ಹೆಚ್ಚಿಸಿದೆ. ಮೇ ತಿಂಗಳಲ್ಲಿ ದೊಂಬಿವಿಲಿಯಲ್ಲಿನ ಬಾಯ್ಲರ್ ಬ್ಲಾಸ್ಟ್ ಪ್ರಕರಣದಲ್ಲಿ 8 ಮಂದಿ ಸಾವನ್ನಪ್ಪಿ 50ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದರು.

ಕಾಶ್ಮೀರದಲ್ಲಿ ನಿಗ್ರಹ ದಳದ ಪೂರ್ಣ ಶಕ್ತಿ ಬಳಸಿ ಉಗ್ರರ ಹುಟ್ಟಡಗಿಸಿ | ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಇಲಾಖೆಗಳ ಸಭೆ ನಡೆಸಿದ ಪ್ರಧಾನಿ | ಕಾಶ್ಮೀರದಲ್ಲಿ ಭಯೋತ್ಪಾದನೆ ಮೂಲೋತ್ಪಾಟನೆಗೆ ಕಟ್ಟುನಿಟ್ಟು ಸೂಚನೆ

ಉಗ್ರರ ನಿರ್ಮೂಲನೆ; ಮೋದಿ ಸೂಚನೆ

ದೆಹಲಿ: ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ 3ನೇ ಅವಧಿಗೆ ಪ್ರಮಾಣ ವಚನ ಸ್ವೀಕರಿಸಿದ ದಿನವಾದ ಜೂ.9ರ ಭಾನುವಾರ ದಿಢೀರ್ ಎಂಬಂತೆ ಜಮ್ಮು ಮತ್ತು ಕಾಶ್ಮೀರದ ಹಲವೆಡೆ ಉಗ್ರ ಉಪಟಳ ಹೆಚ್ಚಿರುವುದು ಪ್ರಧಾನಿ ನರೇಂದ್ರ ಮೋದಿ ಸರಕಾರವನ್ನು ಬಡಿದೆಬ್ಬಿಸಿದೆ.

ಕಳೆದ 4 ದಿನಗಳಲ್ಲಿ ಕಾಶ್ಮೀರ ಕಣಿವೆಯ ವಿವಿಧೆಡೆ 4 ಭಯೋತ್ಪಾದಕ ದಾಳಿಗಳು ನಡೆದು ದೇಶದಲ್ಲಿ ಭಾರೀ ಚರ್ಚೆ ನಡೆಯುತ್ತಿರುವ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ರಾಷ್ಟ್ರೀಯ ಭದ್ರತಾ ಮಂಡಳಿ ಮತ್ತು ಇತರೆ ಭದ್ರತಾ ಇಲಾಖೆಗಳ ತುರ್ತು ಸಭೆ ನಡೆಸಿದರು.

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರಿಂದ ಸಭೆಯಲ್ಲಿ ಪ್ರಧಾನಿ ಮೋದಿ ಮಾಹಿತಿ ಪಡೆದುಕೊಂಡರು. ಅಲ್ಲದೇ ಗುಪ್ತಚರ ದಳ ಮತ್ತಿತರ ಭದ್ರತೆಗೆ ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು, ಕಾಶ್ಮೀರದಲ್ಲಿ ಸದ್ಯ ನಡೆದಿರುವ ಕಾರ್ಯಾಚರಣೆ ಮತ್ತು ಭಯೋತ್ಪಾದಕರ ಸರಣಿ ದುಷ್ಕೃತ್ಯಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಸಭೆಗೆ ನೀಡಿದರು.

ಆ ಬಳಿಕ ಕಾಶ್ಮೀರ ಕಣಿವೆಯಲ್ಲಿ ಭಯೋತ್ಪಾದನೆ ಮೂಲೋತ್ಪಾಟನೆಗೆ ಕೈಗೊಳ್ಳಲೇಬೇಕಾದ ಕ್ರಮಗಳ ಕುರಿತು ಸಭೆಯಲ್ಲಿ ಉನ್ನತ ಅಧಿಕಾರಿಗಳ ಸಭೆಯಲ್ಲಿ ಸವಿಸ್ತಾರವಾಗಿ ಚರ್ಚೆ ನಡೆಸಿದ ಪ್ರಧಾನಿ ಮೋದಿ, ಭಯೋತ್ಪಾದನಾ ಚಟುವಟಿಕೆಗಳನ್ನು ಇಲ್ಲವಾಗಿಸಲು ನಮ್ಮಲ್ಲಿ ಇರುವ ಸಂಪೂರ್ಣ ಶಕ್ತಿಯನ್ನು ಬಳಸಿಕೊಳ್ಳಬೇಕಿದೆ. ಉಗ್ರ ನಿಗ್ರಹ ಪಡೆಯ ಸಂಪೂರ್ಣ ಬಲವನ್ನು ತಕ್ಷಣವೇ ಕಾಶ್ಮೀರಕ್ಕೆ ನಿಯೋಜಿಸಿ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಮತ್ತು ಇತರೆ ಉನ್ನತ ಅಧಿಕಾರಿಗಳ ಜತೆ ಗುರುವಾರ ದೆಹಲಿಯಲ್ಲಿ ಭದ್ರತಾ ಸಮಿತಿಗೆ ಸಂಬಂಧಿಸಿದ ಮಹತ್ವದ ಸಭೆ ನಡೆಸಿದರು. ವಿದೇಶಾಂಗ ಸಚಿವ ಜೈಶಂಕರ್ ಕೂಡಾ ಹಾಜರಿದ್ದರು.

ಬದಲಾದ ಕಾಶ್ಮೀರ: ದಿಢೀರ್ ಹೆಚ್ಚಿದ ದಾಳಿ

ಕಳೆದ 4 ದಿನಗಳಲ್ಲಿ ಕಾಶ್ಮೀರ ಕಣಿವೆಯ ವಿವಿಧೆಡೆ 4 ಭಯೋತ್ಪಾದಕ ದಾಳಿಗಳನ್ನು ಪಾಕಿಸ್ತಾನ ಮೂಲದ ಲಷ್ಕರೆ ತಯ್ಯಬಾ ಉಗ್ರ ಸಂಘಟನೆಯ ಅಂಗವಾದ ಟಿಆರ್‌ಎಫ್ ನಡೆಸಿದೆ. ಯೋಧರೊಬ್ಬರು ಹುತಾತ್ಮರಾದರೆ, 10 ಯಾತ್ರಿಕರು ಸಾವಿಗೀಡಾದರು. ಕಾಶ್ಮೀರ ವಿಶೇಷ ಪೊಲೀಸ್ ಅಧಿಕಾರಿ ಮತ್ತು ಭದ್ರತಾ ಪಡೆಯ ಆರು ಯೋಧರು ಗಾಯಗೊಂಡರು. ಕಾರ್ಯಾಚರಣೆಯಲ್ಲಿ ಮೂವರು ಉಗ್ರರನ್ನು ಹೊಡೆದುರುಳಿಸಲಾಗಿದೆ.

ಜೂ.9 ರಿಯಾಸಿ ದಾಳಿ: ಶಿವಖೋರಿಯಿಂದ ಬೇಸ್ ಕ್ಯಾಂಪ್‌ಗೆ ವಾಪಸ್ಸಾಗುತ್ತಿದ್ದ ವೈಷ್ಣೋದೇವಿ ಭಕ್ತರಿದ್ದ ಬಸ್ಸನ್ನು ಗುರಿಯಾಗಿಸಿ ಉಗ್ರರು ದಾಳಿ ಮಾಡಿ 10 ಜನರ ಸಾವಿಗೆ ಕಾರಣವಾದರು. ಘಟನೆಯಲ್ಲಿ 42 ಮಂದಿ ಗಾಯಗೊಂಡಿದ್ದರು.

ಜೂ.10 ಕಥುವಾ ದಾಳಿ: ಕಥುವಾ ಜಿಲ್ಲೆಗೆ ನುಸುಳಿದ ಭಯೋತ್ಪಾದಕರು, ಗ್ರಾಮವೊಂದರಲ್ಲಿ ಜನರ ಮೇಲೆ ಗುಂಡಿನ ಮಳೆಗರೆದಿದ್ದು, ಒಬ್ಬ ನಾಗರಿಕ ಗಾಯಗೊಂಡಿದ್ದ. ಭದ್ರತಾ ಸಿಬ್ಬಂದಿಗಳ ಮೇಲೆ ಗ್ರನೇಡ್ ಎಸೆದ ಉಗ್ರನನ್ನ ಭದ್ರತಾ ಪಡೆ ಕೊಂದಿತ್ತು.

ಜೂ.11 ದೋಡಾ ಚೆಕ್‌ಪೋಸ್ಟ್: ದೋಡಾ ಜಿಲ್ಲೆಯಲ್ಲಿನ ಸೇನಾ-ಪೊಲೀಸ್ ಚೆಕ್‌ಪೋಸ್ಟ್ ಮೇಲೆ ಉಗ್ರರು ದಾಳಿ ನಡೆಸಿ ಒಬ್ಬರು ವಿಶೇಷ ಪೊಲೀಸ್ ಅಧಿಕಾರಿ ಮತ್ತು ಐವರು ಯೋಧರನ್ನು ಗಾಯಗೊಳಿಸಿದರು. ಭದ್ರತಾ ಸಿಬ್ಬಂದಿ ತಿರುಗೇಟು ನೀಡಿದ್ದು, ಒಬ್ಬ ಉಗ್ರನನ್ನು ಹೊಡೆದುರುಳಿಸಲಾಗಿತ್ತು. ಕಾರ್ಯಾಚರಣೆ ವೇಳೆ ಒಬ್ಬರು ಸಿಆರ್‌ಪಿಎಫ್ ಸಿಬ್ಬಂದಿ ಹುತಾತ್ಮರಾದರು.

ಭಯೋತ್ಪಾದಕ ಕೃತ್ಯ ಇನ್ನಿಲ್ಲದಂತೆ ತೊಡೆದು ಹಾಕಲು ಭದ್ರತಾ ಪಡೆಗಳಲ್ಲಿರುವ ಎಲ್ಲಾ ಬಗೆಯ ತಂತ್ರಜ್ಞಾನ, ತಂತ್ರಗಾರಿಕೆ, ಸಂಪನ್ಮೂಲಗಳನ್ನು ಬಳಸಬೇಕಿದೆ. ಉಗ್ರರ ಯೋಜಿತ ದಾಳಿಗಳ ವಿರುದ್ಧ ಭದ್ರತಾ ಪಡೆಗಳೂ ಕೂಡಾ ಅಷ್ಟೇ ಸಂಘಟಿತವಾಗಿ ಉಗ್ರ ನಿಗ್ರಹ ಕಾರ್ಯಾಚರಣೆಯನ್ನು ಕೈಗೊಳ್ಳಬೇಕು. ಅಷ್ಟೇ ಬಲವಾಗಿ ತಿರುಗೇಟು ನೀಡಬೇಕು. ಸಂಘಟಿತ ಹೋರಾಟ ಅಗತ್ಯ.

- ನರೇಂದ್ರ ಮೋದಿ
ಪ್ರಧಾನಿ

ಶಾ, ಕಾಶ್ಮೀರ ಲೆ.ಗವರ್ನರ್ ಜತೆಗೂ ಮೋದಿ ಚರ್ಚೆ

ಗೃಹ ಸಚಿವ ಅಮಿತ್ ಶಾ ಅವರ ಜತೆಗೂ ಪ್ರಧಾನಿ ಮೋದಿ ಭಯೋತ್ಪಾದಕರನ್ನು ಮಟ್ಟ ಹಾಕುವ ತುರ್ತು ಅಗತ್ಯದ ಬಗ್ಗೆ ಮಾತನಾಡಿದರು. ಉಗ್ರರ ವಿರುದ್ಧದ ಕ್ರಮ ಹಾಗೂ ಭದ್ರತಾ ಸಿಬ್ಬಂದಿಗಳ ಯೋಜನೆ ಬಗ್ಗೆ ಚರ್ಚಿಸಿದರು. ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಬಳಿ ಪ್ರಧಾನಿ ಸ್ಥಳಿಯ ಆಡಳಿತ ಯಾವೆಲ್ಲ ಕ್ರಮ ಕೈಗೊಂಡಿದೆ ಎಂಬ ಮಾಹಿತಿಯನ್ನೂ ಪಡೆದರು.

ಕಾಶ್ಮೀರ: ಉಗ್ರರ ವಿರುದ್ಧ ಸತತ ಕಾರ್ಯಾಚರಣೆ

ಶ್ರೀನಗರ: ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಭಯೋತ್ಪಾದನೆ ನಡೆಸಿದ ಪಾಕಿಸ್ತಾನದ ಟಿಆರ್‌ಎಫ್ ಉಗ್ರ ಸಂಘಟನೆ ಪ್ರೇರೇಪಿತ ಉಗ್ರರನ್ನು ಕೊನೆಗೊಳಿಸಲು ಗುರುವಾರವೂ ಕಾರ್ಯಾಚರಣೆ ನಡೆಸಲಾಗಿದ್ದು, ಈ ಸಂದರ್ಭ ಭದ್ರತಾಪಡೆಯ ಯೋಧರೊಬ್ಬರು ಗಾಯಗೊಂಡಿದ್ದಾರೆ. ಕಳೆದ 3 ದಿನದಲ್ಲಿ ಕಣಿವೆ ರಾಜ್ಯದಲ್ಲಿ ನಡೆದ 4ನೇ ಕಾರ್ಯಾಚರಣೆ ಇದೆ. ಭಲೇಸಾ ಗ್ರಾಮದ ದಟ್ಟ ಅರಣ್ಯವಿರುವ ಕೋಟಾ ಟಾಪ್ ಭಾಗದಲ್ಲಿ ಬುಧವಾರ ರಾತ್ರಿ 7.40ರಲ್ಲಿ ಕಾರ್ಯಾಚರಣೆ ಆರಂಭಿಸಿದ್ದು, ಗುರುವಾರವೂ ಮುಂದುವರಿದಿದೆ. ಉಗ್ರರು ಅಡಗಿರುವ ಪ್ರದೇಶದಲ್ಲಿ ಕಾರ್ಯಾಚರಣೆ ತೀವ್ರಗೊಳಿಸಲು ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ.

ರೇಖಾಚಿತ್ರ

ದೋಡಾ ಜಿಲ್ಲೆಯಲ್ಲಿನ 2 ಉಗ್ರ ದಾಳಿಗಿಗೆ ಕಾರಣವಾಗಿರುವ ನಾಲ್ವರು ಭಯೋತ್ಪಾದಕರ ರೇಖಾಚಿತ್ರಗಳನ್ನು ಕಾಶ್ಮೀರ ಪೊಲೀಸರು ಗುರುವಾರ ಬಿಡುಗಡೆ ಮಾಡಿದ್ದಾರೆ. ಉಗ್ರರ ಇರುವಿಕೆ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ ಘೋಷಿಸಿದ್ದಾರೆ. ಪ್ರತಿ ಉಗ್ರರ ಮಾಹಿತಿಗೂ ತಲಾ 5 ಲಕ್ಷ ರು. ನಗದು ಬಹುಮಾನ ಘೋಷಿಸಲಾಗಿದೆ.

ಅರುಣಾಚಲ ಪ್ರದೇಶ: ಸಿಎಂ ಪೇಮಾ ಖಂಡು ಪ್ರಮಾಣ

ಇಟಾನಗರ: ಅರುಣಾಚಲ ಪ್ರದೇಶ ಮುಖ್ಯಮಂತ್ರಿಯಾಗಿ ಪೆಮಾ ಖಂಡು ಗುರುವಾರ ಪ್ರಮಾಣವಚನ ಸ್ವೀಕರಿಸಿದರು. ಅದರೊಂದಿಗೆ ಮೂರನೇ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾದರು. 2016ರಲ್ಲಿ ಪೆಮಾ ಖಂಡು ಮೊದಲ ಬಾರಿಗೆ ಸಿಎಂ ಆಗಿದ್ದರು.

ಆ ಬಳಿಕ, ಚೌನಾ ಮೇ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರ ಜತೆಗೇ 11 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿ ಸಂಪುಟಕ್ಕೆ ಸೇರ್ಪಡೆಗೊಂಡರು. ಇಟಾನಗರದಲ್ಲಿ ಗುರುವಾರ ನಡೆದ ಸರಳ ಸಮಾರಂಭದಲ್ಲಿ ಅರುಣಾಚಲ ಪ್ರದೇಶ ರಾಜ್ಯಪಾಲ ಕೆ.ಟಿ.ಪರ್ನಾಯಕ್ ಅವರು ಮುಖ್ಯಮಂತ್ರಿ ಮತ್ತು ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಜಯಭೇರಿ ಬಾರಿಸಿದ ವಾರಗಳ ನಂತರ ಅರುಣಾಚಲದಲ್ಲಿ ನೂತನ ಸರಕಾರ ರಚನೆಯಾಗಿದೆ.

ಕೇಂದ್ರ ಸಚಿವರಾದ ಅಮಿತ್ ಶಾ, ಜೆ.ಪಿ.ನಡ್ಡಾ ಮತ್ತು ಕಿರಣ್ ರಿಜಿಜು ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸೇರಿದಂತೆ ಹಲವು ಗಣ್ಯರು ಸಮಾರಂಭದಲ್ಲಿದ್ದರು. ಸಾರ್ವತ್ರಿಕ ಚುನಾವಣೆ ಜತೆಗೇ ಒಟ್ಟು 60 ಸದಸ್ಯ ಬಲದ ಅರುಣಾಚಲ ಪ್ರದೇಶದ ವಿಧಾನಸಭೆಯ 50 ಸ್ಥಾನಗಳಿಗೂ ಚುನಾವಣೆ ನಡೆಯಿತು. ಅದಕ್ಕೂ ಮುನ್ನವೇ 10 ಸ್ಥಾನಗಳಿಗೆ ಬಿಜೆಪಿ ಶಾಸಕರು ಅವಿರೋಧ ಆಯ್ಕೆಯಾಗಿದ್ದರು. ಬಿಜೆಪಿ ಒಟ್ಟು 46 ಸ್ಥಾನ ಗೆದ್ದುಕೊಂಡಿದೆ.

ನೂತನ ಸಚಿವರು

ಬಿಯುರಾಮ್ ವಾಘೆ, ನ್ಯಾಟೊ ಡುಕಾಮ್, ಗ್ಯಾಬ್ರಿಯಲ್ ಡೆನ್ವಾಂಗ್ ವಾಂಗ್ಸು, ವಾಂಕಿ ಲೋವಾಂಗ್, ಪಸಾಂಗ್ ದೋರ್ಜಿ ಸೋನಾ, ಮಾಮಾ ನಟುಂಗ್, ದಸಾಂಗ್ಲು ಪುಲ್, ಬಾಲೋ ರಾಜಾ, ಕೆಂಟೋ ಜಿನಿ ಮತ್ತು ಓಜಿಂಗ್ ಟೇಸಿಂಗ್.

ಮೊದಲ ಭರವಸೆ ಈಡೇರಿಸಿದ ಬಿಜೆಪಿ ಸರಕಾರ

ಪುರಿ ಜಗನ್ನಾಥ ದೇಗುಲದ ನಾಲ್ಕೂ ದ್ವಾರ ಭಕ್ತರಿಗೆ ಮುಕ್ತ

ಭುವನೇಶ್ವರ: ಒಡಿಶಾದ ಪುರಿಯಲ್ಲಿರುವ ಶ್ರೀಜಗನ್ನಾಥ ದೇವಾಲಯದ ನಾಲಕ್ಕೂ ದ್ವಾರಗಳನ್ನು ಗುರುವಾರ ಮತ್ತೆ ತೆರೆಯಲಾಗಿದ್ದು, ನಾಲ್ಕೂ ದಿಕ್ಕುಗಳಿಂದ ಭಕ್ತರ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗಿದೆ. ಚುನಾವಣೆಗೂ ಮುನ್ನ ಬಿಜೆಪಿ ನೀಡಿದ್ದ ಮೊದಲ ಭರವಸೆಯನ್ನು ನೂತನ ಸರಕಾರ ಆದ್ಯತೆ ಮೇರೆಗೆ ಈಡೇರಿಸಿದೆ.

ಒಡಿಶಾದಲ್ಲಿ ಇದೇ ಮೊದಲ ಬಾರಿಗೆ ಸರಕಾರ ರಚನೆ ಮಾಡಿರುವ ಬಿಜೆಪಿ, ದಿಟ್ಟ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಮೊದಲ ಸಂಪುಟ ಸಭೆಯಲ್ಲಿ ದೇವಸ್ಥಾನದ ನಾಲ್ಕೂ ಬಾಗಿಲುಗಳನ್ನು ಭಕ್ತರಿಗೆ ಮುಕ್ತವಾಗಿಸುವ ನಿರ್ಧಾರ ಕೈಗೊಂಡಿದ್ದಾರೆ. ಅಲ್ಲದೇ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಮುಖ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಲು 500 ಕೋಟಿ ರು.ಗಳ ವಿಶೇಷ ನಿಧಿ ಸ್ಥಾಪನೆಯನ್ನೂ ಘೋಷಿಸಿದ್ದಾರೆ. ಗುರುವಾರ ಬೆಳಗ್ಗೆ 6.30ಕ್ಕೆ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ಸಂಪುಟ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳು ಜಗನ್ನಾಥ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿ ದೇಗುಲದ ನಾಲ್ಕೂ ಬಾಗಿಲುಗಳನ್ನು ತೆರೆಯುವ ಪ್ರಕ್ರಿಯೆಯಲ್ಲಿ ಭಾಗಿಯಾದರು. ಈ ಸಂದರ್ಭ ಪುರಿ ಕ್ಷೇತ್ರದ ಸಂಸದ ಸಂಬಿತ್ ಪಾತ್ರ ಮತ್ತು ಶಾಸಕರು ಹಾಜರಿದ್ದರು. ಜಗನ್ನಾಥ ದೇವಾಲಯದ ಅಭಿವೃದ್ಧಿಗೆ ಮತ್ತು ಇತರೆ ಕೆಲಸಗಳಿಗೆ ಮುಂದಿನ ರಾಜ್ಯ ಬಜೆಟ್‌ನಲ್ಲಿ ನಿಧಿಯನ್ನು ಮೀಸಲಿಡಲಿದ್ದೇವೆ ಎಂದರು. ಕರೋನಾ ವ್ಯಾಪಕವಾಗಿದ್ದಾಗ ಜಗನ್ನಾಥನ ದೇವಾಲಯದ ಬಾಗಿಲು ಮುಚ್ಚಲು ಕ್ರಮ ಕೈಗೊಂಡಿದ್ದ ಸಿಎಂ ನವೀನ್ ಪಟ್ನಾಯಕ್ ಸರಕಾರ, ನಂತರದಲ್ಲಿ ಒಂದು ಬಾಗಿಲು ತೆರೆಯಲಷ್ಟೇ ಅವಕಾಶ ನೀಡಿತ್ತು. ಪರಿಣಾಮ ಲಕ್ಷಾಂತರ ಸಂಖ್ಯೆಯಲ್ಲಿ ಬರುವ ಭಕ್ತರಿಗೆ ದೇಗುಲ ಪ್ರವೇಶ ಕಷ್ಟವಾಗಿತ್ತು.

ಸಿಕ್ಕಿಂ: ಮಳೆ-ಭೂಕುಸಿತ, 4 ಸಾವು

ಗ್ಯಾಂಗ್ಟಕ್: ಈಶಾನ್ಯದ ರಾಜ್ಯ ಸಿಕ್ಕಿಂನಲ್ಲಿ ಭಾರಿ ಮಳೆಯಿಂದಾಗಿ ಪ್ರವಾಹ ಉಂಟಾಗಿದೆ. ತೀಸ್ತಾ ನದಿ ತುಂಬಿ ಹರಿಯುತ್ತಿದೆ. ಕೆಲವೆಡೆ ಭೂಕುಸಿತವಾಗಿದ್ದು, ನಾಲ್ವರು ಸಾವಿಗೀಡಾಗಿದ್ದಾರೆ. ಹಲವರು ಕಾಣೆಯಾಗಿದ್ದಾರೆ.

ಉತ್ತರ ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲಿ ಭಾರಿ ಭೂಕುಸಿತವಾಗಿದೆ. ಹಲವು ಮನೆಗಳು ಕುಸಿದಿವೆ. ರಸ್ತೆಗಳೂ ಕುಸಿದಿದ್ದು, ವಾಹನ ಸಂಚಾರ ಸ್ಥಗಿತವಾಗಿದೆ. ವಿದ್ಯುತ್ ಕಂಬಗಳು ಕೊಚ್ಚಿಹೋಗಿದ್ದು, ವಿದ್ಯುತ್ ಸರಬರಾಜು ಇಲ್ಲವಾಗಿದೆ. ಪಕ್ಷೆಪ್ ಪ್ರದೇಶದಲ್ಲಿ ಒಬ್ಬನ ಮೃತದೇಹ ಪತ್ತೆಯಾಗಿದೆ, ಇಬ್ಬರು ಕಾಣೆಯಾಗಿದ್ದಾರೆ. ಅಂಬಿತಂಗ್ ಪ್ರದೇಶದಲ್ಲಿ ಮೂವರು ನಾಪತ್ತೆಯಾಗಿದ್ದಾರೆ. ಸಾವಿರಾರು ಜನರು ಆಶ್ರಯ ಕಳೆದುಕೊಂಡಿದ್ದಾರೆ. ಜನರ ರಕ್ಷಣೆಗೆ ಎಸ್‌ಡಿಆರ್‌ಎಫ್ ತಂಡ ಮಂಗನ್ ಜಿಲ್ಲೆಗೆ ಧಾವಿಸಿದೆ. ರಕ್ಷಣಾ ಕಾರ್ಯ ನಡೆದಿದೆ.

ಮಜ್ವಾ ಗ್ರಾಮದಲ್ಲಿ ಭಾರಿ ಮಳೆ ಪ್ರವಾಹಕ್ಕೆ ಮೂವರು ಮೃತಪಟ್ಟಿದ್ದು ಸಿಎಂ ಪ್ರೇಮ್ ಸಿಂಗ್ ತಮಾಂಗ್ ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರು. ಪರಿಹಾರ ಘೋಷಿಸಿದ್ದಾರೆ. ಭಾರಿ ಪ್ರವಾಹ ಮತ್ತು ಭೂಕುಸಿತದಿಂದ ಉತ್ತರ ಸಿಕ್ಕಿಂನ ಹಲವೆಡೆ ಸಂಪರ್ಕ ಕಡಿತಗೊಂಡಿದ್ದು ಜಿಲ್ಲಾಡಳಿತದಿಂದ ಜನರ ರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸಜೀವ ದಹನದ ಮೃತದೇಹಗಳ ಗುರುತಿಸಲು ಡಿಎನ್‌ಎ ಟೆಸ್ಟ್

ಕುವೈತ್: ಶವ ತರಲು ವಾಯುಪಡೆ ವಿಮಾನ

ದೆಹಲಿ: ಕುವೈತ್‌ನ ಮಂಗಾಫ್ ಪ್ರದೇಶದಲ್ಲಿ ನಡೆದ ಭೀಕರ ಅಗ್ನಿ ದುರಂತದಲ್ಲಿ 45 ಭಾರತೀಯರು ಸಜೀವ ದಹನವಾಗಿದ್ದಾರೆ. ಮೃತದೇಹಗಳನ್ನು ಭಾರತಕ್ಕೆ ತರಲು ವಾಯುಪಡೆಯ ವಿಮಾನಗಳು ತೆರಳಿವೆ. ಪ್ರಧಾನಿ ಸೂಚನೆ ಮೇರೆಗೆ ವಿದೇಶಾಂಗ ಇಲಾಖೆ ಸಹಾಯಕ ಸಚಿವ ಕೀರ್ತಿ ವರ್ಧನ್ ಸಿಂಗ್, ಕುವೈತ್‌ಗೆ ತೆರಳಿ ಸಂತ್ರಸ್ತರ ನೆರವಿಗೆ ಸೇವೆ ಸಲ್ಲಿಸುತ್ತಿದ್ದಾರೆ.

ಬುಧವಾರ ನಸುಕಿನಲ್ಲಿ 195 ಕಾರ್ಮಿಕರು ವಾಸವಿದ್ದ 6 ಮಹಡಿಗಳ ಕಟ್ಟಡದಲ್ಲಿ ಅಡುಗೆ ಮನೆಯಲ್ಲಿ ಹೊತ್ತಿ ಬೆಂಕಿ ಇಡೀ ಕಟ್ಟಡಕ್ಕೆ ವ್ಯಾಪಿಸಿ 49 ಮಂದಿಯನ್ನು ಆಪೋಷನ ತೆಗೆದುಕೊಂಡಿದೆ. ಸಜೀವ ದಹನವಾದವರಲ್ಲಿ 45 ಮಂದಿ ಭಾರತೀಯರೇ ಆಗಿದ್ದಾರೆ ಎಂಬುದು ಡಿಎನ್‌ಎ ಪರೀಕ್ಷೆ ಮತ್ತು ಗುರುತು ಪತ್ತೆ ಮೂಲಕ ಖಚಿತವಾಗಿದೆ. ಕೇರಳ ಮೂಲದ ಕಟ್ಟಡ ನಿರ್ಮಾಣ ಉದ್ಯಮಿಯ ಒಡೆತನದ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಅವಘಡಕ್ಕೆ ಮಾಲೀಕನ ನಿರ್ಲಕ್ಷ್ಯವೇ ಕಾರಣ ಎಂದು ಕುವೈತ್ ಉಪ ಪ್ರಧಾನಿಯೇ ಆರೋಪಿಸಿದ ಬಳಿಕ ಕಟ್ಟಡದ ಮಾಲೀಕನನ್ನು ಕುವೈತ್ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೇರಳದವರೇ ಅಧಿಕ

ಮೃತರಲ್ಲಿ 24 ಜನರು ಕೇರಳದವರು. ಕೇರಳದ ಕಾರ್ಮಿಕರಲ್ಲಿ 7 ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಗುರುವಾರ ಕೇರಳ ಸರಕಾರ ವಿಶೇಷ ಸಭೆ ನಡೆಸಿ ಕುವೈತ್ ಅವಘಡದಲ್ಲಿ ಮೃತರಾದ ಕೇರಳ ಮೂಲದವರ ಕುಟುಂಬಕ್ಕೆ ತಲಾ 5 ಲಕ್ಷ ರು. ಪರಿಹಾರ ಹಾಗೂ ಗಾಯಾಳುಗಳಿಗೆ 1 ಲಕ್ಷ ರು. ಚಿಕಿತ್ಸಾ ಸಹಾಯ ನೀಡುವುದಾಗಿ ಘೋಷಿಸಿದೆ. ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರನ್ನು ಸಂತ್ರಸ್ತರ ನೆರವಿಗಾಗಿ ಕುವೈತ್‌ಗೆ ಕಳುಹಿಸಲು ರಾಜ್ಯ ಸರಕಾರ ನಿರ್ಧರಿಸಿದೆ. ತಮಿಳುನಾಡು-5 ಹಾಗೂ ಉತ್ತರಪ್ರದೇಶ, ಪಾಕಿಸ್ತಾನ, ಫಿಲಿಪಿನೊ, ಈಜಿಪ್ಟಿಯನ್ ಮತ್ತು ನೇಪಾಳದವರು ಸಾವಿಗೀಡಾಗಿದ್ದಾರೆ ಎಂದು ತಿಳಿದು ಬಂದಿದೆ. ಗಾಯಗೊಂಡ ಐವರು ಭಾರತೀಯರು ಸುರಕ್ಷಿತವಾಗಿದ್ದಾರೆ.

ಮಹಾರಾಷ್ಟ್ರ, ಜಾರ್ಖಂಡ, ಹರಿಯಾಣ ಮತ ಅಕ್ಟೋಬರ್-ಡಿಸೆಂಬರ್‌ಗೆ

ವಿಧಾನಸಭಾ ಚುನಾವಣೆ ಬಿಜೆಪಿ ಆತಂಕ

ದೆಹಲಿ: ಅಕ್ಟೋಬರ್‌ನಿಂದ ಡಿಸೆಂಬರ್ ತಿಂಗಳ ಮಧ್ಯದಲ್ಲಿ ಮಹಾರಾಷ್ಟ್ರ, ಜಾರ್ಖಂಡ ಹರಿಯಾಣ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು ಮೈತ್ರಿ ಪಕ್ಷಗಳ ನಡುವೆ ತಂತ್ರಗಾರಿಕೆ ಚರ್ಚೆ ನಡೆಯುತ್ತಿದೆ. ಲೋಕಸಭೆ ಚುನಾವಣೆಯಲ್ಲಿ ಹಿನ್ನಡೆ ಬಿಜೆಪಿ ಪಾಳಯದಲ್ಲಿ ಆತಂಕ ಹೆಚ್ಚಿಸಿದೆ.

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಹಾಯುತಿ ಒಕ್ಕೂಟದ ಗೆಲುವು ಈ ಬಾರಿ ಅಂದುಕೊಂಡಷ್ಟು ಸುಲಭವಾಗಿಲ್ಲ ಎಂಬುದು ಲೋಕಸಭಾ ಚುನಾವಣೆಯ ಫಲಿತಾಂಶ ತಿಳಿಸುತ್ತಿದೆ. ಚುನಾವಣೆ ಸೋಲಿನ ಅವಲೋಕನ ಸಭೆಯಲ್ಲಿ '400' ಪಾರ್, ಸಂವಿಧಾನ ಬದಲಾವಣೆಯಂತಹ ತಪ್ಪುದಾರಿಗೆಳೆಯುವ ಮಾತುಗಳು ಮಹಾರಾಷ್ಟ್ರ ಮತದಾರರ ಮೇಲೆ ಭಾರಿ ಪರಿಣಾಮ ಬೀರಿದೆ. ವಿಶೇಷವಾಗಿ ದಲಿತ ಮತಗಳ ಮೇಲೆ ಪ್ರಭಾವ ಬೀರಿದೆ. ಜತೆಗೆ ಈರುಳ್ಳಿ ರಫ್ತು ಮೇಲಿನ ನಿರ್ಬಂಧ, ಸೋಯಾಬೀನ್ ಮತ್ತು ಹತ್ತಿ ಬೆಲೆ ಸೇರಿ ರೈತ ಸಂಬಂಧಿ ಪ್ರತಿಭಟನೆಗಳು, ಸಮಸ್ಯೆಗಳು ಕೂಡ ಮಹಾರಾಷ್ಟ್ರದಲ್ಲಿ ಹಿನ್ನಡೆಗೆ ಕಾರಣವಾಗಿದೆ ಎಂದು ಸಿಎಂ ಏಕನಾಥ ಶಿಂಧೆ ಹೇಳಿದ್ದರು.

ಪ್ರಭಾವ ಬೀರಿದ ವಿಷಯ

ಬುಡಕಟ್ಟು, ಜಾಟ್, ದಲಿತ ಸಮುದಾಯ ಮತಗಳು, ಕೃಷಿ ಕಾಯ್ದೆ, ರೈತ ಪ್ರತಿಭಟನೆ, ಈರುಳ್ಳಿ ರಫ್ತು, ಉತ್ಪ್ರೇಕ್ಷಿತ ಚುನಾವಣಾ ಪ್ರಚಾರಗಳು ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್‌ನಲ್ಲಿ ಬಿಜೆಪಿಗೆ ಭಾರಿ ಹೊಡೆತ ಕೊಟ್ಟಿವೆ. ಹೀಗಾಗಿ ಈ ಮೂರು ರಾಜ್ಯಗಳ ವಿಧಾನಸಭಾ ಚುನಾವಣೆ ಎದುರಿಸಲು ಹೊಸ ತಂತ್ರಗಾರಿಕೆ ಅಗತ್ಯವಾಗಿದೆ.

2019ರ ಲೋಕಸಭೆಯಲ್ಲಿ ಹರಿಯಾಣದಲ್ಲಿ ಕ್ಲೀನ್‌ಸ್ವೀಪ್ ಮಾಡಿದ್ದ ಬಿಜೆಪಿ ಈ ಬಾರಿ 5 ಸೀಟು ಮಾತ್ರ ಗೆಲ್ಲಲು ಸಾಧ್ಯವಾಗಿದೆ. ಆದರೆ ಕಾಂಗ್ರೆಸ್ ಶೂನ್ಯದಿಂದ 5 ಸೀಟು ಗೆಲ್ಲುವಲ್ಲಿ ಯಶಸ್ವಿ ಕಂಡಿದ್ದು ಜಾಟ್ ಸಮುದಾಯದ ಮತಗಳು ಕಾಂಗ್ರೆಸ್‌ಗೆ ಮೀಸಲಾಗಿ ಉಳಿದಿವೆ. 22% ಮತಗಳನ್ನು ಹೊಂದಿರುವ ಪ್ರಭಾವಿ ಸಮುದಾಯ ಜಾಟ್ ಮತಗಳನ್ನು ಒಗ್ಗೂಡಿಸುವಲ್ಲಿ ಬಿಜೆಪಿ ಸೋತಿದೆ.

ಹೇಮಂತ್ ಸೊರೇನ್ ಜೈಲುಪಾಲಾದ ಬೆನ್ನಲ್ಲೇ ಜಾರ್ಖಂಡ್‌ನಲ್ಲಿ ಬಿಜೆಪಿ ಅಚ್ಚರಿ ಎಂಬಂತೆ ಈ ಲೋಕಸಭಾ ಚುನಾವಣೆಯಲ್ಲಿ ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿದ್ದ 5 ಕ್ಷೇತ್ರಗಳಲ್ಲೂ ಸೋಲು ಅನುಭವಿಸಿದೆ. ಸೊರೇನ್ ಬಂಧನ ವಿಚಾರವನ್ನು ವಿಪಕ್ಷಗಳು ಬುಡಕಟ್ಟು ಜನರ ಭಾವನೆಯನ್ನು ಕೆರಳಿಸಲು ಸರಿಯಾಗಿ ಉಪಯೋಗಿಸಿಕೊಂಡಿದ್ದು ಹಾಗೇ ಸರ್ನಾ ಧರ್ಮ ಕೋಡ್ ಬೇಡಿಕೆ ಈಡೇರದೇ ಇರುವುದು ಬುಡಕಟ್ಟು ಜನರ ಮತ ಬಿಜೆಪಿಗೆ ಬರದೇ ಇರಲು ಮುಖ್ಯ ಕಾರಣ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

ನೀಟ್ ಕೃಪಾಂಕ ಕ್ರಮ ರದ್ದು; 1563 ಮಂದಿಗೆ ಮತ್ತೆ ಪರೀಕ್ಷೆ

ದೆಹಲಿ: ಕೃಪಾಂಕದ ಕಾರಣದಿಂದಲೇ ವಿವಾದಕ್ಕೆ ಸಿಲುಕಿದ್ದ 'ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ'(ನೀಟ್)ನಲ್ಲಿ ಈ ಬಾರಿಯ ಕೃಪಾಂಕ ಕ್ರಮ ರದ್ದು ಪಡಿಸಲಾಗಿದೆ. ಕೃಪಾಂಕ ಪಡೆದು ಅಗ್ರಶ್ರೇಣಿಯಲ್ಲಿ ತೇರ್ಗಡೆಯಾಗಿದ್ದ 1563 ಅಭ್ಯರ್ಥಿಗಳ ಅಂಕಪಟ್ಟಿ ರದ್ದುಗೊಳಿಸಿ ಮರು ಪರೀಕ್ಷೆ ಎದುರಿಸಲು ಸೂಚಿಸಲಾಗಿದೆ. ಈ ವಿಚಾರವನ್ನು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದು, ಕೋರ್ಟ್ ಅನುಮೋದನೆ ನೀಡಿದೆ. ನೀಟ್ ಫಲಿತಾಂಶ ವಿವಾದ ಪರೀಕ್ಷಾ ಪಾವಿತ್ರ್ಯದ ಮೇಲೆ ದುಷ್ಪರಿಣಾಮ ಬೀರಿದೆ. ಈ ಬಗ್ಗೆ ಕೇಂದ್ರ ಸರಕಾರ ಮತ್ತು ಎನ್‌ಟಿಎ ಉತ್ತರ ನೀಡಬೇಕು ಎಂದು ಸುಪ್ರೀಂ ಕಡ್ಡಿಮುರಿದಂತೆ ಸೂಚನೆ ನೀಡಿತ್ತು. ಈ ಹಿನ್ನೆಲೆ ಸರಕಾರಿ ವಕೀಲರು, ಕೃಪಾಂಕ ರದ್ದು ಮತ್ತು ಮರು ಪರೀಕ್ಷೆಯ ಕೇಂದ್ರದ ನಿರ್ಧಾರಗಳ ಬಗ್ಗೆ ನ್ಯಾ.ವಿಕ್ರಮ್ ನಾಥ್ ಮತ್ತು ನ್ಯಾ.ಸಂದೀಪ್ ಮೆಹ್ತಾ ಅವರ ರಜಾಕಾಲದ ಪೀಠದ ಗಮನಕ್ಕೆ ತಂದರು. ಬಳಿಕ ಪೀಠ ಅರ್ಜಿಗಳನ್ನು ವಜಾಗೊಳಿಸಿದೆ. ಕೃಪಾಂಕದ ವಿದ್ಯಾರ್ಥಿಗಳಿಗೆ ಜೂ.23ರಂದು ಮರು ಪರೀಕ್ಷೆಗೆ ಅವಕಾಶ. ಮರು ಪರೀಕ್ಷೆ ಫಲಿತಾಂಶ ಜೂ.30ರಂದು ಪ್ರಕಟಗೊಳ್ಳಲಿದೆ ಎಂದು ತಿಳಿಸಲಾಗಿದೆ. ಇದೇ ವೇಳೆ ನೀಟ್ ಯುಜಿ-2024ರ ಕೌನ್ಸೆಲಿಂಗ್‌ಗೆ ಯಾವುದೇ ಅಡ್ಡಿ ಇಲ್ಲ ಎಂದು ಸುಪ್ರೀಂ ಪುನರುಚ್ಚರಿಸಿದೆ. ಪರೀಕ್ಷೆ ಅಕ್ರಮ ಸಂಬಂಧ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆ ಜು.8ರಂದು ನಡೆಸಲಿದೆ. ಎಂಬಿಬಿಎಸ್, ಬಿಡಿಎಸ್ ಪ್ರವೇಶ ಕೌನ್ಸೆಲಿಂಗ್ ಜು.6ರಿಂದ ಆರಂಭ.

'ನಮೋ ವೆಂಕಟೇಶಾಯ' ಮಾತ್ರ ಕೇಳಬೇಕು | ಇಲ್ಲಿಂದಲೇ ರಾಜ್ಯದ ಶುದ್ಧೀಕರಣ ಶುರು

ತಿರುಮಲ ಹಿಂದೂಗಳಿಗೆ ಸೇರಿದ್ದು; ಆಂಧ್ರ ಸಿಎಂ ನಾಯ್ಡು

ತಿರುಪತಿ: ತಿರುಮಲ ದೇವಸ್ಥಾನ ಹಿಂದೂಗಳಿಗೆ ಸೇರಿದ್ದು, ಇಲ್ಲಿ 'ಓಂ ನಮೋ ವೆಂಕಟೇಶಾಯ' ಘೋಷಣೆ ಮಾತ್ರ ಕೇಳಿಬರಬೇಕು ಎಂದು ಆಂಧ್ರಪ್ರದೇಶ ನೂತನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಆಂಧ್ರಪ್ರದೇಶ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ಇಂದು ತಿರುಪತಿ-ತಿರುಮಲ ದೇಗುಲಕ್ಕೆ ಕುಟುಂಬ ಸಮೇತರಾಗಿ ಭೇಟಿ ನೀಡಿದ್ದ ಅವರು ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿ, ವೆಂಕಟೇಶ್ವರ ಸ್ವಾಮಿಯ ಆಶೀರ್ವಾದದಿಂದಲೇ ಮತ್ತೊಮ್ಮೆ ಸಿಎಂ ಆಗಿದ್ದೇನೆ. ಧಾರ್ಮಿಕ ಕ್ಷೇತ್ರದಲ್ಲಿ ಹಿಂದಿನ ಸರಕಾರದ ಅವಧಿಯಲ್ಲಿ ಬಹಳಷ್ಟು ಅನಾಚಾರ ನಡೆದಿವೆ. ನಮ್ಮ ಸರಕಾರ ಆಡಳಿತದ ಶುದ್ಧೀಕರಣ ಕಾರ್ಯವನ್ನು ಈ ದೇಗುಲದಿಂದಲೇ ಆರಂಭಿಸಲಿದೆ ಎಂದರು. ತಿರುಮಲದಿಂದಲೇ ರಾಜ್ಯದ ಶುದ್ಧೀಕರಣ ಆರಂಭವಾಗಬೇಕು. ಪ್ರಸಾದ ತಯಾರಿಕೆ ಮತ್ತು ವಿತರಣೆಯ ದೋಷ ಸರಿಪಡಿಸಬೇಕಿದೆ. ತಿರುಮಲ ಪರಿಸರದ ಶುಚಿತ್ವ ಬಗ್ಗೆ ವಿಶೇಷ ಗಮನಹರಿಲಾಗುವುದು. ರಾಜ್ಯದ ಸಮಸ್ತ ಜನತೆಗೆ ಒಳಿತನ್ನು ಮಾಡುವುದೇ ನಮ್ಮ ಸರಕಾರದ ಗುರಿಯಾಗಿದೆ. ಸರಕಾರದ ಜತೆಗೆ ಜನರು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗಿಯಾಗಬೇಕು ಎಂದು ಸಿಎಂ ಕರೆ ನೀಡಿದರು.

ಇನ್ಮುಂದೆ ತಿರುಮಲಕ್ಕೆ ಬೇರೆ ಧರ್ಮದ ನಾಯಕರು ಬಂದಾಗ ನೇತಾಡುವ ಪರದೆಗಳು ಮತ್ತು ಮರದ ಪಟ್ಟಿಗಳು ಕಾಣಬರುವುದಿಲ್ಲ. ತಿರುಮಲದಲ್ಲಿ ಗಾಂಜಾ, ಮದ್ಯ ಸಿಗುವಂತೆ ಹಿಂದಿನ ಸರಕಾರ ಮಾಡಿತ್ತು. ಅವೆಲ್ಲವನ್ನೂ ಈಗ ನಿರ್ಮೂಲನೆ ಮಾಡುತ್ತೇವೆ.

- ಚಂದ್ರಬಾಬು ನಾಯ್ಡು, ಆಂಧ್ರಪ್ರದೇಶ ಸಿಎಂ

ವಿಶ್ವದ ವಿವಿಧೆಡೆ ತಿರುಮಲ ದೇಗುಲ

'ನಾನು ಬೆಳಗ್ಗೆ ಎದ್ದಾಗ ವೆಂಕಟೇಶ್ವರ ಸ್ವಾಮಿಯನ್ನು ಒಂದು ನಿಮಿಷ ತುಂಬು ಹೃದಯದಿಂದ ಪ್ರಾರ್ಥಿಸುತ್ತೇನೆ. ವಿಶ್ವದ ವಿವಿಧೆಡೆ ಶ್ರೀ ವೆಂಕಟೇಶ್ವರ ಸ್ವಾಮಿಯ ದೇವಾಲಯಗಳನ್ನು ನಿರ್ಮಿಸಲು ಕ್ರಮಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ ಚಂದ್ರಬಾಬು ನಾಯ್ಡು, ತಿರುಮಲ ಪವಿತ್ರ ತಾಣವನ್ನು ವಿಶ್ವದಲ್ಲೇ ಅತ್ಯುತ್ತಮವಾಗಿಸೋಣ ಬನ್ನಿ ಎಂದು ರಾಜ್ಯದ ಜನತೆಗೆ, ತಿಮ್ಮಪ್ಪನ ಭಕ್ತರಿಗೆ ಕರೆ ನೀಡಿದರು.

ಅಹಂಕಾರ ತ್ಯಜಿಸಿ ಜ್ಞಾನದತ್ತ ನಡೆಯಿರಿ: ನಟ ದೊಡ್ಡಣ್ಣ

ಸಿರವಾರ: ಮನುಷ್ಯ ಅಹಂಕಾರ ತ್ಯಜಿಸಿ, ಜ್ಞಾನದಿಂದ ನಡೆಯಬೇಕು ಎಂದು ಹಿರಿಯ ಹಾಸ್ಯನಟ ದೊಡ್ಡಣ್ಣ ಹೇಳಿದರು. ಪಟ್ಟಣದ ಚುಕ್ಕಿ ಉಮಾಪತಿ ಅವರ 48ನೇ ಪುಣ್ಯಸ್ಮರಣೆ ಬಸವ ತತ್ವ ಚಿಂತನಾ ಗೋಷ್ಠಿ, ಸಾಧಕರಿಗೆ, ಸಾಹಿತಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಶರಣರಿಗೆ ಜಾತಿಯ ಮೇಲೆ ನಂಬಿಕೆ ಇರಲಿಲ್ಲ, ವಚನಗಳ ಮೂಲಕ ಲಿಂಗ, ಜಾತಿಯ ತಾರತಮ್ಯ ತೊಡೆದು ಹಾಕುವ ಮೂಲಕ ಕಾಯಕ, ದಾಸೋಹದ ಮಹತ್ವವನ್ನು ತಿಳಿಸಿದರು, ವೀರಶೈವ-ಲಿಂಗಾಯತ ಬೇರೆಯಲ್ಲಾ ಎಂದರು. ನಮಗೆ ಜನ್ಮನೀಡಿದ ತಾಯಿ, ಅನ್ನ ಇವು ಜೀವನಕ್ಕೆ ಬಹುಮುಖ್ಯ, ತಂದೆ-ತಾಯಿ, ಕುಟುಂಬದ ಸದಸ್ಯರು ಒಂದಾಗಿ ಇರಬೇಕು, ಮಕ್ಕಳಿಗೆ ಶಿಕ್ಷಣದ ಜತೆ ಉತ್ತಮ ಸಂಸ್ಕಾರ ನೀಡಬೇಕು ಎಂದರು. ನವಲಕಲ್ ಬೃಹನ್ಮಠದ ಅಭಿನವಶ್ರೀ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯವಹಿಸಿದ್ದರು. ಚುಕ್ಕಿ ಪ್ರತಿಷ್ಠಾನದ ಅಧ್ಯಕ್ಷ ಚುಕ್ಕಿ ಸೂಗಪ್ಪ ಸಾಹುಕಾರ್ ಪ್ರಾಸ್ತಾವಿಕ ನುಡಿಯಲ್ಲಿ ತಮ್ಮ ಪ್ರತಿಷ್ಠಾನದ, ಕುಟುಂಬದ ಮಾಹಿತಿ ಹಂಚಿಕೊಂಡರು. ಈ ವೇಳೆ ಜಾಗಟಗಲ್ ಬೆಟ್ಟಪ್ಪ ತಾತ, ಆಕಾಶವಾಣಿ ಕಲಾವಿದ ನವಲಿಂಗ ಪಾಟೀಲ್ ಇದ್ದರು.



ಮುದಗಲ್ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಹಾಗೂ ಲಿಂಗಸುಗೂರ ಮಾಜಿ ಶಾಸಕ ಡಿ.ಎಸ್. ಹೂಲಗೇರಿ ರವರ ಹುಟ್ಟು ಹಬ್ಬದ ಪ್ರಯುಕ್ತ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ತಾಲೂಕಾಧ್ಯಕ್ಷ ಪರಮೇಶ ಕನ್ನಾಪೂರುಹಟ್ಟಿ. ಯುವ ಮುಖಂಡ ಅರುಣಕುಮಾರ ಯರದಿಹಾಳ. ಕರಬಸನಗೌಡ ಜಾನತಾಪೂರು ಮಹಾಂತೇಶ ಬೋವಿ. ಸೇರಿದಂತೆ ಕಾಂಗ್ರೆಸ್ ಮುಖಂಡರು. ಕಾರ್ಯಕರ್ತರು ಸನ್ಮಾನ ಮಾಡಿ ಶುಭ ಕೋರಿದರು.

ದರ್ಗಾದಲ್ಲಿ ಮಾಜಿ ಶಾಸಕ ಜನ್ಮದಿನ: ವಿಶೇಷ ಪೂಜೆ

ಮುದಗಲ್: ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕರ ಐದು ವರ್ಷದ ಅಭಿವೃದ್ಧಿ ಕಾರ್ಯಗಳು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಸಹಕಾರಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಉಪ್ಪಾರ ನಂದಿಹಾಳ ಹೇಳಿದರು. ಮಾಜಿ ಶಾಸಕ ಡಿ. ಎಸ್ ಹೂಲಗೇರಿರವರ ಹುಟ್ಟು ಹಬ್ಬದ ಅಂಗವಾಗಿ ಶ್ರೀ ಮಾರುತೇಶ್ವರ ದೇವಸ್ಥಾನ ಹಾಗೂ ಹುಸೇನ್ ಆಲಂ ದರ್ಗಾದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಮಾತನಾಡಿ, ಹೂಲಗೇರಿ ಶಾಸಕರಿದ್ದಾಗ ನೂರಾರು ಕೋಟಿ ಅನುದಾನ ತಂದು ಕ್ಷೇತ್ರ ಅಭಿವೃದ್ಧಿ ಮಾಡಿದ ಹಿನ್ನೆಲೆ ತಾಲೂಕಿನಿಂದ 18000 ಮತಗಳಿಂದ ಲೀಡ್ ಕೊಡುವ ಮೂಲಕ ಗೆಲುವಿಗೆ ಶ್ರಮಿಸಿದ್ದಾರೆ ಎಂದು ಉಪ್ಪಾರನಂದಿಹಾಳ ಹೇಳಿದರು. ಈ ವೇಳೆ ಪುರಸಭೆ ಅಜ್ಮೀರ್ ಬೆಳ್ಳಿಕಟ್, ಮೈಬುಬಸಾಬ ಕಡ್ಡಿಪುಡಿ. ಮುನ್ನಾಬಾಯಿ, ಚಾಂದ್ ಜಮಾದಾರ್, ಕೃಷ್ಣ ಚಲುವಾದಿ, ಮಾಸುಮ್ ಷರೀಫ್, ನ್ಯಾಮತ್ ಖಾದ್ರಿ, ಗಣೇಶಗೌಡ ವ್ಯಾಕರನಾಳ, ಶಿವಕುಮಾರ ಕಮ್ಮಾರ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು. ಮುದಗಲ್ ಬ್ಲಾಕ್ ಕಾಂಗ್ರೆಸ್ ವತಿಯಿಂದ ಪಟ್ಟಣದ ಮಾರುತೇಶ್ವರ ದೇವಸ್ಥಾನ ಹಾಗೂ ಹುಸೇನ್ ಆಲಂ ದರ್ಗಾದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಹಾಗೂ ಮಾಜಿ ಶಾಸಕ ಡಿ. ಎಸ್. ಹೂಲಗೇರಿ ಹುಟ್ಟು ಹಬ್ಬದ ಆಚರಣೆ ಮಾಡಿದರು.

ಸಮಾಚಾರ ಸಣ್ಣದಲ್ಲ

ಸಿಎಂ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ಜೂ.21ಕ್ಕೆ

ಹೊಸಪೇಟೆ: ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಜೂ. 21 ರಂದು ಕೆಡಿಪಿ ಸಭೆ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ. ಕಳೆದ ಬಾರಿ ಕೆಡಿಪಿ ಸಭೆಯಲ್ಲಿ ಮುಂದಿನ ಬಾರಿ ಮುಖ್ಯ ಮಂತ್ರಿ ಯವರು ಕೆಡಿಪಿ ಸಭೆ ನಡೆಸಲಿದ್ದಾರೆ ಎಂದು ಹೇಳಿದ್ದೆ. ಅದರಂತೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಿ ಜೂ. 21 ರಂದು ಕೆಡಿಪಿ ಸಭೆ ನಿಗದಿ ಪಡಿಸಲಾಗಿದೆ ಎಂದು ಹೇಳಿದ್ದಾರೆ. ಕೆಡಿಪಿ ಸಭೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ದಿವಾಕರ್ ಅವರೊಂದಿಗೆ ಮಾತನಾಡಿ, ಕೆಡಿಪಿ ಸಭೆಗೆ ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ನೂತನ ಜಿಲ್ಲೆ ವಿಜಯನಗರದ ತಾಲೂಕುಗಳಲ್ಲಿ ಒಂದಷ್ಟು ಸಮಸ್ಯೆಗಳಿದ್ದು ಮುಖ್ಯಮಂತ್ರಿಯವರು ಕೆಡಿಪಿ ಸಭೆ ನಡೆಸುವುದರಿಂದ ಹಲವಾರು ಸಮಸ್ಯೆ ಗಳಿಗೆ ಪರಿಹಾರ ದೊರಕುವ ನಿರೀಕ್ಷೆ ಇದೆ ಎಂದು ಸಚಿವರು ಆಶಾ ಭಾವನೆ ವ್ಯಕ್ತಪಡಿಸಿದ್ದಾರೆ.

ಒತ್ತುವರಿ ಜಮೀನು ತೆರವುಗೊಳಿಸಲು ಮನವಿ

ಮುದಗಲ್: ಸಮೀಪದ ಛತ್ತರ ಹಾಗೂ ವ್ಯಾಕರನಳ ಗ್ರಾಮದ ಸೀಮಾದಲ್ಲಿ ಒತ್ತುವರಿಯಾದ ಜಮೀನು ತೆರವುಗೊಳಿಸಬೇಕೆಂದು ಎಂದು ಗ್ರಾಮಸ್ಥರು ಲಿಂಗಸುಗೂರು ಉಪ ವಿಭಾಗಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಛತ್ತರ ಹಾಗೂ ವ್ಯಾಕರನಾಳ ಗ್ರಾಮದ ಸೀಮಾದಲ್ಲಿ 110. 110.124.110.123.122.121.121.121.105 ಸರ್ವೆ ನಂಬರನ 53 ಎಕರೆ ಜಮೀನುನಲ್ಲಿ ಸುಮಾರು ಹತ್ತು ಜನರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದು ಒತ್ತುವರಿಯಾದ ಈ ಜಮೀನನ್ನು ತೆರವುಗೊಳಿಸಿ ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿರುಪಣ್ಣ ಕಂಬಳಿ, ರಮೇಶ ನಾಯಕ, ಭೀಮನಗೌಡ ಪಾಟೀಲ, ಹನುಮಂತ ಉಪಸ್ಥಿತರಿದ್ದರು.

ಕೊಪ್ಪಳದ ಶಿರಸ್ತೇದಾರ ಲೋಕಾಯುಕ್ತ ಬಲೆಗೆ

ಕೊಪ್ಪಳ: ನಗರದ ತಹಸೀಲ್ದಾರ ಕಚೇರಿ ಶಿರಸ್ತೇದಾರ ಮೇಲೆ ದಾಳಿ ಮಾಡಿರುವ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಗುರುವಾರ ಬಂಧಿಸಿದ್ದಾರೆ. ಅರ್ಜಿದಾರರಿಂದ ಹಣ ಪಡೆಯುವಾಗ ಸುನೀಲ್ ಕುಮಾರ ಕುಲಕರ್ಣಿ ಬಂಧಿತ ನೌಕರ. ಪ್ರಕರಣ: ದೂರುದಾರ ಕರಿಯಪ್ಪ ಕೊಳ್ಳಿ ಅವರ ಮಗನಿಗೆ ಯೋಜನಾ ನಿರಾಶ್ರಿತ ಪ್ರಮಾಣ ಪತ್ರ ನೀಡಲು 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ದೂರುದಾರ ಚೌಕಾಸಿ ಮಾಡಿ 37 ಸಾವಿರ ಕೊಡುವುದಾಗಿ ಒಪ್ಪಿಕೊಂಡಿದ್ದು, ಶುಕ್ರವಾರ ಫಿರ್ಯಾದುದಾರರಿಂದ ಲಂಚದ ಹಣ 37 ಸಾವಿರ ಪಡೆಯುವಾಗ ಲೋಕಾಯುಕ್ತರು ದಾಳಿ ಮಾಡಿದ್ದಾರೆ. ಸುನೀಲ್ ಕುಮಾರ ಅವರನ್ನು ವಶಕ್ಕೆ ಪಡೆದಿದ್ದು, ಹಣ ಜಪ್ತಿ ಮಾಡಿ ಪ್ರಕರಣದ ತನಿಖೆ ನಡೆಸಿದ್ದಾರೆ.

ಕಲಿ-ನಲಿ ವಯಸ್ಸಿನಲ್ಲಿ ಮಕ್ಕಳು ಕಲಿಯಲಿ

ಹೂವಿನಹಡಗಲಿ: ಮಕ್ಕಳು ಕಲಿ-ನಲಿ ವಯಸ್ಸಿನಲ್ಲಿ ಬಾಲಕಾರ್ಮಿಕರಾಗುತ್ತಿರುವುದು ವಿಷಾಧದ ಸಂಗತಿ ಎಂದು ಮೌಂಟ್ ಕಾರ್ಮೆಲ್ ಸಿಬಿಎಸ್ಇ ಶಾಲೆಯ ಪ್ರಾಂಶುಪಾಲ ಫಾದರ್ ವಿಕ್ಟರ್ ವಿಜಯ್ ಫೈಸ್ ಹೇಳಿದರು. ಪಟ್ಟಣದ ಸೋಗಿ ರಸ್ತೆಯಲ್ಲಿರುವ ಮೌಂಟ್ ಕಾರ್ಮೆಲ್ ಸಿಬಿಎಸ್ಇ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿ, ಇದು ತುಂಬಾ ನೋವಿನ ಸಂಗತಿ. ಮಕ್ಕಳಿಗೆ ಕನಿಷ್ಠ ಜೀವನ ನಡೆಸಲು ಶಿಕ್ಷಣ ಬೇಕು ಆದರೆ ಶಿಕ್ಷಣ ವಂಚಿತರಾಗಿ ದುಡಿಯುವುದು ಸರಿಯಲ್ಲ. ಸರಕಾರಗಳು ಕಠಿಣ ಕಾನೂನುಗಳನ್ನು ಜಾರಿಗೆ ತಂದಿವೆ. ದುಡಿಯಿಸಿಕೊಳ್ಳುವವರಿಗೆ ಕಠಿಣ ಶಿಕ್ಷೆ ವಿಧಿಸಲು ಮುಂದಾಗಿವೆ. ಪಾಲಕರಿಗೂ ಕ್ರಮ ಜರುಗಿಸಲಾಗುತ್ತಿದೆ ಎಂದರು. ಎಲ್ಲರೂ ಬಾಲಕಾರ್ಮಿಕ ಪದ್ಧತಿಯನ್ನು ವಿರೋಧಿಸಿ. ಸರ್ವರಿಗೂ ಶಿಕ್ಷಣ ಸಮಪಾಲು ದೊರೆಯಬೇಕು. ಎಲ್ಲರೂ ಒಗ್ಗೂಡಿ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ಪಣ ತೊಡಣ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಇಂದು

ಪಾರದರ್ಶಕ ,ವ್ಯವಸ್ಥಿತವಾಗಿ ನಡೆಸಲು ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ ಸೂಚನೆ

ಬಳ್ಳಾರಿ: ರಾಜಾದ್ಯಂತ ಇಂದು ನಡೆಯಲಿರುವ ಎಸ್.ಎಸ್.ಎಲ್.ಸಿ ಪರೀಕ್ಷೆ-2 ಜೂ. 22 ರ ವರೆಗೆ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ಮತ್ತು ಪಾರದರ್ಶಕವಾಗಿ ನಡೆಸಬೇಕು ಎಂದು ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅಧಿಕಾರಿಗಳಿಗೆ ಸೂಚಿಸಿದರು.

ಎಸ್.ಎಸ್.ಎಲ್.ಸಿ ಪರೀಕ್ಷೆ-2ರ ಪೂರ್ವ ಸಿದ್ಧತೆ ಕ್ರಮಗಳ ಕುರಿತು ನಗರದ ಜಿಲ್ಲಾ ಪಂಚಾಯತ ಕಚೇರಿಯ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

20 ಪರೀಕ್ಷಾ ಕೇಂದ್ರಗಳಿಗೆ 20 ಮುಖ್ಯ ಅಧೀಕ್ಷಕರು, 20 ಪರೀಕ್ಷಾ ಕೇಂದ್ರಗಳ ಮಾರ್ಗಗಳಿಗೆ 7 ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಮಾರ್ಗಾಧಿಕಾರಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಿಂದ ಪಡೆದು ಪರೀಕ್ಷಾ ಕೇಂದ್ರಗಳಿಗೆ ವಿತರಿಸಬೇಕು. ತಾಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಉತ್ತರ ಪತ್ರಿಕೆಗಳನ್ನು ರವಾನಿಸುವ ಸಮಯದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸಬೇಕು ಎಂದು ತಿಳಿಸಿದರು. ಮಾರ್ಗಾಧಿಕಾರಿಗಳಿಗೆ ಪರೀಕ್ಷಾ ಕೇಂದ್ರಗಳಿಗೆ ಗೌಪ್ಯ ಸಾಮಾಗ್ರಿ ತಲುಪಿಸಲು 7 ವಾಹನ ಒದಗಿಸಬೇಕು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚಿಸಿದರು. ಪರೀಕ್ಷಾ ವೇಳೆಯಲ್ಲಿ ತುರ್ತು ಚಿಕಿತ್ಸೆ ಸಂಬಂಧ ಅರೆಕಾಲಿಕ ವೈದ್ಯಕೀಯ ಸಿಬ್ಬಂದಿ ನಿಯೋಜಿಸಲು ಜಿಲ್ಲಾ ವೈದ್ಯಾಧಿಕಾರಿಗಳಿಗೆ ಹೇಳಿದರು.

ಗ್ರಾಮೀಣ ಪ್ರದೇಶದಿಂದ ಪರೀಕ್ಷಾ ಕೇಂದ್ರಗಳಿಗೆ ಬರುವ ವಿದ್ಯಾರ್ಥಿಗಳಿಗೆ ಸೂಕ್ತ ಸಮಯದಲ್ಲಿ ಸಾರಿಗೆ ವ್ಯವಸ್ಥೆ, ಪರೀಕ್ಷಾ ದಿನಗಳಂದು ಪರೀಕ್ಷಾ ಸಮಯದಲ್ಲಿ ನಿರಂತರ ವಿದ್ಯುತ್ ಸಂಪರ್ಕ ಒದಗಿಸಬೇಕು. ಅದೇ ರೀತಿ ಪರೀಕ್ಷಾ ಪಾವಿತ್ರ್ಯತೆ ಕಾಪಾಡಿಕೊಳ್ಳಲು 20 ಕ್ಯಾಂಪ್ ಕಸ್ಟೊಡಿಯನ್, ಮೊಬೈಲ್ ಸ್ವಾಧೀನಾಧಿಕಾರಿಗಳು, ಸ್ಥಾನಿಕ ಜಾಗೃತ ದಳದ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ಬಿ.ಉಮಾದೇವಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯ ವಿಷಯ ಪರಿವೀಕ್ಷಕ ಎ.ಕೆ. ಸತ್ಯನಾರಾಯಣ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪರೀಕ್ಷಾ ಕೇಂದ್ರಗಳ ಮಾಹಿತಿ: ಜಿಲ್ಲೆಯಲ್ಲಿ ಒಟ್ಟು 20 ಪರೀಕ್ಷಾ ಕೇಂದ್ರಗಳನ್ನು ಗುರುತಿಸಿದ್ದು, ಅದರಲ್ಲಿ 2 ಅತಿ ಸೂಕ್ಷ್ಮ, ಸೂಕ್ಷ್ಮ-4 ಕೇಂದ್ರಗಳನ್ನಾಗಿ ಗುರುತಿಸಲಾಗಿದೆ, 14 ಸಾಮಾನ್ಯ ಪರೀಕ್ಷಾ ಕೇಂದ್ರಗಳಿವೆ. 338 ಕೊಠಡಿಗಳನ್ನು ಪರೀಕ್ಷಾ ಕೊಠಡಿಗಳನ್ನಾಗಿ ತೆಗೆದುಕೊಳ್ಳಲಾಗಿದೆ ಹಾಗೂ 6 ಅಡಿ ಅಂತರದಲ್ಲಿ ಒಟ್ಟು 3,796 ಆಸನ ವ್ಯವಸ್ಥೆ ಮಾಡಲಾಗಿದೆ.

ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಈಗಾಗಲೇ ಎಸ್ಸೆಸ್ಸೆಲ್ಸಿ ಪರೀಕ್ಷೆ 1ನ್ನು ನಡೆಸಲಾಗಿದ್ದು, ಪರೀಕ್ಷಾ ಕಾರ್ಯಗಳಿಗೆ ನಿಯೋಜನೆಗೊಂಡಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ಅಗತ್ಯ ಪೂರ್ವ ಸಿದ್ಧತೆಯನ್ನು ಮಂಡಳಿಯ ಸುತ್ತೋಲೆಯ ಮಾರ್ಗಸೂಚಿ ಪ್ರಕಾರ ಕಾರ್ಯನಿರ್ವಹಿಸುವಂತೆ ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಿ.

– ಮೊಹಮ್ಮದ್ ಝುಬೇರ್
ಅಪರ ಜಿಲ್ಲಾಧಿಕಾರಿ

ಜಿಲ್ಲೆಯಲ್ಲಿ ಪರೀಕ್ಷೆ-2 ಗೆ ನೋಂದಾಯಿಸಿದ ವಿದ್ಯಾರ್ಥಿಗಳ ಮಾಹಿತಿ

ಜಿಲ್ಲೆಯಲ್ಲಿ ಒಟ್ಟು 310 ಶಾಲೆಗಳಿಂದ 7591 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ-2 ಗೆ ನೋಂದಾಯಿಸಿಕೊಂಡಿದ್ದಾರೆ.
ಬಳ್ಳಾರಿ ಪೂರ್ವ-3169, ಬಳ್ಳಾರಿ ಪಶ್ಚಿಮ-1191, ಸಂಡೂರು-905, ಸಿರುಗುಪ್ಪ-2326.

ಎಳೆ ಮಕ್ಕಳನ್ನು ದುಡಿಮೆಗೆ ಹಚ್ಚದೇ ವಿದ್ಯಾಭ್ಯಾಸ ನೀಡಿ

ಹೊಸಪೇಟೆ: ತಾಲೂಕು ಕಾನೂನು ಸೇವಾ ಸಮಿತಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ವಕೀಲರ ಸಂಘ, ಡಾನ್ ಬೋಸ್ಕೋ ಸಂಸ್ಥೆ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ''ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ'' ಕಾರ್ಯಕ್ರಮ ನಡೆಯಿತು. ನಗರದ ಸರ್ದಾರ್ ಪಟೇಲ್ ಸರಕಾರಿ ಪ್ರೌಢಶಾಲೆಯಿಂದ ಆರಂಭವಾದ ಜಾಥಾ ನಗರದ ವಿವಿಧೆಡೆ ಸಂಚರಿಸಿ ಡಾನ್ ಬೋಸ್ಕೋ ಸಂಸ್ಥೆಗೆ ತಲುಪಿತು. ಜಾಥಾಕ್ಕೆ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷ ಹೇಮಲತಾ ಬಿ. ಹುಲ್ಲೂರ ಚಾಲನೆ ನೀಡಿ ಮಾತನಾಡಿ, ಪ್ರತಿ ವರ್ಷ ಭಾರತ ಸೇರಿದಂತೆ ವಿಶ್ವಾದ್ಯಂತ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಿಸ ಲಾಗುತ್ತಿದೆ. ಅದರಂತೆ ನಾವು ಜಾಗೃತರಾಗಿ ಈ ಪದ್ಧತಿಯನ್ನು ಹೋಗಲಾಡಿಸಬೇಕು. ನಮ್ಮ ಮಕ್ಕಳು ನಮ್ಮ ಆಸ್ತಿಯಾಗಿದ್ದಾರೆ. ಅವರನ್ನು ದುಡಿಮೆಗೆ ಹಚ್ಚದೇ ಅವರಿಗೆ ಸರಿಯಾದ ವಿದ್ಯಾಭ್ಯಾಸ ನೀಡಬೇಕು ಎಂದು ತಿಳಿಸಿದರು.

ಈ ಮೊದಲು ಬಾಲ ಕಾರ್ಮಿಕರು ಕೃಷಿ ಚಟುವಟಿಕೆಯಲ್ಲಿ ಹೆಚ್ಚು ಕಾಣ ಸಿಗುತ್ತಿದ್ದರು. ಈಗ ಹೆಚ್ಚಾಗಿ ಗ್ಯಾರೇಜ್, ಹೋಟೇಲ್‌ಗಳಲ್ಲಿ ಕೆಲಸ ಮಾಡುವುದು ರೂಢಿಯಾಗುತ್ತಿದೆ. ಇದಕ್ಕೆ ಕಾರಣ ಬಡತನ ಇರಬಹುದು ಆದರೆ ಯಾವುದೇ ಮಗುವು ಶಿಕ್ಷಣದಿಂದ ವಂಚಿತವಾಗಬಾರದು. ಮಕ್ಕಳು ಸಂವಿಧಾನ ಬದ್ಧ ಮೂಲಭೂತ ಹಕ್ಕುಗಳಿಗೆ ಬದ್ಧರಾಗಿದ್ದಾರೆ. ಅವರಿಗೆ ಪ್ರತಿಯೊಂದು ಸೌಲಭ್ಯ ಸಿಗುವಂತಾಗಬೇಕು ಎಂದು ಸಲಹೆ ಮಾಡಿದರು.

ಈ ವೇಳೆ ಪ್ರಶಾಂತ್ ನಾಗಲಾಪುರ, ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶೆ ಚೈತ್ರ. ಜೆ, ಶ್ವೇತಾ, ಸುದೀಪ್ ಕುಮಾರ್ ಉಂಕಿ, ಕೆ.ಪ್ರಹ್ಲಾದ್ ಉಪಸ್ಥಿತರಿದ್ದರು.

ಮಕ್ಕಳು ಕಟ್ಟಡ ಕೆಲಸದಲ್ಲಿ, ಅಂಗಡಿಗಳಲ್ಲಿ, ಬೇಕರಿ, ದೊಡ್ಡ ದೊಡ್ಡ ಮನೆಗಳಲ್ಲಿ ಹಾಗೂ ಇನ್ನಿತರ ಸ್ಥಳಗಳಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕೆಲಸದಾಳುಗಳಾಗಿದ್ದಾರೆ. ಇಂತಹ ಅನಿಷ್ಠ ಬಾಲ ಕಾರ್ಮಿಕ ಪದ್ಧತಿಯ ಪಿಡುಗನ್ನು ಹೋಗಲಾಡಿಸಿ.

– ಅಶೋಕ್ ಎಚ್.ಆರ್.
ನ್ಯಾಯಾಧೀಶ

ಲೋಕಾಯುಕ್ತಗೆ ದೂರುಗಳ ಸರಮಾಲೆ

ಸಾರ್ವಜನಿಕರ ಅರ್ಜಿಗಳಿಗೆ ಸ್ಪಂದಿಸಿ, ಸಮಾಧಾನದಿಂದ ಉತ್ತರಿಸಿ | ಶಶಿಧರ

ನಗರದ ತಹಸೀಲ್ದಾರ್ ಕಚೇರಿಯಲ್ಲಿ ಲೋಕಾಯುಕ್ತ ಅಧಿಕಾರಿ ಶಶಿಧರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಕುಂದು – ಕೊರತೆ ಆಹ್ವಾಲು ಸಭೆಯಲ್ಲಿ ದೂರುಗಳ ಸರಮಾಲೆ ಕೇಳಿ ಬಂದವು.

ರಾಯಚೂರು: ಜಮೀನಿಗೆ ರಸ್ತೆ ಇಲ್ಲ , ಪಹಣಿಯಲ್ಲಿ ಜಮೀನು ಅಳತೆ ಅದಲು ಬದಲಾಗಿದ್ದು ಸರಿಪಡಿಸಿ ಕೊಡುತ್ತಿಲ್ಲ, 371(ಜೆ) ಪ್ರಮಾಣ ಪತ್ರಕ್ಕೆ ತಹಸೀಲ್ದಾರರು ಸಹಿ ಮಾಡದೆ ಅಲೆದಾಡಿಸುತ್ತಿದ್ದಾರೆ. ಹೀಗೆ ಹತ್ತಾರು ದೂರು ಹೊತ್ತು ಸಾರ್ವಜನಿಕರು ಲೋಕಾಯುಕ್ತರ ಆಹ್ವಾಲು ಸಭೆಗೆ ಆಗಮಿಸಿದ್ದರು.

ವಿದ್ಯೆ, ಉದ್ಯೋಗದ ಮೀಸಲು 371 ಜೆ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿ ವಾರಗಟ್ಟಲೆಯಾದರೂ ತಹಸೀಲ್ದಾರರು ಥಂಬ್ ನೀಡಿಲ್ಲ ಎಂದು ಸಿಬ್ಬಂದಿ ಅಲೆದಾಡಿಸುತ್ತಿದ್ದಾರೆ ಇದರಿಂದ ಅರ್ಜಿ ಸಲ್ಲಿಕೆಗೆ ಸಮಸ್ಯೆಯಾಗಿದೆ ಎಂದು ಈಶ್ವರ ಎನ್ನುವ ಯುವಕ ದೂರಿತ್ತರು. ತಕ್ಷಣ ತಹಸೀಲ್ದಾರಗೆ ಲೋಕಾಯುಕ್ತ ಅಧಿಕಾರಿ ಸೂಚಿಸಿದರು. ವಿಳಂಬ ಮಾಡಬಾರದು ಸಮಸ್ಯೆ ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಳೆದೊಂದು ವರ್ಷದ ಹಿಂದೆ ಪತಿ ಮೃತರಾಗಿದ್ದು ವಿಧವಾ ವೇತನಕ್ಕೆ ಸಲ್ಲಿಸಿದ ಅರ್ಜಿ ವಿಲೇವಾರಿ ಮಾಡುತ್ತಿಲ್ಲ, ಮಾಹಿತಿಯೂ ಕಚೇರಿ ಸಿಬ್ಬಂದಿ ಕೊಡದೆ ಅಲೆದಾಡಿಸುತ್ತಿದ್ದಾರೆಂದು ಭಾಗ್ಯಮ್ಮ ಎನ್ನುವ ಮಹಿಳೆ ದೂರಿದರು. ಕೂಡಲೇ ಅರ್ಜಿ ವಿಲೇವಾರಿ ಮಾಡಲು ಗ್ರೇಡ್ 2 ತಹಸೀಲ್ದಾರ್ ಮೀರ್ ಅನ್ವರ್‌ಗೆ ಸೂಚಿಸಲಾಯಿತು.

ಇಷ್ಟೆ ಅಲ್ಲದೆ, ರಾಯಚೂರು ನಗರದ ಬಡಾವಣೆಯೊಂದರಲ್ಲಿ ನಳ ಸಂಪರ್ಕಕ್ಕೆ ಅನುಕೂಲ ಮಾಡಿಕೊಡುತ್ತಿಲ್ಲ, ಚುನಾವಣೆಗೂ ಮುನ್ನ ತಾತ್ಕಾಲಿಕ ವ್ಯವಸ್ಥೆಗೆ ಸೂಚಿಸಿದ್ದರೂ ಇದುವರೆಗೆ ಆಗಿಲ್ಲ ಎಂದು ದೂರಲಾಯಿತು. ದೇವದುರ್ಗದಲ್ಲಿ ವಾಲ್ಮೀಕಿ ಭವನ ನಿರ್ಮಾಣದ ಅನುದಾನ ಬಳಸಿ ಪುನಃ ಕೆಆರ್‌ಡಿಎಲ್‌ಗೆ ವರ್ಗಾಯಿಸಿದ್ದು ಮೂರು ಬಾರಿ ಪರಿಶೀಲಿಸಿದ ಮೇಲೂ ಬಿಲ್ ಪಾವತಿಸುತ್ತಿಲ್ಲ ಎಂದು ಗುತ್ತಿಗೆದಾರನೊಬ್ಬ ಅಳಲು ತೊಡಿಕೊಂಡರೆ, ಮೂಲಭೂತ ಸೌಕರ್ಯದ ಕೊರತೆ, ಸಿಬ್ಬಂದಿ ವರ್ತನೆಗೆ ಸಂಬಂಧಿಸಿದಂತೆಯೂ ಕೆಲ ದೂರುಗಳು ಸಭೆಯಲ್ಲಿ ಬಂದವು.

ಇನ್ನೊಮ್ಮೆ ಈ ದೂರುಗಳು ತಮ್ಮ ಕುಂದು-ಕೊರತೆ ಸಭೆಗೆ ಬಾರದಂತೆ ಸಂದಿಸಲು ಸಲಹೆ ಮಾಡಿದರು. ನಗರಸಭೆ ಪೌರಾಯುಕ್ತರು ಸಭೆಗೆ ಹಾಜರಾಗದ ಬಗ್ಗೆ ಬೇಸರ ವ್ಯಕ್ತಪಡಿಸಿ, ನಗರಕ್ಕೆ ಸಂಬಂಧಿಸಿದ ದೂರುಗಳನ್ನು ಅವರಿಗೆ ಕಳುಹಿಸಿ ಸ್ಪಂದಿಸಲು ತಿಳಿಸುವಂತೆ ಹೇಳಿದರು.

ಈ ವೇಳೆ ಇಲಾಖೆ ಅಧಿಕಾರಿಗಳು, ಲೋಕಾಯುಕ್ತದ ಇನ್ಸಪೆಕ್ಟರ್ ಕಾಳಪ್ಪ, ಅಮರೇಶ ಸಿಬ್ಬಂದಿಗಳಿದ್ದರು.

ಸರಕಾರಿ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿಗೆ ವಿರೋಧ

ರಾಯಚೂರು: ನಾಲ್ಕು ವರ್ಷ ಮೇಲ್ಪಟ್ಟ ಮಕ್ಕಳನ್ನು ಶಾಲೆಗೆ ಕಳಿಸುವ ರಾಜ್ಯ ಶಿಕ್ಷಣ ನೀತಿಯ ವಿರುದ್ಧ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಪ್ರತಿಭಟನೆ ನಡೆಸಿತು.

ರಾಜ್ಯ ಸಂಘಟನೆಯ ಕರೆಯ ಮೇರೆಗೆ ನಗರ ಶಾಸಕ ಡಾ. ಶಿವರಾಜ ಪಾಟೀಲ್ ಮತ್ತು ಗ್ರಾಮೀಣ ಶಾಸಕ ಬಸವನಗೌಡ ದದ್ದಲ್ ಅವರ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಯಿತು. ನಾಲ್ಕು ವರ್ಷದ ಮೇಲ್ಪಟ್ಟು ಮಕ್ಕಳು ಶಾಲೆಗೆ ಹೋದರೆ, ಇದರಿಂದ ಅವರಿಗೆ ಮಾನಸಿಕ ಮತ್ತು ಬೌದ್ಧಿಕ ಅಭಿವೃದ್ಧಿಯಲ್ಲಿ ಬಾರಿ ತೊಂದರೆಯಾಗುತ್ತದೆ. ಅಲ್ಲದೆ ಮಕ್ಕಳಲ್ಲಿ ಪೌಷ್ಟಿಕ ಅಂಶ ವೃದ್ಧಿಸುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ಅಂಗನವಾಡಿ ಕೇಂದ್ರಗಳು ಮುಚ್ಚಬೇಕಾಗುತ್ತದೆ. ಈ ಹಿನ್ನೆಲೆ ನಿರ್ಧಾರ ಹಿಂಪಡೆಯುವಂತೆ ಸರಕಾರದ ಮೇಲೆ ಒತ್ತಡ ಹೇರಲು ಶಾಸಕರ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲಾಯಿತು. ಶಿಕ್ಷಣ ಇಲಾಖೆ ಆರಂಭಿಸಿ ರೂಪಿಸಿದ ಎಲ್‌ಕೆಜಿ, ಯುಕೆಜಿ ದಾಖಲಾದ ಮಕ್ಕಳ ಹೆಸರುಗಳು ಐಸಿಡಿಎಸ್‌ನಲ್ಲಿ ಈಗಾಗಲೆ ದಾಖಲಿಸಲಾಗಿದೆ. ಎರಡು ಕಡೆ ಹೆಸರು ದಾಖಲಿಸಲಾಗಿರುತ್ತದೆ. ವರ್ಣಮಾಲೆ ಕಲಿಕೆಯಲ್ಲಿ ಮಕ್ಕಳ ಪೌಷ್ಟಿಕ ಆಹಾರದ ಬಗ್ಗೆ ಗಮನ ನೀಡದಿರುವುದು, ಅವರ ಆರೋಗ್ಯ ಮತ್ತು ಬೌದ್ಧಿಕ ಬೆಳವಣಿಗೆ ಮೇಲೆ ವ್ಯತಿರಿಕ್ತ ಪರಿಣಾಮಕ್ಕೆ ದಾರಿ ಮಾಡುತ್ತದೆ ಎಂದು ಎಚ್ಚರಿಸಲಾಯಿತು. ಈ ಹಿನ್ನೆಲೆ ಸರಕಾರ ತನ್ನ ಪೂರ್ವ ನಿರ್ಧಾರವನ್ನು ತಕ್ಷಣವೇ ಹಿಂಪಡೆದು ಅಂಗನವಾಡಿ ಕೇಂದ್ರ ಬಲಪಡಿಸುವಂತೆ ಒತ್ತಾಯಿಸಲಾಯಿತು. ಈ ಪ್ರತಿಭಟನೆಯಲ್ಲಿ ಪದ್ಮಾ, ವರಲಕ್ಷ್ಮಿ ಸೇರಿದಂತೆ ಅಂಗನವಾಡಿ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕೊಪ್ಪಳ ಜಿಲ್ಲಾದ್ಯಂತ ಮುಂದುವರಿದ ಮಳೆ ಗುಂಡೂರು ಹಳ್ಳ ಪುಲ್ ಕಾರಟಗಿ ತಾಲೂಕು ಗುಂಡೂರು ಗ್ರಾಮದಲ್ಲಿ ಸುರಿದ ಭಾರಿ ಮಳೆಗೆ ಹಳ್ಳ ತುಂಬಿ ಹರಿಯುತ್ತಿದೆ. ರಸ್ತೆಗೆ ನಿರ್ಮಿಸಿದ ಬ್ರಿಡ್ಜ್ ಮುಳುಗಡೆಗೆ ಕೆಲವೆ ಅಡಿ ಬಾಕಿ ಇದೆ. ಇದರಿಂದ ಲಕ್ಷ್ಮೀ ಕ್ಯಾಂಪ್-ಗುಂಡೂರು ರಸ್ತೆ ಸಂಪರ್ಕ ಸೇತುವೆ ಮುಳುಗಡೆ ಆಗುವ ಹಂತ ತಲುಪಿದೆ.

ವಿಶ್ವ ರಕ್ತದಾನಿಗಳ ದಿನ ಇಂದು

ರಾಯಚೂರು: ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆವರಣದಲ್ಲಿ ಇದೇ ಜೂ. 14ರ ಬೆಳಗ್ಗೆ 10 ಗಂಟೆಗೆ ಎನ್‌ಸಿಸಿಎನ್, ಎಸ್‌ಎಸ್‌ರೆಡ್ ರಿಬ್ಬನ್ ಕ್ಲಬ್, ರಕ್ತ ನಿಧಿ ಕೇಂದ್ರ ಹಾಗೂ ವಿವಿಧ ಸಂಘ, ಸಂಸ್ಥೆಗಳ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ವಿಶ್ವ ರಕ್ತದಾನಿಗಳ ದಿನ ಆಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಿಬೇಕೆಂದು ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣಾಧಿಕಾರಿಗಳು ಪ್ರಕಣೆಯಲ್ಲಿ ತಿಳಿಸಿದ್ದಾರೆ.

371(ಜೆ) ಮೀಸಲು ಹುನ್ನಾರ; ಪ್ರತಿಭಟನೆ

ರಾಯಚೂರು : ಕ.ಕರ್ನಾಟಕ ಭಾಗದ ಹಿಂದುಳಿವಿಕೆ ಆಧಾರದ ಮೇಲೆ 371(ಜೆ) ಕಾಯ್ದೆ ಯಾಗಿ ರೂಪಿಸಿ ಜಾರಿಗೊಳಿಸಿದ್ದರೂ ಸಮರ್ಪಕ ಜಾರಿಗೊಳ್ಳದೇ ಇರುವಾಗ ಮೀಸಲು ರದ್ದುಗೊಳಿಸುವಂತೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ ವಿರೋಧಿಸಿ ಜೂ.15 ರಂದು ಬೃಹತ್ ಪ್ರತಿಭಟನೆಗೆ ನಿರ್ಧರಿಸಲಾಗಿದೆ ಎಂದು ತಾರಾನಾಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪಾರಸಮಲ್ ಸುಖಾಣಿ ಹೇಳಿದರು. ನಗರದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಶಿಕ್ಷಣ, ಉದ್ಯೋಗದಲ್ಲಿ ಮೀಸಲು ಒದಗಿಸಲು ಅನೇಕ ಹೋರಾಟಗಳು ನಡೆದು ಮಲ್ಲಿಕಾರ್ಜುನ ಖರ್ಗೆಯವರ ಪ್ರಯತ್ನ ಫಲವಾಗಿ ದೊರಕಿದೆ. ಆದರೆ ಅನೇಕ ವಿಶ್ವವಿದ್ಯಾಲಯಗಳು ಶೇ.8 ಮೀಸಲು ನೀಡಲು ನಿರಾಕರಿಸಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿವೆ. ಬಡ್ತಿ, ಮುಂಬಡ್ತಿ ಸೇರಿದಂತೆ ಅನೇಕ ಹಂತದಲ್ಲಿ ಜಾರಿ ಸಾಧ್ಯವಾಗಿಲ್ಲ. ವೈದ್ಯಕೀಯ, ಎಂಜಿನಿರಿಂಗ್ ಪ್ರವೇಶದಲ್ಲಿ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಹೊರತು ಎಲ್ಲಾ ಹಂತದಲ್ಲಿಯೂ ಜಾರಿ ಸಾಧ್ಯವಾಗಿಲ್ಲ. ಹಸಿರು ಪ್ರತಿಷ್ಠಾನದ ಹೆಸರಿನಲ್ಲಿ ಬೇರೆ ಜಿಲ್ಲೆಗಳು ಹೋರಾಟ ನಡೆಸುತ್ತಿವೆ. ಅದರ ಹಿಂದೆ ಅನೇಕ ಕೈಗಳ ಕೆಲಸ ಮಾಡುತ್ತಿವೆ. ರಾಜ್ಯಕ್ಕೆ ಅನ್ನ, ಚಿನ್ನ, ವಿದ್ಯುತ್ ನೀಡುವ ಜಿಲ್ಲೆಯೂ ಸೇರಿದಂತೆ ಈಭಾಗದ ಹೋರಾಟದ ಶಕ್ತಿ ಪ್ರದರ್ಶಿಸಬೇಕಿದೆ. ಕಾನೂನು ಸಚಿವ ಎಚ್.ಕೆ.ಪಾಟೀಲ್ ಪತ್ರ ಬರೆದಿರುವದು ಸಹ ಗೊತ್ತಿದೆ. ಅವರು ಬರೆದಿಲ್ಲ ಎಂದು ಹೇಳುತ್ತಿದ್ದಾರೆ.

ಮಕ್ಕಳು ಲಸಿಕೆಯಿಂದ ವಂಚಿತ ಆಗಬಾರದು:ಡಿಸಿ

ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

ಕೊಪ್ಪಳ: ಜಿಲ್ಲೆಯ ಸಾರ್ವತ್ರಿಕ ಲಸಿಕೆ ಅಭಿಯಾನದಲ್ಲಿ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಆರೋಗ್ಯ ಇಲಾಖೆಯ ವಿವಿಧ ಸಮಿತಿಗಳ ಜಿಲ್ಲಾ ಮಟ್ಟದ ಸಮನ್ವಯ ಹಾಗೂ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ಮಾತನಾಡಿದರು.

ಮಗು ಹುಟ್ಟಿದಾಗಿಂದ 16 ವರ್ಷದವರೆಗೆ ನಿಗದಿತ ಅವಧಿಯಲ್ಲಿ ಲಸಿಕೆ ಕಡ್ಡಾಯವಾಗಿ ನೀಡಬೇಕು. ಲಸಿಕೆಗಳು ಪೋಲೀಯೋ, ದಡಾರ, ರುಬೆಲ್ಲಾದಂತ ಮಾರಕ ಖಾಯಿಲೆಯಿಂದ ಮಕ್ಕಳನ್ನು ರಕ್ಷಿಸುತ್ತವೆ. ಈ ಬಗ್ಗೆ ಮಗುವಿನ ಜನನದ ಸಮಯದಲ್ಲಿ ಪೋಷಕರಿಗೆ ವೈದ್ಯರು ಸೂಕ್ತ ತಿಳುವಳಿಕೆ ನೀಡಬೇಕು. ಲಸಿಕೆ ಪಡೆದ ಮಕ್ಕಳ ಸಮೀಕ್ಷೆ ಸಂದರ್ಭದಲ್ಲಿ ಲಸಿಕೆ ಪಡೆಯದ ಮಕ್ಕಳ ಮಾಹಿತಿ ದೊರೆಯುತ್ತದೆ. ಅಂತಹ ಮಕ್ಕಳು ಲಸಿಕೆಯಿಂದ ವಂಚಿತರಾಗಿರುವುದಕ್ಕೆ ಕಾರಣ ತಿಳಿದು, ಮುಂದಿನ ದಿನದಲ್ಲಿ ಅದು ಮರುಕಳಿಸದಂತೆ ಪೋಷಕರಿಗೆ ತಿಳಿಸಬೇಕು. ಜಿಲ್ಲೆಯ ಎಲ್ಲ ಶಾಲೆ, ಅಂಗನವಾಡಿ ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭಗೊಂಡಿದ್ದು, ಈ ಸಮಯದಲ್ಲಿ ಶಾಲೆಗೆ ಮಕ್ಕಳು ದಾಖಲಾಗುವಾಗ ಆ ಮಗು ಆ ಸಮಯದವರೆಗಿನ ನಿರ್ದಿಷ್ಟ ಲಸಿಕೆ ಪಡೆದಿರುವ ಕುರಿತು ಖಾತ್ರಿಪಡಿಸಿಕೊಳ್ಳಿ ಎಂದು ಸೂಚಿಸಿದರು.

ಮಗುವಿನ ಪ್ರತಿ ಲಸಿಕೆಯ ಬಗ್ಗೆ ತಾಯಿ ಕಾರ್ಡ್ ನಲ್ಲಿ ದಾಖಲು ಮಾಡಬೇಕು. ಒಂದು ವೇಳೆ ತಾಯಿ ಕಾರ್ಡ್ ಇಲ್ಲದಿದ್ದಲ್ಲಿ ಮಗು ಲಸಿಕೆ ಪಡೆದ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಪರ್ಯಾಯ ಮಾರ್ಗ, ದಾಖಲೆ ಹುಡುಕಬೇಕು. ಜಿಲ್ಲೆಯ ಯಾವ ಮಗುವೂ ಲಸಿಕೆಯಿಂದ ವಂಚಿತವಾಗದಂತೆ ಅಗತ್ಯ ಕ್ರಮ ವಹಿಸಿ ತಿಳಿಸಿದರು.

ತಾಯಿ, ಶಿಶು ಮರಣ ಪರಿಶೀಲನೆ: ಹೆರಿಗೆ ಸಂದರ್ಭ ಹಾಗೂ ಹೆರಿಗೆ ನಂತರ ತಾಯಂದಿರು ಮರಣ ಹೊಂದಲು ರಕ್ತಹೀನತೆ, ಅಧಿಕ ಹಾಗೂ ಕಡಿಮೆ ರಕ್ತದೊತ್ತಡ, ಹೆರಿಗೆ ಸಮಯದಲ್ಲಿನ ಆಘಾತದಿಂದ ಹೃದಯದ ತೊಂದರೆ ಸೇರಿದಂತೆ ಅನೇಕ ಕಾರಣಗಳಿಂದ ಮರಣ ಹೊಂದಬಹುದು. ಆದ್ದರಿಂದ ಗರ್ಭಿಣಿಯರ ಕುಟುಂಬದವರು, ಆಶಾ ಕಾರ್ಯಕರ್ತೆಯರು, ಸ್ಥಳೀಯ ಅಥವಾ ಗರ್ಭಿಣಿ ಮಹಿಳೆಯ ತಪಾಸಣೆ ಮಾಡುವ ವೈದ್ಯಾಧಿಕಾರಿಗಳು ಆರಂಭದಲ್ಲೇ ಆಕೆಯ ಆರೋಗ್ಯ ಸಮಸ್ಯೆಯನ್ನು ಗುರುತಿಸಿ, ಸೂಕ್ತ ಚಿಕತ್ಸೆ ಹಾಗೂ ಆರೈಕೆಗೆ ಶಿಫಾರಸು ಮಾಡಬೇಕು ಆಶಾ ಹಾಗೂ ವೈದ್ಯಾಧಿಕಾರಿಗಳಿಗೆ ಸೂಚನೆ .

ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆರೋಗ್ಯ ಇಲಾಖೆಯ ವಿವಿಧ ಸಮಿತಿಗಳ ಜಿಲ್ಲಾ ಮಟ್ಟದ ಸಮನ್ವಯ ಹಾಗೂ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ರಾಮರಾಜ್ಯ ಕನಸು ನನಸಾಗಿಸೋಣ

ರಾಯಚೂರು: ರಾಮರಾಜ್ಯ ಕನಸು ನನಸಾಗಿಸೋಣವೆಂದು ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನತೀರ್ಥ ಶ್ರೀಪಾದಂಗಳವರು ನುಡಿದರು.

ಬುಧವಾರ ಸಂಜೆ ನಗರದ ಉತ್ತರಾಧಿ ಮಠದಲ್ಲಿ ಅನುಗ್ರಹ ಸಂದೇಶ ನೀಡಿದರು. ಅಯೋಧ್ಯೆ ಶ್ರೀ ರಾಮಮಂದಿರ ಉದ್ಘಾಟನೆ ನಂತರ ಮೊಟ್ಟಮೊದಲ ಬಾರಿಗೆ ನಗರಕ್ಕೆ ಪುರಪ್ರವೇಶ ಹಿನ್ನೆಲೆ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಮಾತನಾಡುತ್ತಾ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣವಾಗಿದೆ ಅಂತಹ ಅಭೂತಪೂರ್ವ ಕಾರ್ಯಕ್ಕೆ ನಾವೆಲ್ಲರೂ ಸಾಕ್ಷಿಯಾಗಿರುವುದು ಅತ್ಯಂತ ಹರ್ಷದಾಯಕ ವಿಷಯವೆಂದರು. ರಾಮಮಂದಿರ ನಿರ್ಮಾಣ ದಿಂದ ಮಾತ್ರ ರಾಮರಾಜ್ಯ ಕಲ್ಪನೆ ಸಾಕಾರವಾಗುವುದಿಲ್ಲ ಬದಲಾಗಿ ನಾವೆಲ್ಲರೂ ಸದಾಚಾರಿಗಳಾಗಿ ಉತ್ತಮ ನಡೆ ನುಡಿ ಜತೆಗೆ ದೇಶ ಭಕ್ತಿ ಸನಾತನ ಹಿಂದೂ ಧರ್ಮ ಪರಿಪಾಲನೆಗೆ ಕಟಿಬದ್ಧರಾಗಿರಬೇಕೆಂದ ಅವರು ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ ಸಂಸ್ಕಾರ ತಿಳಿಪಡಿಸಬೇಕೆಂದರು. ಇಂದು ಎಲ್ಲೆಡೆ ಕ್ರೌರ್ಯ, ಅನಾಚಾರ, ವಂಚನೆ ರಾರಾಜಿಸುವ ಮೂಲಕ ರಾವಣ ರಾಜ್ಯ ತಾಂಡವವಾಡುತ್ತಿದೆ ಎಂದು ವಿಷಾಧ ವ್ಯಕ್ತಪಡಿಸಿದರು.